ಬೆಂಗಳೂರು ವಿಶ್ವವಿದ್ಯಾಲಯ

ಬೆಂಗಳೂರು

ಸಾಧನೆ

(ಸಂಯುಕ್ತ ಸಂಚಿಕೆ)

ಸಂಪುಟ 26 ಸಂಚಿಕೆ 3 ಮತ್ತು 4

27 ಸಂಚಿಕೆ 1 2 3 ಮತ್ತು 4

ಜುಲೈ–ಡಿಸೆಂಬರ್ 1997 ಮತ್ತು

ಜನವರಿ–ಡಿಸೆಂಬರ್ 1998

ಸಾಧನೆ

(ಸಂಯುಕ್ತ ಸಂಚಿಕೆ : ಸಂಪುಟ - 26 ಮತ್ತು 27)

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು - 560 056

Sadhane : Kannada Quarterly of Bangalore Univeristy, Bangalore
Vol 26, Nos. 3 & 4 (1997), & Vol 27, Nos. 1, 2, 3, 4 (1998) Pp. 114 + iv

ಸಾಂಸ್ಥಿಕ ಅಜೀವ ಸದಸ್ಯತ್ವ	:	ರೂ. 500-00
ಅಜೀವ ಸದಸ್ಯತ್ವ	:	ರೂ. 300-00
ವಾರ್ಷಿಕ ಚಂದಾ	:	ರೂ. 50-00

ಪ್ರಕಾಶಕರು :

ಪ್ರೊ. ಹು.ಕಾ. ಜಯದೇವ್ ೨೬:೧೦:೨೦೦೦

ನಿರ್ದೇಶಕರು, ಪ್ರಸಾರಾಂಗ

ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು - 560 056

ಮುದ್ರಕರು :

ಎಸ್.ಎಂ. ಹೊನ್ನಪ್ಪ

ನಿರ್ದೇಶಕ (ಕಾರ್ಯನಿರ್ವಾಹಕ)

ವಿಶ್ವವಿದ್ಯಾಲಯ ಮುದ್ರಣಾಲಯ

ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು - 560 056

ಪರಿವಿಡಿ

ಕಾನೂರು ಹೆಗ್ಗಡಿತಿ

ಡಾ|| ಕೆ.ಆರ್. ದುರ್ಗಾದಾಸ್

ಪುಟ್ಟಪ್ಪನವರ ಕಾನೂರು ಹೆಗ್ಗಡಿತಿ ಬೃಹತ್ ಕಾದಂಬರಿ. ಗಾತ್ರ ಮಾತ್ರದಿಂದಲ್ಲ, ಅಂತಸ್ಸತ್ವ, ಜೀವನ ವೈಶಾಲ್ಯ, ವಿವಿಧ ಗುಣ ಸ್ವಭಾವಗಳ ಪಾತ್ರಗಳು, ಮನುಷ್ಯನ ಸಣ್ಣತನ, ದೊಡ್ಡತನ, ಹೀಗೆ ಬದುಕಿನ ಎಲ್ಲಾ ಮಗ್ಗಲುಗಳ ವಸ್ತುನಿಷ್ಠ ದಾಖಲೆಯನ್ನೊಳಗೊಂಡ ಅಪೂರ್ವತೆ ಈ ಕಾದಂಬರಿಗೆ ದಕ್ಕಿದೆ. ಅಷ್ಟೇ ಅಲ್ಲ, ಒಂದು ಪ್ರದೇಶದ ಚೇತನಾಚೇತನ ವಸ್ತು ಸಂದೋಹ, ಪ್ರಕೃತಿ, ಜೀವರಾಶಿ, ಪಶುಪಕ್ಷಿ ಪ್ರಾಣಿಗಳೂ ಮನುಷ್ಯನಷ್ಟೇ ಮುಖ್ಯತಮ ಚೇತನಗಳಾಗಿ ಕನ್ನಡ ಕಾದಂಬರೀ ಪ್ರಪಂಚಕ್ಕೆ ಪ್ರವೇಶ ಪಡೆದದ್ದು ಈ ಕಾದಂಬರಿ ಮೂಲಕವೇ. ಕನ್ನಡದಲ್ಲಿ ಬೃಹತ್ ಪ್ರಾದೇಶಿಕ ಕಾದಂಬರಿಗಳ ಸೃಷ್ಟಿಗೆ ಕಾನೂರು ಹೆಗ್ಗಡಿತಿ ಲಾಲೀ ಹಾಡಿತು ಎಂಬುದನ್ನು ನೆನೆದರೆ ಅದರ ಪ್ರಭಾವಲಯ ಎಷ್ಟೊಂದು ದಟ್ಟವಾದುದು ಎಂಬುದರ ಅರಿವಾದೀತು.*

ಕಾವ್ಯದಲ್ಲಿ ಅವ್ಯಕ್ತವಾಗಿ ಸಾಂಕೇತಿಕವಾಗಿದ್ದ ಕುವೆಂಪು ವಿಚಾರಧಾರೆ ಕಾದಂಬರಿಗಳಲ್ಲಿ ಬಿಚ್ಚಿ ಬಯಲಾಗಿ ಮತ್ತು ಸ್ಫುಟವಾಗಿ ಸಾಕಾರಗೊಂಡದ್ದು, ಮಹಾ ಕವಿಯಾಗಿದ್ದ ಪುಟ್ಟಪ್ಪ ನವರನ್ನು ಶ್ರೇಷ್ಠಕಾದಂಬರಿಕಾರನ ಸ್ಥಾನಕ್ಕೇರಿಸಿತು. ಅವರ ಎರಡೂ ಕಾದಂಬರಿಗಳು ಗದ್ಯ ಮಹಾಕಾವ್ಯಗಳೆಂದೂ ಕೀರ್ತಿಸಲ್ಪಟ್ಟಿವೆ. 'ಕಾನೂರು ಹೆಗ್ಗಡಿತಿ' ಕಾದಂಬರಿಯ ಅನನ್ಯತೆಯನ್ನು ಸರಿಯಾಗಿಯೇ ಗುರುತಿಸಿದ ಕೀರ್ತಿನಾಥ ಕುರ್ತಕೋಟಿಯವರು, 'ಈ ಕಾದಂಬರಿಯಲ್ಲಿ ಉಕ್ಕುವ ಚೈತನ್ಯ ಬೇರೆ ಯಾವ ಕನ್ನಡ ಕಾದಂಬರಿಯಲ್ಲಿಯೂ ಇಲ್ಲ. ಇಲ್ಲಿಯ ವ್ಯಕ್ತಿಗಳನ್ನು ನಿಜ ಜೀವನದಲ್ಲಿ ಅಕಸ್ಮಾತ್ತಾಗಿ ಭೆಟ್ಟಿಯಾದರೆ ಕಾನೂರು, ಮುತ್ತಳ್ಳಿಗಳ ಕ್ಷೇಮ ಸಮಾಚಾರವನ್ನು ಕೇಳಬೇಕೆಂದು ಮನಸ್ಸಾಗುತ್ತದೆ' - ಎಂದು ಉದ್ಗಾರವೆತ್ತಿದ್ದಾರೆ.[1] ಕುವೆಂಪು ಅವರ ಕಾದಂಬರಿ ಗಳ ಕುರಿತು ಇಂಥ ಮೆಚ್ಚುಗೆಗಳು ಒಂದು ಕಡೆಗಿದ್ದರೆ, ಸಹಾನುಭೂತಿಯಿಲ್ಲದ ಗೊಣ ಗಾಟಗಳೂ ಮತ್ತೊಂದು ನಿಟ್ಟಿನಿಂದ ಬಂದಿವೆ. ಡಾ|| ಯು.ಆರ್. ಅನಂತಮೂರ್ತಿಯವರು ಕಾನೂರು ಹೆಗ್ಗಡಿತಿ ಕುರಿತು ತಳೆದ ಧೋರಣೆ ಹೀಗಿದೆ :

ಅಡಿ ಟಿಪ್ಪಣಿ :-

* ಕಾರಂತರ ಮರಳಿ ಮಣ್ಣಿಗೆ (1942), ರಾವ್ ಬಹದ್ದೂರರ ಗ್ರಾಮಾಯಣ (1957), ಮಿರ್ಜಿ ಅಣ್ಣಾರಾಯರ 'ನಿಸರ್ಗ'ದಂತಹ ಕಾದಂಬರಿಗಳ - ಸೃಷ್ಟಿಗೆ 'ಕಾನೂರು ಹೆಗ್ಗಡಿತಿ' ಪ್ರೇರಣೆ ಯಾದಂತಿದೆ.

1. ಕೀರ್ತಿನಾಥ ಕುರ್ತಕೋಟಿ, ಯುಗಧರ್ಮ ಹಾಗೂ ಸಾಹಿತ್ಯದರ್ಶನ (1982), ಪುಟ 310.

ಕುವೆಂಪು ಅವರ ಪ್ರತಿಭೆ ತಾತ್ವಿಕ, ನೈತಿಕ ಉದ್ದೇಶಗಳುಳ್ಳ ಶಿಷ್ಟಪ್ರಜ್ಞೆಯ ಸಂಸ್ಕೃತಿ ಪ್ರಪಂಚ ಮತ್ತು ಉದ್ದೇಶ ರಹಿತವೂ ಜೀವಂತವೂ ಆದ ಅನುಭವ ವಿವರಗಳ ಪ್ರಪಂಚಗಳಲ್ಲಿ ಬೇರೆ ಬೇರೆಯಾಗಿಯೇ ನಿಂತು ಕೆಲಸ ಮಾಡುತ್ತದೆ. ಒಂದನ್ನಿನ್ನೊಂದರ ಜೊತೆ ಸೃಷ್ಟ್ಯಾತ್ಮಕವಾದ ರೀತಿಯಲ್ಲಿ ತೊಡಗಿಸುವುದಿಲ್ಲ ಎನ್ನಿಸುತ್ತದೆ. ತಮ್ಮ ಶಿಷ್ಟಪ್ರಜ್ಞೆಯ ಎಲ್ಲ ಉದಾತ್ತ ಭಾವನೆಗಳನ್ನು ಒಟ್ಟುಗೂಡಿಸಿ ಸೃಷ್ಟಿಸುವ ಹೂವಯ್ಯನ ದೃಷ್ಟಿ ಕಾದಂಬರಿಯಲ್ಲಿ ಗಟ್ಟಿಯಾಗುವುದಿಲ್ಲ. ಯಾವುದನ್ನು ಕಾದಂಬರಿಯಲ್ಲಿ ಹೂವಯ್ಯನ ದೃಷ್ಟಿಯಿಂದ ನೋಡಿದಾಗ ನೈತಿಕವಾಗಿ ತಿರಸ್ಕರಿಸುತ್ತಾರೋ ಆ ವಿಷಯಗಳನ್ನೇ ಕಲಾವಿದರಾಗಿ ಸ್ವೀಕರಿಸಿ ಬಹಳ ಖುಷಿಯಿಂದ ದಟ್ಟ ವಿವರಗಳಲ್ಲಿ ಸೃಷ್ಟಿಸುತ್ತಾರೆ.[2]

ಮಾತಿನಲ್ಲಿ ಜಾಣ ಮಾತ್ರನಾದವನು ಸುಳ್ಳುಗಳನ್ನು ಹೇಗೆ ಮನಮೋಹಕವಾಗಿ ಆಡಿ ತೋರಿಸುತ್ತ ಸತ್ಯವನ್ನು ಹೇಗೆ ಮುಚ್ಚಿ ಹಾಕಲು ಪ್ರಯತ್ನಿಸುತ್ತಾನೆ ಎಂಬುದಕ್ಕೆ ಮೇಲಿನ ಸಾಲುಗಳು ನಿದರ್ಶನಗಳಾಗಿವೆ. ಅನಂತಮೂರ್ತಿಯವರಿಗೆ ಕುವೆಂಪು ಕವಿಯೂ ಅಲ್ಲ, ಕಾದಂಬರಿಕಾರರಂತೂ ಮೊದಲೇ ಅಲ್ಲ.* 'ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು' ಎಂಬಂತೆ ದೋಷಗಳನ್ನೇ ಹುಡುಕುವ ಹಾದಿ ಹಿಡಿದರೂ ಅಲ್ಲಿಯೂ ಯಶಸ್ವಿಯಾಗಿಲ್ಲ. ಕುವೆಂಪು ತಾತ್ವಿಕತೆ ಮತ್ತು ಕಲಾತ್ಮಕತೆ ಬೇರೆ ಬೇರೆಯಾಗಿ ನಿಲ್ಲುತ್ತದೆ ಎಂದು ಹೇಳುವಾಗಲೂ ತಮ್ಮ ಗ್ರಹಿಕೆಯನ್ನು ನಿಜಗೊಳಿಸುವುದಿಲ್ಲ. ಏಕೆಂದರೆ ಕನ್ನಡದ ಯಾವ ಕಾದಂಬರಿಗಳಲ್ಲೂ ಕಾಣದ ಪ್ರಖರ ವೈಚಾರಿಕತೆ ಕುವೆಂಪು ಕಾದಂಬರಿಗಳಲ್ಲಿರುವುದನ್ನು ಕಾಣಬಹುದು. ಯಾವ ಸನ್ನಿವೇಶವನ್ನೂ ಕೇವಲ 'ಕಲೆಗಾಗಿ ಕಲೆ' ಎಂಬ ಧೋರಣೆ ಮೇಲೆ ಕುವೆಂಪು ಚಿತ್ರಿಸಿಲ್ಲ. ಕೆಲವು ಸಂದರ್ಭಗಳ ಚಿತ್ರಣದಲ್ಲಿಯಂತೂ ಓದುಗರು ಭಾವ ಪರವಶರಾಗಿ ನಿಜದ ಆಶಯವನ್ನೇ ಮರೆಯಬಹುದು ಎಂಬ ಅನುಮಾನದಿಂದಲೋ ಅಥವಾ ಸನ್ನಿವೇಶವೇ ಅಂಥ ಪ್ರತಿಕ್ರಿಯೆಯನ್ನು ಅಪೇಕ್ಷಿಸುತ್ತದೆಯೋ ಏನೋ ಕುವೆಂಪು ಅಗತ್ಯವಿರುವೆಡೆಯಲ್ಲೆಲ್ಲಾ ತಮ್ಮ ವೈಚಾರಿಕತೆಯ ಮೊನಚಿನಿಂದ ಓದುಗರನ್ನು ಎಚ್ಚರಗೊಳಿಸುತ್ತಲೇ ಸಾಗುತ್ತಾರೆ. ಭಾವ-ಬುದ್ಧಿಗಳ ವಿದ್ಯುದಾಲಿಂಗನವನ್ನು ಕುವೆಂಪು ಕಾವ್ಯದಲ್ಲಿ ಎಂತೋ ಅಂತೇ ಕಾದಂಬರಿಗಳಲ್ಲೂ ಕಾಣಲು ಸಾಧ್ಯ. ಇದು ಅನಂತ ಮೂರ್ತಿಯವರ ದೃಷ್ಟಿಗೆ ಗೋಚರವಾಗದಿರುವುದು ಸೋಜಿಗ.

---

2. ಅನಂತಮೂರ್ತಿ. ಯು.ಆರ್., ಪ್ರಜ್ಞೆ ಮತ್ತು ಪರಿಸರ, ಪುಟ. 169.

* ಕುವೆಂಪು ಕಾವ್ಯ ತೀರಾ ಅಮೂರ್ತವೆಂದೂ, ಕಾದಂಬರಿ ಅತಿ ಮೂರ್ತವೆಂದೂ ಅನ್ನಿಸುವುದಿಲ್ಲವೇ? ನೋಡಿ : ಪ್ರಜ್ಞೆ ಮತ್ತು ಪರಿಸರ - ಪುಟ 167.

ಕಾನೂರು ಹೆಗ್ಗಡಿತಿ ಕುರಿತು ಬಂದ ತಪ್ಪು ವ್ಯಾಖ್ಯಾನಗಳಲ್ಲಿ ಎಂ.ಜಿ. ಕೃಷ್ಣಮೂರ್ತಿ ಮತ್ತು ಗಿರಡ್ಡಿ ಗೋವಿಂದರಾಜ ಅವರ ಅಭಿಪ್ರಾಯಗಳೂ ಸೇರಿವೆ. ಇವರೆಲ್ಲರೂ ಹೂವಯ್ಯ ಪಾತ್ರದ ಕಡೆ ಬೊಟ್ಟುಮಾಡಿ ಈ ಪಾತ್ರದ ದೌರ್ಬಲ್ಯದಿಂದಾಗಿ ಕಾದಂಬರಿ ದುರ್ಬಲವಾಗಿದೆ ಎನ್ನುತ್ತಾರೆ. ಈ ದೌರ್ಬಲ್ಯ ಹೂವಯ್ಯ ಪಾತ್ರದ್ದೋ, ಅದನ್ನು ಅರ್ಥ ಮಾಡಿಕೊಳ್ಳುವಲ್ಲಿ ಸೋತು ಹೋದ ವಿಮರ್ಶಕರದ್ದೋ ಎಂಬುದನ್ನು ವಿ.ಎಂ. ಇನಾಂದಾರ್ ಮತ್ತು ಡಿ.ಎಸ್. ನಾಗಭೂಷಣರು ಸಮರ್ಥವಾಗಿ ವಿವರಿಸಿದ್ದಾರೆ.[3]

ಕುವೆಂಪು ಸಾಹಿತ್ಯದ ನೆಲೆಗಳನ್ನು ಅರ್ಥಮಾಡಿಕೊಳ್ಳದೇ ಕಲಾಕೃತಿಗಳ ಮು ಲಕ ಅವರು ಕಂಡರಿಸಿರುವ ಬದುಕು ಮತ್ತು ಪ್ರತಿಪಾದಿಸಿದ ಜೀವನ ಮೌಲ್ಯಗಳನ್ನು ಗ್ರಹಿಸುವ ದು ಕಷ್ಟವೇ. ಕುವೆಂಪು ಅವರ ಸಾಹಿತ್ಯವನ್ನು ಕಟ್ಟಿರುವುದು 'ಧ್ಯಾನದಲ್ಲಿ ದಕ್ಕಿರುವ ಸೃಷ್ಟಿಶೀಲ ೬'[4] ಎಂಬುದು ನಿಜವಾದರೂ, ಅವರ ಕಾದಂಬರಿಗಳಲ್ಲಿ ಬದುಕಿನ ಬಗೆಗಿನ ಕಟ್ಟೆಚ್ಚರ - ವೈಚಾರಿಕತೆಯೂ ಈ ಧ್ಯಾನದ ಜೊತೆಗೂಡಿಯೇ ಮೈ ಪಡೆದುಕೊಂಡಿರುವುದಕ್ಕೆ ಹಲವಾರು ನಿದರ್ಶನಗಳಿವೆ. ಮನುಷ್ಯ ಬದುಕನ್ನು ಸುತ್ತುವರೆದಿರುವ ಅಜ್ಞಾತ ಕಂದಾಚಾರಗಳ ಲಾಭ ಪಡೆದು, ಮೈದಣಿಯದೇ ಬದುಕ ಬಯಸುವ ಪುರೋಹಿತಶಾಹಿ ಜಾತಿ ವ್ಯವಸ್ಥೆಯಿಂದಾಗಿ ಕಮರಿ ಹೋಗುತ್ತಿರುವ ಮಾನವ ಸಂಬಂಧಗಳು, ಬಡತನದಿಂದಾಗಿ ಕಳ್ಳರಾಗಬೇಕಾಗಿ ಬಂದ ಪರಿಸ್ಥಿತಿ ಮತ್ತು ದುಃಸ್ಥಿತಿಗಳನ್ನು ಕುವೆಂಪು ಕಟ್ಟಿಕೊಡುವಾಗ ಗುರಿ ಒಂದೇ - ಅದು ಮನುಷ್ಯ ಬದುಕನ್ನು ಉತ್ತಮ ಪಡಿಸುವುದು.

ಈ ಹಿನ್ನೆಲೆಯಲ್ಲಿ ಮಾನವ ಬದುಕಿಗೆ ಅಡ್ಡಿಯಾಗಿರುವ ಶಕ್ತಿಗಳನ್ನು ದುರ್ಬಲಗೊಳಿಸುವುದು ಇಲ್ಲವೇ ನಾಶ ಪಡಿಸುವುದು ಕಾದಂಬರಿಯ ಕೇಂದ್ರ ಪ್ರಜ್ಞೆಯಾಗಿಯೇ ಬರುತ್ತದೆ. ಇದರ ಉಸ್ತುವಾರಿಕೆಯ ಸಂಕೇತವಾಗಿ ಹೂವಯ್ಯನನ್ನು ಅಣಿಗೊಳಿಸಲಾಗಿದೆ ಎಂಬಂತೆ ಕಂಡುಬಂದರೂ ಕಾದಂಬರಿಯ ಪ್ರತಿಯೊಂದು ಘಟನೆಗಳೂ ಕಾರ್ಯಕಾರಣ ಸಂಬಂಧಗಳ ಅನಿವಾರ್ಯ ಪರಿಣಾಮಗಳಾಗಿ ಚಿತ್ರಣಗೊಂಡಿವೆ. ಚಂದ್ರೇಗೌಡರ ಕ್ರೌರ್ಯಕ್ಕೆ ಸುಬ್ಬಮ್ಮನಂತಹ ಬಡಪಾಯಿಗಳು ಬಲಿಪಶುಗಳಾದರೆ, ಹೂವಯ್ಯನಂಥವರು ಪರಿಸ್ಥಿತಿಗಳಿಗೆ ಇದಿರಾಗಿ ನಿಲ್ಲುವ, ಸಂಯಮದಿಂದ ಬಂದುದನ್ನೆಲ್ಲ ಸ್ವೀಕರಿಸುವ ಚಲದಂಕರಾಗುತ್ತಾರೆ.

---

3. (i) ಇನಾಂದಾರ್. ವಿ.ಎಂ., ಕುವೆಂಪು ಕಾದಂಬರಿಗಳು (1979), ಪುಟ 24-30.
   (ii) ನಾಗಭೂಷಣ. ಡಿ.ಎಸ್., ಗುತ್ತಿ - ಹೂವಯ್ಯ, ವಿಭಿನ್ನ ದೃಷ್ಟಿಕೋನಗಳು, ಕನ್ನಡದ ಕೆಲವು ಪ್ರಮುಖ ಕಾದಂಬರಿಗಳು. ಪು. 135.
4. ಅದೇ ಪುಟ 136.

ಪುರೋಹಿತಶಾಹಿಯ ಪ್ರತಿನಿಧಿಯಾಗಿ ಬರುವ 'ವೆಂಕಪ್ಪಯ್ಯ ಜೋಯಿಸ'ರನ್ನು 'ತೆಳ್ಳಗೆ ಉದ್ದವಾಗಿದ್ದು ಎಡಗಣ್ಣು ಹೂ ಕೂತು ಕುರುಡಾಗಿದ್ದರೆ'ಂದು ಚಿತ್ರಿಸಿದರೆ, ಭೂಮಾಲೀಕರಾಗಿ ಬರುವ 'ಚಂದ್ರೇಗೌಡ'ರನ್ನು 'ಸಾಹುಕಾರರ ಕಿವಿಗಳೆರಡೂ ಸೋರಿ ಸೋರಿ ಮಂದವಾಗಿದ್ದವು. ಆದ್ದರಿಂದ ಸದಾ ಮದ್ದಿನೆಣ್ಣೆ ಹಾಕಿ ಹತ್ತಿ ಇಡುತ್ತಿದ್ದುದು ಅವರ ದೈನಂದಿನ ಕಾರ್ಯ ಕ್ರಮವಾಗಿತ್ತು' - ಎಂದು ಕುವೆಂಪು ವರ್ಣಿಸುತ್ತಾರೆ. ಪುರೋಹಿತ ಮತ್ತು ಭೂಮಾಲೀಕ - ಇಬ್ಬರೂ ಸಮಾಜದ ಜೋಡೀ ಶತ್ರುಗಳು ಎಂಬುದನ್ನು ಕುವೆಂಪು ಗ್ರಹಿಸಿರುವುದರಿಂದಲೇ ಆ ಎರಡೂ ಶಕ್ತಿಗಳನ್ನು ಹಾಗೆ ಒಂದಕ್ಕೆ ಕುರುಡು ಮತ್ತೊಂದಕ್ಕೆ ಕಿವುಡು - ಎಂದು ಸಾಂಕೇತಿಕ ವಾಗಿ ಚಿತ್ರಿಸಿದ್ದು. ಇಲ್ಲಿ ಬ್ರಾಹ್ಮಣರನ್ನಾಗಲೀ ಅಥವಾ ಮತ್ತಾವುದೇ ಜಾತಿಯನ್ನಾಗಲೀ ವಿರೋಧಿಸುತ್ತಿಲ್ಲ. ಮನುಷ್ಯ ಬದುಕಿಗೆ ಅಡ್ಡಿಯಾಗಿರುವ ದುಷ್ಟಶಕ್ತಿಗಳನ್ನು ಅನಾವರಣ ಗೊಳಿಸುವಲ್ಲಿ 'ಇವ ತನ್ನವ, ಅವ ಬೇರೆಯವ' ಎಂಬ ಯಾವ ತಾರತಮ್ಯಕ್ಕೂ ಸಿಲುಕದೇ ಮಾನವತೆಗೆ ಘನತೆ ತಂದಿದ್ದಾರೆ. ಏಕೆಂದರೆ ಕಾದಂಬರಿಯಲ್ಲಿ ಕೆಡುಕಿನ ಶಕ್ತಿಯಾಗಿ ರೂಪು ಗೊಂಡವರಲ್ಲಿ ಬ್ರಾಹ್ಮಣ ವೆಂಕಪ್ಪಯ್ಯ ಜೋಯಿಸರಿಗಿಂತಲೂ ಹೆಚ್ಚು ಕ್ರೂರವಾಗಿ ಚಿತ್ರಣ ಗೊಂಡದ್ದು ಚಂದ್ರಯ್ಯಗೌಡರ ವ್ಯಕ್ತಿತ್ವವೇ. ಸೇರೆಗಾರರ ಕಾಮಕ್ಕೆ ಬಲಿಯಾಗುವ ಸುಬ್ಬಮ್ಮ ಹೆಗ್ಗಡಿತಿ ಚಂದ್ರೇಗೌಡರ ಹೆಂಡತಿ. ಕಾದಂಬರಿಕಾರ ತನ್ನ ಜಾತಿಯಲ್ಲಿನ ದುಷ್ಟತನ, ಹಾದರ ಗಳಂತಹ ವಿಷಯಗಳನ್ನು ಮುಚ್ಚುಮರೆಯಿಲ್ಲದೆ ಬಿಚ್ಚಿ ಬಯಲಿಗೆ ಇಟ್ಟಿದ್ದು ಕುವೆಂಪು ಅವರನ್ನು ಹೊರತುಪಡಿಸಿದರೆ ಮತ್ತಾವ ಕನ್ನಡ ಕಾದಂಬರಿಕಾರರಲ್ಲೂ ಈ ಬಗೆಯ ಧೋರಣೆ ಕಂಡು ಬರುವುದಿಲ್ಲ.?

ವೆಂಕಪ್ಪ ಜೋಯಿಸರು ಕಾನೂರಿನ ಮೇಲೆ ಅದೂ ಚಂದ್ರೇಗೌಡರಂಥಾ ಪ್ರತಿಷ್ಠಿತ ಕುಳಗಳ ಮೇಲೆ ಬಲವಾದ ಹಿಡಿತ ಹೊಂದಿದ್ದು, ಅಣ್ಣಯ್ಯಗೌಡರು ಸಾಲ ಕೇಳುವುದನ್ನು ವಿರೋಧಿಸುತ್ತಲೇ (ಬೇರೆಯವರಿಗೆ ದೊರಕಬಾರದು ಎಂಬ ಭಾವ) ತಾನು ಸಾಲಗಾರ ನಾಗಿರುವುದನ್ನು ತೋರಿಸಿಕೊಳ್ಳದೇ ಉಳಿಯುತ್ತಾರೆ. ಅಷ್ಟೇ ಅಲ್ಲ, ಪ್ರಸಾದದ ನೆಪದಲ್ಲಿ ಚಂದ್ರೇಗೌಡರ ಕಿಸೆಯಿಂದ ಇಪ್ಪತ್ತು ರೂಪಾಯಿ ಕಸಿಯುವುದನ್ನು ಲೇಖಕರು ಮೌನಧಾಟಿ ಯಲ್ಲಿ ವಿಡಂಬಿಸಿರುವರು. ಆದರೆ ಇಷ್ಟೆಲ್ಲವನ್ನೂ ಕಬಳಿಸುವ ಜೋಯಿಸರು ಚಂದ್ರೇಗೌಡ ರನ್ನು ಸಂಭೋಧಿಸುವ ರೀತಿಯನ್ನು ಸಹಜವೆಂದು ಭಾವಿಸದೇ ಆ ಕುರಿತು ಸ್ವತಃ ಲೇಖಕ ಮಾಡುವ ವ್ಯಾಖ್ಯಾನ ಹೀಗಿದೆ :

> ಗೌಡರು ಜೋಯಿಸರಿಗಿಂತಲೂ ಹದಿನೈದು ಇಪ್ಪತ್ತು ವರ್ಷಗಳು ಹೆಚ್ಚು ವಯಸ್ಸಿನವ ರಾಗಿದ್ದರೂ ಬ್ರಾಹ್ಮಣನು ಶೂದ್ರನನ್ನು ಬಹುವಚನದಲ್ಲಿ ಮಾತನಾಡಿಸುವುದು ಶಾಪಕ್ಕೆ ಸಮಾನವೆಂದೂ, ಏಕವಚನಲ್ಲಿ ಮಾತನಾಡಿಸುವುದು ಅನುಗ್ರಹಕ್ಕೆ ಸಮಾನ

> ವೆಂದೂ ಭಾವಿಸಿ ವೇದಮೂರ್ತಿಗಳೆಲ್ಲ ಮ.ರಾ.ಶ್ರೀ.ಗಳನ್ನು ಅವನು, ನೀನು, ಎಂದೇ ಸಂಭೋದಿಸುತ್ತಿದ್ದುದು ಆ ನಾಡಿನ ವಾಡಿಕೆಯಾಗಿತ್ತು (ಪೃ 73).

ಬ್ರಾಹ್ಮಣರು ತಾವು ಉಳಿದೆಲ್ಲರಿಗಿಂತಲೂ ಶ್ರೇಷ್ಠರು ಎಂಬುದನ್ನು ಸ್ಥಾಪಿಸುವ ನೆಲೆಯಲ್ಲಿ ಕಾರಣವಿಲ್ಲದೆ ಉಳಿದವರನ್ನೆಲ್ಲ ಹೇಗೆ ನಿಃಕೃಷ್ಟವಾಗಿ ಕಾಣುತ್ತಿದ್ದರು ಎಂಬುದಕ್ಕೆ ಮೇಲಿನ ಉಲ್ಲೇಖ ನಿದರ್ಶನ. ಇಂಥ ಪ್ರಶ್ನಾತೀತ ಅಧಿಕಾರ ತಮ್ಮ ಪಾಲಿಗೆ ಶಾಶ್ವತವಾಗಿ ಉಳಿಯ ಬೇಕೆಂದರೆ ಬಹುಪಾಲು ಜನರನ್ನು ಅಜ್ಞಾನದಲ್ಲಿರಿಸಬೇಕು. ಶೂದ್ರರಿಗೆ ವೇದಾಧ್ಯಯನದ ಅಧಿಕಾರವಿಲ್ಲವೆಂಬುದನ್ನು ಸಾರಿ ಶತಮಾನಗಳಿಂದಲೂ ಅವರನ್ನು ಅಜ್ಞಾನದಲ್ಲಿಯೇ ಕೊಳೆಯುವಂತೆ ಮಾಡಿ ತಮ್ಮ ಹಿತ ಸಾಧಿಸಿಕೊಂಡು ಬಂದರು. ವೆಂಕಪ್ಪಯ್ಯ ಜೋಯಿಸರು ಚಂದ್ರೇಗೌಡರಿಗೆ ಬುದ್ಧಿ ಹೇಳುವುದು ಹೀಗೆ :

> ನಾನು ಹೇಳಿದ್ದೆ ನಿನಗೆ ಮೊದಲೇ, ಈಗಿನ ವಿದ್ಯಾಭ್ಯಾಸ ಹುಡುಗರನ್ನು ಹಾಳು ಮಾಡಿಬಿಡುತ್ತದೆ ಎಂದು. ದೇವರು ದಿಂಡರು, ಭಕ್ತಿ-ಗಿಕ್ತಿ ಎಲ್ಲ ನಿರ್ನಾಮ : ಜೊತೆಗೆ ನೂರಾರು ಹವ್ಯಾಸಗಳನ್ನು ಬೇರೆ ಕಲಿತು ಬಿಡುತ್ತಾರೆ. ನಿನ್ನ ಮನೆ, ಜಮೀನು ಉಳಿಯ ಬೇಕಾದರೆ ಅವರ ಓದು ನಿಲ್ಲಿಸಿ ಮದುವೆ-ಗಿದುವೆ ಮಾಡಿ ಕೆಲಸಕ್ಕೆ ಹಚ್ಚು. ಸಂಸಾರ ತಲೆಗೆ ತಾಗಿದರೆ ಆಗ ಬುದ್ಧಿ ಬರುತ್ತದೆ. (ಪುಟ 74)

ಇಂಥ ಅನಾಗರಿಕ ಸಲಹೆಯನ್ನು ಪುರೋಹಿತರಲ್ಲದೆ ಬೇರೆ ಯಾರು ತಾನೆ ಕೊಡಲು ಸಾಧ್ಯ ವೆಂಬಂತಿದೆ ಮೇಲಿನ ಉಲ್ಲೇಖ. ಶಿಕ್ಷಣಕ್ಕೆ ವ್ಯವಸ್ಥಿತ ತಡೆಯೊಡ್ಡುವ ಇಂಥ ಪ್ರಯತ್ನಗಳು ಇತಿಹಾಸದುದ್ದಕ್ಕೂ ಮುಂದುವರೆದುಕೊಂಡು ಬಂದ ಪರಿಣಾಮವೇ ಇಡೀ ದೇಶ ಬೌದ್ಧಿಕ ದಾರಿದ್ರ್ಯಕ್ಕೆ ಗುರಿಯಾಗಲು ಕಾರಣವಾಯಿತು. ಇದರಿಂದಾಗಿಯೇ ಸುಶಿಕ್ಷಿತ ಮತ್ತು ಜ್ಞಾನಿ ಯಾದ ಹೂವಯ್ಯನ ಕುರಿತು ಜೋಯಿಸರಿಗೆ ಎಂತಹ ಭಾವವಿತ್ತು ಎಂಬುದನ್ನು ಲೇಖಕರೇ ಹೀಗೆ ವಿವರಿಸಿದ್ದಾರೆ -

> ಅವನು ತಮ್ಮ ವ್ಯಾಪಾರಕ್ಕೆ ಮೂಲಧನದಂತಿದ್ದ ಹಳ್ಳಿಗರ ಮೌಢ್ಯವನ್ನು ನಿವಾರಿಸಲು ಮಾಡುತ್ತಿದ್ದ ಪ್ರಯತ್ನವು ಜೋಯಿಸರ ಭಾಗಕ್ಕೆ ಅಸಹನೀಯವಾಗಿತ್ತು. ಅದೂ ಅಲ್ಲದೆ ಬ್ರಾಹ್ಮಣರಾದ ತಮಗಿಂತಲೂ ಶೂದ್ರನಾದ ಅವನಿಗೇ ಉಪನಿಷತ್ತು, ಭಗವದ್ಗೀತೆ ಮೊದಲಾದವುಗಳ ಪರಿಚಯವೂ, ಜ್ಞಾನವೂ ಹೆಚ್ಚಾಗಿದೆ ಎಂಬುದು ಇತರರಿಗೆ ತಿಳಿಯಲು ಸಾಮರ್ಥ್ಯವಿಲ್ಲದಿದ್ದರೂ ಜೋಯಿಸರಿಗೆ ಚೆನ್ನಾಗಿ ತಿಳಿದಿತ್ತು. ಅದರಿಂದ ಅವನ ವಿಷಯದಲ್ಲಿ ಒಂದು ತರನಾದ ಭಯವೂ ಇತ್ತು (ಪುಟ 113).

ಜೋಯಿಸರಿಗಿದ್ದ ಈ ಅಸಹನೆ ಮತ್ತು ಭಯವೇ ಹೂವಯ್ಯನ ಮೇಲಿನ ಹಗೆತನವಾಗಿ ಪರಿಣಮಿಸಿ ಏನೆಲ್ಲ ಅವಾಂತರಗಳಿಗೆ ಕಾರಣವಾಗುತ್ತದೆ.*

'ಹೂವಯ್ಯನ ದೃಷ್ಟಿಯಿಂದ, ನೈತಿಕವಾಗಿ ತಿರಸ್ಕರಿಸುವುದನ್ನೇ ಕಲಾವಿದರಾಗಿ ಕುವೆಂಪು ಸ್ವೀಕರಿಸುತ್ತಾರೆ' ಎಂಬ ಆಕ್ಷೇಪಣೆಯೂ ಹುರುಳಿಲ್ಲದ್ದು. ಹೆಂಡ, ಮಾಂಸ, ಬೇಟೆಗಳ ಜೊತೆ ತಳಕು ಹಾಕಿಕೊಂಡ ಕಾಡಿನ ಬದುಕು ತನ್ನೆಲ್ಲ ಜೀವಂತಿಕೆಯೊಂದಿಗೆ ಕಾದಂಬರಿಯಲ್ಲಿ ಪ್ರವೇಶ ಪಡೆಯಲು ಸಾಧ್ಯವಾದದ್ದು ಕುವೆಂಪು ಆ ಪರಿಸರದಿಂದಲೇ ರೂಪುಗೊಂಡವರು. ಮನುಷ್ಯನಿಗೆ ಪ್ರಾಣಿಗಳೊಂದಿಗಿನ ಬದುಕು ಅಗತ್ಯವಿರುವತನಕ, ಬೇಟೆ, ಮಾಂಸಾಹಾರಗಳ ಅಗತ್ಯ ಕುರಿತು ಆತನ ಧೋರಣೆಯೇನೂ ಬದಲಾಗಲಾರದು. ಪುರೋಹಿತರಂಥ ಬೆರಳೆಣಿಕೆಯ ಜನ, ಅದೂ ತೋರಿಕೆಗಾಗಿ ಮಾಂಸಾಹಾರವನ್ನೂ ಬಲವಂತದಿಂದ ತ್ಯಜಿಸಿದ್ದರೆ (ಇತ್ತೀಚೆಗೆ) ಅದೊಂದು ಸಾಧನೆಯಾಗಿ ಗುರುತಿಸಲ್ಪಡಬೇಕಿಲ್ಲ. ಈ ಕಾದಂಬರಿಯಲ್ಲಿ ಮೇಲು ವರ್ಗದ ಚಂದ್ರೇಗೌಡರಾದಿಯಾಗಿ ಕೆಳವರ್ಗ ಸೋಮನಂಥವರು, ಹಿರಿಯರು, ಕಿರಿಯರು, ಪುರುಷರು, ಹೆಂಗಸರು ಎಲ್ಲರೂ ಮಾಂಸಾಹಾರಿಗಳೇ. ಪುಟ್ಟಪ್ಪನವರು ಮಲೆನಾಡಿನ ಬದುಕನ್ನು ಯಥಾವತ್ತಾಗಿ ಚಿತ್ರಿಸುವಾಗಲೂ ಆನ್ವಯಿಕ ದೃಷ್ಟಿಯನ್ನು ತೋರಿದ್ದಾರೆ. 'ಚಿನ್ನಯ್ಯನ ಮೀನು ಶಿಕಾರಿ', 'ಕತ್ತಲೆ ಗಿರಿಯ ಸರುವಿನಲ್ಲಿ ಕಾಡು ಹಂದಿಯ ಬೇಟೆ' ಮುಂತಾದ ಭಾಗಗಳಲ್ಲಿ ಬೇಟೆಯನ್ನು ಸ್ವೀಕೃತ ನೆಲೆಯಲ್ಲಿ ಚಿತ್ರಿಸಿದರೆ , ಭೂತದ ಬಲಿ (ಹೋತದ ದೆಸೆಯಿಂದ) ಸಂದರ್ಭದಲ್ಲಿ ಕೊಡುವ ವಿವರಗಳು ಪ್ರಾಣಿಹತ್ಯೆಯನ್ನು ವಿರೋಧಿಸುತ್ತವೆ. ಅಂದು ಬಲಿಯಾಗಬೇಕಿದ್ದ ಹೋತ ನಿಂಗನ ಕೈಯಿಂದ ತಪ್ಪಿಸಿಕೊಂಡು ಓಡಿ ಹೂವಯ್ಯನ ಮಧ್ಯಪ್ರವೇಶಿಕೆಯಿಂದ ಜೀವ ಉಳಿಸಿ ಕೊಳ್ಳುವ ಪ್ರಸಂಗವಿದೆ. ಬೇಟೆಯನ್ನು ಮಾನವನ ಸಾಹಸ ಪ್ರವೃತ್ತಿಗಳ ನೆಲೆಯಲ್ಲಿ ಸ್ವೀಕರಿಸಿದರೆ, 'ಬಲಿ' ಪದ್ಧತಿಯನ್ನು ಮಾನವನ ಅಜ್ಞಾನ, ಅಂಧಶ್ರದ್ಧೆಗಳ ಕುರುಹೆಂದು ನಿರಾಕರಿಸುವ ಕುವೆಂಪು ಪ್ರತಿಭೆ ಯಾವುದನ್ನೂ ಕಣ್ಣುಮುಚ್ಚಿ ವರ್ಣಿಸುವುದಿಲ್ಲ ಎನ್ನಿಸುತ್ತದೆ.

ಹೆಂಡದ ವಿಷಯವೂ ಹಾಗೆಯೇ. ಒಂದು ಮಿತಿಯಲ್ಲಿ ಅದು ಅನುಕೂಲಕರವೇ. ಹೂವಯ್ಯನ ತಾಯಿ ನಾಗಮ್ಮನವರು ಹೆಂಡಕ್ಕೆ ದಾಸರಾಗದೆ ಯಾವಾಗಲೋ ಒಮ್ಮೆ ತೆಗೆದು ಕೊಳ್ಳುವ ಸಂಯಮ ತೋರಿದರೆ ಚಂದ್ರೇಗೌಡರು ಹಾಗಲ್ಲ. ಪೂರ್ಣವಾಗಿ ಹೆಂಡಕ್ಕೆ ಬಲಿ ಬೀಳುತ್ತಾರೆ. ಅದರಿಂದಾಗಿಯೇ ಆ ವ್ಯಕ್ತಿಯ ಸಮತೋಲನವೂ ತಪ್ಪಿ, ಮಾಡಬಾರದ ಕೆಲಸಗಳಿಗೆ ಪ್ರೇರೇಪಿಸಿ ಇಡೀ ಕುಟುಂಬದ ದುರಂತಕ್ಕೆ 'ಹೆಂಡ' ಒಂದು ಕಾರಣವಾಗಿ ಪರಿಣಮಿಸುತ್ತದೆ. ಆಳುಗಳಂತೂ ತಮ್ಮ ಹೊಟ್ಟೆಗೆ ಅನ್ನವಿಲ್ಲದಿದ್ದರೂ, ತಮ್ಮ ಹೆಂಡಿರು ಮಕ್ಕಳಿಗೆ

---

* ಅನಂತಮೂರ್ತಿಯಂಥವರಿಗೆ ಕುವೆಂಪು ಅವರನ್ನು ಕುರಿತು ಇದೇ ಬಗೆಯ ಅಸಹನೆ ಮತ್ತು ಭಯವಿರಬೇಕೆಂದು ನನಗೆ ಅನುಮಾನ.

ತಿನ್ನಲು ಕೂಳಿಲ್ಲದಿದ್ದರೂ ಲೆಕ್ಕಿಸದೇ ದಿನಗೂಲಿಯ ಭತ್ತವನ್ನು ಕಳ್ಳಂಗಡಿಗೆ ಸುರಿದು ಉನ್ಮತ್ತರಾಗಿ ಹಿಂತಿರುಗುತ್ತಿದ್ದರು. ಕೆಲವು ಸಾರಿ ಕತ್ತಿ, ಹಾರೆ, ಗುದ್ದಲಿ ಮೊದಲಾದ ಸಾಮಾನುಗಳನ್ನು ಕದ್ದು ತಂದು, ಹೆಂಡದಂಗಡಿಯಲ್ಲಿ ಕೊಟ್ಟು, ಕಳ್ಳು ಹೆಂಡ ಕುಡಿಯುತ್ತಿದ್ದರು (ಪುಟ. 100). ನಂಜನಂತೂ ಈ ಚಟಕ್ಕಾಗಿ ಹೆಂಡತಿಯ ಕಿವಿಯಲ್ಲಿದ್ದ ಚಿನ್ನದ ಬುಗುಡಿ ತಂದು ಹೆಂಡಕ್ಕೆ ಹಾಕುತ್ತಾನೆ. ಕೊಡಲೊಪ್ಪದ ಹೆಂಡತಿಯನ್ನು ಚೆನ್ನಾಗಿ ಹಿಂಸಿಸುತ್ತಾನೆ. ಹೆಂಡದಂಗಡಿಯ ವಾತಾವರಣವೇ ಹೇಗೆ ಭೀಭತ್ಸವಾಗಿತ್ತು ಎಂದರೆ :

> ವಾಙ್ಮಯ ಮಾತ್ರವಾಗಿದ್ದ ಅಂಗಡಿಯ ವಾತಾವರಣ ಬರಬರುತ್ತಾ ಶಬ್ದಮಯವಾಗುತ್ತಾ ಬಂದಿತು. ಇತ್ತ ಕಳ್ಳು, ಹೆಂಡಗಳು ಮಾಯವಾದಂತೆಲ್ಲ ಅತ್ತ ಮಾನವರು ಮೃಗಗಳಾಗುತ್ತಾ ಹೋದರು. ಅಶ್ಲೀಲವಾದ ಮಾತುಗಳೂ, ಬೈಗುಳಗಳೂ, ಕಾರ್ಯಗಳೂ ಸ್ವಚ್ಛಂದವಾಗಿ ಉಪಕ್ರಮವಾದವು. ಓಬಯ್ಯನೂ ಚೆನ್ನಾಗಿ ಕುಡಿದು ಹಣ್ಣಾದನು. ನಂಜನು ಉಟ್ಟಪಂಚೆಯನ್ನು ತಲೆಗೆ ಸುತ್ತಿಗೊಂಡು ವಿಕಾರವಾಗಿ ಕೇಕೆ ಹಾಕುತ್ತಾ, ಅಸಹ್ಯವಾದ ಹಾಡುಗಳನ್ನು ಒರಲುತ್ತಾ ಹೊರಬಿದ್ದನು. ಅಂಗಳದಲ್ಲಿ ಹೊಡೆದಾಟವೂ ಆರಂಭವಾಯಿತು. ಹಗಲಿನಲ್ಲಿ ಮುನಿಯಂತೆ ಮೌನವಾಗಿದ್ದ ಕಳ್ಳಿನ ಅಂಗಡಿ ಆ ರಾತ್ರಿ ನಿಶಾಚರನಂತೆ ಭಯಾನಕ ಭೀಭತ್ಸರಸಗಳಿಂದ ತುಂಬಿ ಹೋಯಿತು (ಪುಟ 102).

ಕುವೆಂಪು ಯಾವ ಸಂದರ್ಭವನ್ನೂ ಕೇವಲ 'ಕಲೆಗಾಗಿ ಕಲೆ' ಎಂಬ ದೃಷ್ಟಿಯಿಂದ ಚಿತ್ರಿಸುವುದಿಲ್ಲ ಎಂಬುದಕ್ಕೆ ಮೇಲಿನ ಉಲ್ಲೇಖಗಳು ನಿದರ್ಶನಗಳಾಗಿವೆ. ಕುವೆಂಪು ಅವರ ನೈತಿಕ ಪ್ರಜ್ಞೆ ಎಲ್ಲೂ ಕಣ್ಣು ಮುಚ್ಚಿಕೊಳ್ಳುವುದಿಲ್ಲ. ಈ ಪ್ರಜ್ಞೆಗೆ ಇದು 'ನನ್ನದು' ಅದು 'ಪರರದು' ಎಂಬ ತರತಮ ಭಾವವೂ ಇಲ್ಲ. ಹೀಗಾಗಿ ಕುವೆಂಪು ಅವರ ನೈತಿಕತೆ ಯಾವೊಂದು ಮತದ, ದೇಶದ ಸೀಮಿತ ವ್ಯಾಪ್ತಿಗೆ ಒಳಪಡದ ವಿಶ್ವಮಾನವತ್ವವನ್ನು ಪ್ರತಿನಿಧಿಸುವ ವಿಶಾಲ ದೃಷ್ಟಿಯನ್ನು ಗರ್ಭೀಕರಿಸಿಕೊಂಡಿದೆ.

ಕಾದಂಬರಿ ಕಟ್ಟಿಕೊಡುವ ಮಲೆನಾಡಿನ ಬದುಕನ್ನು, ಅಲ್ಲಿನ ಪ್ರಕೃತಿ ಚಿತ್ರಣವನ್ನು ಮನಸಾರೆ ಹೊಗಳುವ ವಿಮರ್ಶಕರು ಇಡೀ ಕಾದಂಬರಿಯಲ್ಲಿ ಅಂತರ್ಗತವಾಗಿ, ಕೊನೆ ಕೊನೆಗೆ ಸ್ಫುಟವಾಗಿ ಆಕಾರ ತಳೆದ ಕಾದಂಬರಿಕಾರನ ಜೀವನ ದರ್ಶನವನ್ನು ಗುರುತಿಸುವಲ್ಲಿ ಅಸಮರ್ಥರಾಗಿದ್ದಾರೆ ಅಥವಾ ಅರಿತರೂ ಒಪ್ಪಿಕೊಳ್ಳುವ ವಿವೇಕವನ್ನು ತೋರಿಲ್ಲ ಎನ್ನಿಸುತ್ತದೆ. ಈ ಕಾದಂಬರಿಯ ಜೀವಂತಿಕೆಯ ಕುರಿತು ಮೆಚ್ಚುಗೆಯ ಮಾತನಾಡಿರುವ ಕುರ್ತಕೋಟಿಯವರೇ 'ಕಾದಂಬರಿಯ ಉಳಿದ ಕ್ರಿಯೆಗಳಲ್ಲಿರುವ ಚಟುವಟಿಕೆ, ಚೈತನ್ಯಗಳು ಅದರ ಬೌದ್ಧಿಕತೆಯಲ್ಲಿ ಇಲ್ಲ. ಇದಕ್ಕೆ ಕಾರಣವೆಂದರೆ ಅದು ಕೇವಲ ಸುಶಿಕ್ಷಿತತೆಯಾಗಿ ತನ್ನ

ಕ್ರಿಯಾಶೀಲತೆಯನ್ನು ಕಳೆದುಕೊಂಡು ಬಿಟ್ಟಿದೆ.... ಮಲೆನಾಡಿನ ಜೀವನಕ್ಕೂ ಅವನ (ಹೂವಯ್ಯನ) ಸುಶಿಕ್ಷಿತ ಅನುಭೂತಿಗಳಿಗೂ ಸಂಬಂಧವೇ ಇಲ್ಲ. ಕೊನೆಯ ಪ್ರಕರಣದಲ್ಲಿ ಬಣ್ಣಿಸುವ ಕ್ರಾಂತಿ ಅನುಚಿತವಾಗಿದೆಯೆಂದೆನಿಸುತ್ತದೆ [5] ಎಂಬುದಾಗಿ ಅಭಿಪ್ರಾಯ ಪಡುತ್ತಾರೆ.

ಕಾದಂಬರಿಯಲ್ಲಿ ಚಿತ್ರಣಗೊಂಡಿರುವಂತೆ ಹೂವಯ್ಯ ಒಬ್ಬ ವಿದ್ಯಾವಂತ ತರುಣ. ಉಪನಿಷತ್ತು ವಿಚಾರಧಾರೆ, ರಾಮಕೃಷ್ಣ ಪರಮಹಂಸರು, ವಿವೇಕಾನಂದರಂತಹ ಭಾರತೀಯ ದಾರ್ಶನಿಕರಿಂದಷ್ಟೇ ಅಲ್ಲ, ಮ್ಯಾಥ್ಯೂ ಅರ್ನಾಲ್ಡ್, ಟಾಯನಬಿ ಅವರಂತಹ ಪಾಶ್ಚಿಮಾತ್ಯರ ವಿಚಾರಗಳಿಂದಲೂ ಪ್ರಭಾವಿತನಾಗಿದ್ದನು. ಎಲ್ಲಕ್ಕೂ ಮಿಗಿಲಾಗಿ ತಾನು ಪಡೆದ ಜ್ಞಾನದ ಸಹಾಯದಿಂದ, ತನ್ನ ಸುತ್ತಲಿನ ಜನಗಳು ಅಜ್ಞಾನದಲ್ಲಿ, ಬಡತನದಲ್ಲಿ ಬೆಂದು ಹೋಗುವುದನ್ನು ತಪ್ಪಿಸಿ ಪಾರುಗಾಣಿಸುವ ಮಹದಾಶಯವನ್ನು ತಲೆಯಲ್ಲಿ ಹೊತ್ತು ಹಳ್ಳಿಗೆ ಹಿಂತಿರುಗುತ್ತಾನೆ. ಕಾದಂಬರಿಯುದ್ದಕ್ಕೂ ಹೂವಯ್ಯ ತನ್ನ ಮಿತಿಯಲ್ಲಿ ಮೇಲಿನ ಉದ್ದೇಶಗಳನ್ನು ಕಾರ್ಯರೂಪದಲ್ಲಿ ತರಲು ಪ್ರಯತ್ನಶೀಲನಾಗುತ್ತಾನೆ. ಬುದ್ಧಜೀವನ ಪ್ರಭಾವಕ್ಕೆ ತನ್ನನ್ನು ಪೂರ್ಣವಾಗಿ ಒಡ್ಡಿಕೊಳ್ಳುವುದೂ ಕಾದಂಬರಿಯ ಸಂದರ್ಭದಲ್ಲಿ ತುಂಬ ಮಹತ್ವದ ಅಂಶವಾಗಿದೆ.* ಹತ್ತು ವರ್ಷಗಳಾದ ಮೇಲೆ ಕಾನೂರಿನ ಬದುಕು ಹೇಗೆ ಪರಿವರ್ತಿತಗೊಳ್ಳುತ್ತಿತ್ತು ಎಂದರೆ,

> ಗಟ್ಟದವರೂ ಕುರಿಮಂದೆಯಂತೆ ಬಿಡಾರಗಳನ್ನು ಕಟ್ಟಿಕೊಂಡು ಹಂದಿಗಳಂತೆ ವಾಸಮಾಡುವುದಕ್ಕೆ ಬದಲಾಗಿ ಸುವ್ಯವಸ್ಥಿತವಾದ ಸಣ್ಣ ಸಣ್ಣ ಮನೆಗಳಲ್ಲಿ ಆದಷ್ಟು ಚೊಕ್ಕಟವಾಗಿ ಬದುಕುತ್ತಿದ್ದರು. ಕಾಯಿಲೆ ಬಂದರೆ ಜೋಯಿಸರಲ್ಲಿಗೆ ಹೋಗುವುದಕ್ಕೆ ಬದಲಾಗಿ ಆಸ್ಪತ್ರೆಗೆ ಹೋಗುವುದನ್ನು ಕಲಿತಿದ್ದರು. ನಿಂಗನ ಮಗ ಪುಟ್ಟ ಸೀತೆಯ ಪ್ರಯತ್ನದಿಂದ ಅಕ್ಷರಸ್ಥನಾಗಿ ಮದುವೆಯಾಗಿ ಕೆಳಕಾನೂರಿನಲ್ಲಿ ಒಕ್ಕಲಾಗಿದ್ದನು (ಪು. 630).

ಇದು ಕಾನೂರಿನಲ್ಲಿ ಸಾಧ್ಯವಾಗಲು ಹೂವಯ್ಯ, ಸೀತೆಯಂತಹ ಪ್ರಯತ್ನವಾದಿಗಳು ಅವಿರತ ಶ್ರಮಿಸಿದರು ಎಂಬುದು ಕಾದಂಬರಿಯ ಒಡಲಲ್ಲೇ ಸೂಚಿತವಾಗಿದೆ. ಮೇಲಾಗಿ ಇದೆಲ್ಲ ಸಾಧ್ಯವಾದದ್ದು ಹತ್ತುವರ್ಷಗಳ ನಂತರದಲ್ಲಿ ಎಂಬುದನ್ನು ಗಮನಿಸಿದರೆ ಒಂದು ಪ್ರದೇಶದ ಜೀವನ ಸುಧಾರಣೆಯಲ್ಲಿ ಅದೇನು ಕಡಿಮೆ ಅವಧಿಯಲ್ಲ. ಬಹುಪಾಲು ಜನರನ್ನು ಅಜ್ಞಾನ

---

5. ಕೀರ್ತಿನಾಥ ಕುರ್ತಕೋಟಿ. ಯುಗಧರ್ಮ ಹಾಗೂ ಸಾಹಿತ್ಯ ದರ್ಶನ. ಪುಟ 309.

* ಹೂವಯ್ಯ ಬೌದ್ಧ ದೀಕ್ಷೆ ತೆಗೆದುಕೊಳ್ಳುವುದು ಕಾದಂಬರಿಯ ಸಂದರ್ಭವನ್ನು ಹಿಡಿದರೆ ಸ್ವಾತಂತ್ರ್ಯ ಪೂರ್ವದಲ್ಲಿ. ಡಾ|| ಅಂಬೇಡ್ಕರ್ ಬೌದ್ಧ ಧರ್ಮವನ್ನು ಸ್ವೀಕರಿಸಿದ್ದು 1956ರಲ್ಲಿ ಎಂಬುದು ಕುವೆಂಪು ಆಶಯಕ್ಕೆ ಒಂದು ನಿದರ್ಶನವೆನ್ನಬಹುದು.

- ಈ ಬಗೆಗೆ ಲಕ್ಷ್ಯ ಸೆಳೆದವರು - ಪ್ರೊ. ಕೆ.ಎಸ್. ಭಗವಾನ್ ಅವರು.

ದಲ್ಲಿರಿಸಿ, ದೆಯ್ಯ, ಭೂತಗಳ ನೆಪದಲ್ಲಿ ಸದಾ ಭಯವನ್ನೊಡ್ಡಿ ತನ್ನ ಹಿತ ಸಾಧನೆ ಮಾಡಿಕೊಳ್ಳುತ್ತಿರುವ ಪುರೋಹಿತಶಾಹಿ ಮತ್ತು ಬಂಡವಾಳ ಶಾಹಿಗಳ ದರ್ಪ ಅಡಗಬೇಕಾದರೆ ಎಲ್ಲರಿಗೂ ಶಿಕ್ಷಣ ದೊರಕಬೇಕು. ಶಿಕ್ಷಣದ ಮೂಲಕ ಪಡೆದು ಕೊಂಡ ಅರಿವು ಸುತ್ತಲಿನ ಮೌಢ್ಯವನ್ನು ಕಿತ್ತೊಗೆಯಲು ಸಾಧ್ಯವಾಗುವ ವಾತಾವರಣ ನಿರ್ಮಾಣಗೊಳ್ಳಬೇಕು. ಅದರ ಜೊತೆಗೆ ಸಂಕಷ್ಟದಲ್ಲಿರುವವರಿಗೆ ಸಹಾಯ ನೀಡಿ ಅಂಥವರ ಜೊತೆ ಸ್ನೇಹ, ಪ್ರೀತಿಭಾವದಿಂದ ನಡೆದುಕೊಳ್ಳಬೇಕೆಂಬುದನ್ನು ಕಾದಂಬರಿಕಾರ ಹೂವಯ್ಯನ ಪಾತ್ರದ ಮೂಲಕ ಹೇಳಲು ಪ್ರಯತ್ನಿಸಿದ್ದಾನೆ. ಆದರೆ ಇಂಥ ಪ್ರಯತ್ನಗಳು ಸಾಮೂಹಿಕ ಸಂಘಟನೆಯಿಂದ ಬಲಗೊಳ್ಳಬೇಕಾದ ಅಗತ್ಯವನ್ನು ಕಾದಂಬರಿ ಕಟ್ಟಿಕೊಡುವುದಿಲ್ಲ ಎನ್ನಿಸುತ್ತದೆ. ಕಾದಂಬರಿಕಾರ ಮಾಟ, ಮಂತ್ರ, ಪುರೋಹಿತರು, ಮತ್ತು ಭೂಮಾಲೀಕರ ವಿರುದ್ಧ ಸಮರ ಸಾರಿದಂತೆ 'ಗುರುದೇವ' ಪರಿಕಲ್ಪನೆಯ ಕುರಿತು ಸಮ್ಮತಾಭಾವ ತಾಳುತ್ತಾನೆ ಎನ್ನಿಸುತ್ತದೆ. ಈ ಮಿತಿಯನ್ನು ಗೆಲ್ಲಬೇಕಾದುದು ನಮ್ಮ ಮುಂದಿನ ಸವಾಲಾಗಿದೆ.

ನಟವರ್ಗ : ಸಾಮಾಜಿಕ ಸ್ಥಾನಮಾನ

ಬಸವರಾಜ ಡೋಣೂರು

ನಾಟಕವನ್ನು ದೃಶ್ಯ ಮತ್ತು ಶ್ರವ್ಯಕಾವ್ಯ ಎಂದು ಕರೆಯಲಾಗುತ್ತದೆ. ಈ ದೃಶ್ಯ ಕಾವ್ಯದ ಮುಖ್ಯ ವ್ಯಕ್ತಿ ನಾಟಕಕಾರನಾದರೆ ಅವನಷ್ಟೇ ಪ್ರಮುಖ ಸ್ಥಾನ ನಟನಿಗಿದೆ. ನಾಟಕ ಪ್ರೇಕ್ಷಕನನ್ನು ತಲುಪುವುದು ನಟನ ಮೂಲಕವೇ. ನಟ ವರ್ಗವನ್ನು ಹೊರತುಪಡಿಸಿದರೆ ನಾಟಕ ಪ್ರಾಯಶಃ ತನ್ನ ಅರ್ಥವನ್ನೇ ಕಳೆದುಕೊಳ್ಳುತ್ತದೆ. ನಾಟಕ ಸಾಹಿತ್ಯ ಕೃತಿಯಾಗಿ ಯಶಸ್ವಿಯಾದರೆ ಸಾಕಾಗದು ; ರಂಗದ ಮೇಲೆ ಅದು ಅಭಿನಯಿಸಲ್ಪಟ್ಟಾಗಲೇ ಅದರ ಜನ್ಮ ಕೃತಾರ್ಥವಾಗುವುದು. ಅಭಿನಯ ಕೇವಲ ನಟನ ಸೊತ್ತು. ಇಂಥ ನಟವರ್ಗ ಸಮಾಜದಲ್ಲಿ ಹೇಗೆ ಬೆಳೆದು ಬಂದಿದೆ? ನಟ ವರ್ಗದ ಸಮಸ್ಯೆಗಳನ್ನು ತಿಳಿದುಕೊಳ್ಳಲು ಈ ಪ್ರಶ್ನೆಗಳು ಸಹಾಯಕಾರಿಯಾಗುತ್ತವೆ.

ಅಭಿನಯ ಮಾನವನ ಮೂಲ ಪ್ರವೃತ್ತಿಯಲ್ಲಿಯೇ ಹುಟ್ಟಿದೆ. ಅನುಕರಣ ಜೀವಿಯಾದ ಮಾನವ ತನ್ನ ಸುತ್ತಮುತ್ತಲಿನ ಪರಿಸರವನ್ನೂ, ಇತರ ಪ್ರಾಣಿ ಪ್ರಪಂಚವನ್ನೂ ಅನುಕರಿಸುತ್ತ ತನ್ನ ನಟನಾಭಿನಯ ಪ್ರವೃತ್ತಿಯನ್ನು ಬೆಳೆಸಿಕೊಂಡು ಬಂದಿದ್ದಾನೆ. ಮಾನವ ಬರಬರುತ್ತ ಸಮಾಜ ಜೀವಿಯಾಗಿ, ಸಂಸ್ಕೃತ ಮತ್ತು ನಾಗರಿಕತೆಗಳನ್ನು ಹೊಂದುತ್ತ ಪ್ರಗತಿ ಪಥದಲ್ಲಿ ಸಾಗಿದಾಗ ಅವನು ಆಗಲೇ ಕರಗತ ಮಾಡಿಕೊಂಡಿದ್ದ ಅಭಿನಯ ಅಥವಾ ಅನುಕರಣ ಪ್ರವೃತ್ತಿ ಹೆಚ್ಚು ಹೆಚ್ಚಾಗಿ ಶಾಸ್ತ್ರೀಯವಾಗುತ್ತ ಬಂದಿತು. ಇತಿಹಾಸವನ್ನು ತೆಗೆದುಕೊಂಡಾಗ ನಾಟಕ ನಮ್ಮ ಇತಿಹಾಸದುದ್ದಕ್ಕೂ ಪ್ರಚಲಿತವಾಗಿದ್ದುದು ಗಮನಕ್ಕೆ ಬರುತ್ತದೆ. ಆದರೆ ನಟ ವರ್ಗ ಎಲ್ಲ ದೇಶ ಕಾಲಗಳಲ್ಲೂ ಶೋಷಣೆಗೆ ಒಳಗಾಗಿದೆ. ನಟರಿಗೆ ಸಾಮಾಜಿಕ ಸ್ಥಾನಮಾನವಿರಲಿಲ್ಲ. ನಟರನ್ನು ಅಸ್ಪೃಶ್ಯರಂತೆ ಮತ್ತು ನಟಿಯರನ್ನು ವೇಶ್ಯೆಯರಂತೆ ಕಾಣ ಲಾಗಿದೆ. ಈ ವರ್ಗಕ್ಕೆ ಹತ್ತಿದ ಸಾಮಾಜಿಕ ಕಳಂಕ ಯಾರಿಂದಲೂ ಕಿತ್ತೆಸೆಯಲು ಇತ್ತೀಚಿನ ದಿನಗಳವರೆಗೆ ಆಗಿರಲಿಲ್ಲ.

ಅಭಿನಯ ಅಥವಾ ನಟನಾಭಿನಯದ ಇತಿಹಾಸ ಮಾನವಜೀವಿಯಷ್ಟೇ ಪ್ರಾಚೀನ ವಾದದ್ದು. ನೃತ್ಯಾದಾಚರಣೆಯಲ್ಲಿ, ಹಾಡಿನಲ್ಲಿ, ನಂತರ ಸಂಭಾಷಣೆಯಲ್ಲಿ ಅಭಿನಯ ಕಾಣಿಸಿಕೊಂಡಿತು. ಬಹಳ ಪ್ರಾಚೀನ ನಟರ ಬಗೆಗೆ ಏನೂ ಮಾಹಿತಿ ಸಿಕ್ಕಿಲ್ಲ. ಭಾರತದಲ್ಲಿ ರಂಗ ಪರಂಪರೆ ಎಲ್ಲ ಕಾಲದಲ್ಲೂ ಇದ್ದರೂ ನಿರ್ಧಿಷ್ಟವಾಗಿ ಮಾಹಿತಿ ರೂಪದಲ್ಲಿ ನಮಗೆ ಲಭ್ಯವಾಗಿರುವುದು ಸಂಸ್ಕೃತ ನಾಟಕಗಳಲ್ಲಿ. ಆದರೆ ನಟನ ಬಗೆಗೆ ಯಾವ ಮಾಹಿತಿಯೂ ಸಿಕ್ಕಿಲ್ಲ. ಯುರೋಪಿನ ನಾಟಕಗಳಲ್ಲಿ ಅಭಿನಯಿಸಿದ ನಟರ ಬಗೆಗೆ ಮಾತ್ರ ಮಾಹಿತಿ ಸಿಗುತ್ತದೆ.

ಗ್ರೀಸ್ (ದೇಶದಲ್ಲಿಯ) ನ ನಟರು ಧಾರ್ಮಿಕ ಆಚರಣೆಗಳಲ್ಲಿ ಭಾಗವಹಿಸುತ್ತಿದ್ದ ರಲ್ಲದೆ ಅವರು ಸಮಾಜದಲ್ಲಿ ತಮ್ಮದೇ ಆದ ಗೌರವವನ್ನು ಪಡೆದುಕೊಂಡಿದ್ದರು. ಆದರೆ ರೋಮ್‌ನಲ್ಲಿ ನಟರಿಗೆ ಉನ್ನತ ಸ್ಥಾನವಿರಲಿಲ್ಲ, ಅವರದು ಕೀಳ್ತರದ್ದಾಗಿತ್ತು: ಅವರನ್ನು ಗುಲಾಮರ ವರ್ಗದಿಂದ ನೇಮಕ ಮಾಡಲಾಗುತ್ತಿತ್ತು. ಈ ಸಂದರ್ಭವು ರೋಮ್ ರಂಗ ಭೂಮಿಯ ಅವನತಿಯನ್ನು, ಶ್ರೇಷ್ಠ ದುರಂತ ಮತ್ತು ಹಾಸ್ಯ ಪ್ರಧಾನ ನಾಟಕಗಳು ಅವಸಾನ ಹೊಂದಿ ಮೂಕ ನಾಟಕ (pantomime) ಹುಟ್ಟಿಕೊಂಡಿದ್ದನ್ನು ಸೂಚಿಸುತ್ತದೆ. ಕ್ರೈಸ್ತಮತದ ಆಗಮನದಿಂದಾಗಿ ನಟರನ್ನು ಅಪರಾಧಿಗಳಂತೆ ಕಾಣಲು ಪ್ರಾರಂಭವಾಯಿತು, ಮತ್ತು ಅವರು ಕತ್ತಲೆಯಲ್ಲಿ ಮುಳುಗಿ ಹೋದರು. ಅವರ ಸ್ಥಾನವನ್ನು ಇಂದ್ರಜಾಲಿಕರು (jugglers) ಪಡೆದು ಕೊಂಡು ಜಾತ್ರೆಗಳಲ್ಲಿಯ ಮತ್ತು ದೊಡ್ಡ ಪಟ್ಟಣಗಳಲ್ಲಿಯ ಜನರನ್ನು ರಂಜಿಸತೊಡಗಿದರು. ಆದರೆ ಮಧ್ಯಯುಗದ ನಟರು ಸಮಾಜದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡರಲ್ಲದೆ ದರ್ಬಾರದಲ್ಲಿ ಹಾಗೂ ಕುಲೀನರ ಮನೆಗಳಲ್ಲಿ ಅವರನ್ನು ಸ್ವಾಗತಿಸಲಾಯಿತು. ಯುರೋಪಿನಲ್ಲಿ ರಂಗಭೂಮಿಯ ಪುನರುತ್ಥಾನದ ಕಾಲ ಆರಂಭವಾದಾಗ ನಟರು ಹವ್ಯಾಸಿ ತಂಡದವರಿಗೆ ಧಾರ್ಮಿಕ ನಾಟಕಗಳನ್ನು ಅಭಿನಯಿಸಲು ಸಹಾಯ ಮಾಡಿದರು.

ಗ್ರೀಕ್ ನಾಟಕಗಳಲ್ಲಿ ಮಹಿಳೆಯರು ಅಭಿನಯಿಸಲಿಲ್ಲ: ರೋಮ್‌ನ ನಾಟಕ ಗಳಲ್ಲಿ ನೀತಿಭ್ರಷ್ಟರಾದ ಮಹಿಳೆಯರು ಮಾತ್ರ ಅಭಿನಯಿಸಿದರು. ಮಧ್ಯಯುಗದ ರಂಗ ಭೂಮಿಯು ಕೆಲ ಮಹಿಳೆಯರನ್ನು ಬಳಸಿಕೊಂಡಿದ್ದರೂ ಅವರು ಹೆಚ್ಚಾಗಿ ಹವ್ಯಾಸಿ ಗಳಾಗಿದ್ದರು. Isabella Andreini (1562-1604) ವೃತ್ತಿಪರ ನಟಿಯಾಗಿ ಮೊದಲು ಕಾಣಿಸಿ ಕೊಂಡಿದ್ದು ಇಟಲಿಯ ನಾಟಕಗಳಲ್ಲಿ. ಇದೇ ಸಮಯಕ್ಕೆ ಫ್ರಾನ್ಸ್‌ನಲ್ಲಿ Marie Vernier ಎಂಬ ವೃತ್ತಿಪರ ನಟ ಬಂದನು. ಎಲಿಝಬೆತ್‌ಳ ಕಾಲದ ನಾಟಕ ಮಹಿಳೆಯರನ್ನು ಉಪಯೋಗಿಸಲಿಲ್ಲ. ಶೇಕ್ಸ್‌ಪಿಯರ್‌ನ ಎಲ್ಲ ನಾಯಕಿಯರ ಪಾತ್ರಗಳನ್ನು ಹುಡುಗರು ಮತ್ತು ತರುಣರು ನಿರ್ವಹಿಸಿದರು. ಲಂಡನ್ ರಂಗಭೂಮಿ ರೆಸ್ಟೋರೇಶನ್ ಕಾಲದಲ್ಲಿ ಮಾತ್ರ ಮಹಿಳೆ ಯರನ್ನು ಕಂಡಿತು. ಡಿಸೆಂಬರ್ 8, 1660 ರಲ್ಲಿ Desdemonaಳ ಪಾತ್ರವನ್ನು ಮೊದಲ ಬಾರಿಗೆ ಒಬ್ಬ ಮಹಿಳೆ ನಿರ್ವಹಿಸಿದಳು. ಆದರೆ ಆಕೆಯ ಹೆಸರು ತಿಳಿದು ಬಂದಿಲ್ಲ. ಜರ್ಮನಿ ರಂಗಭೂಮಿಯ ಇತಿಹಾಸದಲ್ಲಿ ಕಾಣುವ ಮೊದಲ ಹೆಸರು ಒಬ್ಬ ಮಹಿಳೆಯದು, Caroline Nember (1667-1760).

ಆದರೆ ನಟನ ಸಾಮಾಜಿಕ ಸ್ಥಾನಮಾನ ಬಹಳ ಕಾಲದವರೆಗೆ ತೀರ ಅತಂತ್ರವಾಗಿದ್ದಿತು. ಕ್ಯಾಥೋಲಿಕ್ ದೇಶಗಳಲ್ಲಿ ನಟನಿಗೆ ಧಾರ್ಮಿಕ ಕರ್ಮ ಅಥವಾ ಮತ ಸಂಸ್ಕಾರಗಳ ಹಕ್ಕನ್ನು ನೀಡಿದ್ದಿಲ್ಲ. Moliere ಶ್ರೀಮಂತನಾಗಿದ್ದ, ಮಾನ್ಯನಾಗಿದ್ದ, ರಾಜನಿಂದ ಸ್ವಾಗತಿಸಲ್ಪಟ್ಟಿದ್ದ,

ಕುಲೀನರಿಂದ ಪೋಷಣೆ ಪಡೆದುಕೊಂಡಿದ್ದ. ಆದರೂ ಅವನನ್ನು ಅಪವಿತ್ರವಾದ ಸ್ಥಳದಲ್ಲಿ ನಿಕ್ಷೇಪಿಸಲಾಯಿತು. ಶೇಕ್ಸ್‌ಪಿಯರ್ ಮತ್ತು ಅವನ ಸಮಕಾಲೀನರನ್ನು ಘಟಿಂಗ, ಠಕ್ಕ, ಉಂಡಾಡಿ ಎಂದು ಶ್ರೇಣೀಕರಿಸಲಾಗಿತ್ತು. 19ನೆಯ ಶತಮಾನದಲ್ಲಿ ಮಾತ್ರ ನಟ ನಿರ್ಧಿಷ್ಟ ವಾದ ಸಾಮಾಜಿಕ ಸ್ಥಾನಮಾನ ಪಡೆದುಕೊಳ್ಳುವಂತಾಯಿತು ಮತ್ತು ಈ ಪ್ರಕ್ರಿಯೆ Henry Irving (1895) ನಿಗೆ Knighthood ಪದವಿ ಕೊಡುವುದರೊಂದಿಗೆ ಅತ್ಯುನ್ನತ ಸ್ಥಿತಿಗೇರಿತು. ಆದರೆ ನಟ ಸಮಾಜದಲ್ಲಿ ಗೌರವವನ್ನು ಪಡೆದುಕೊಳ್ಳಲು ತನ್ನ ಗುಟ್ಟನ್ನು ಮತ್ತು ಸ್ವರೂಪ ದರ್ಶನವನ್ನು ಕಳೆದುಕೊಳ್ಳಬೇಕಾಯಿತು.

ಎಲ್ಲದರಲ್ಲಿಯಂತೆ ಅಭಿನಯದಲ್ಲೂ ಸಂಪ್ರದಾಯಗಳು ಬದಲಾಗುತ್ತವೆ. ರಂಗ ಭೂಮಿಯ ಇತಿಹಾಸ ಹೇಗೆ ಈ ಬದಲಾವಣೆ ಒಂದು ಪದ್ಧತಿಯಿಂದ ಇನ್ನೊಂದು ಪದ್ಧತಿಗೆ ದಾರಿ ಮಾಡಿಕೊಟ್ಟಿತು ಎನ್ನುವುದನ್ನು ಸ್ಪಷ್ಟಪಡಿಸುತ್ತದೆ. ಆದರೆ ಪೂರ್ವ ದೇಶಗಳಾದ ಚೀನಾ, ಜಪಾನ್ (ಭಾರತ ಕೂಡ) ಗಳಲ್ಲಿ ಅಭಿನಯ ಪರಂಪರೆ ಎಲ್ಲ ಕಾಲಕ್ಕೂ ನಿರಂತರವಾಗಿದೆ. ಗ್ರೀಸ್‌ನಲ್ಲಿ ದುರಂತ ನಟ ತಟಸ್ಥನಾಗಿರುತ್ತಿದ್ದನು - ಧ್ವನಿ ಮತ್ತು ರೂಪ ಬೇಕಾಗಿದ್ದಿತು.

ರೋಮ್‌ನಲ್ಲಿ ಅವನು ಚಟುವಟಿಕೆಯಿಂದಿರುತ್ತಿದ್ದನು ಮತ್ತು ಕೊನೆಗೆ ದೊಂಬ (Acrobat) ನಾಗುತ್ತಿದ್ದನು. ಫ್ರಾನ್ಸ್ ದುರಂತನಾಟಕ ನಟನಲ್ಲಿ ಸುಂದರ ರೂಪ ಮತ್ತು ನಾದವುಳ್ಳ ಧ್ವನಿ ನಿರೀಕ್ಷಿಸಿತ್ತು. ರೆಸ್ಟೋರೇಶನ್ ಹರ್ಷನಾಟಕವು ಗೌರವಶೀಲ ಕಾಂತಿ ಮತ್ತು ಸಭ್ಯಗೃಹಸ್ಥನ ಉದ್ಧಟತನ ಬೇಡಿತು. 19ನೆಯ ಶತಮಾನದ ಭಾವನಾತ್ಮಕವಾದ ನಾಟಕ 'tore a passion to tattyers' ಎನ್ನುವ ರೀತಿಯಲ್ಲಿ ಪೂರ್ಣ ಪರಿಣಾಮವುನ್ನುಂಟು ಮಾಡಿತು ಮತ್ತು ಇದಕ್ಕೆ ಬದಲಾಗಿ ಬಂದ ಹಾವಭಾವಗಳಿಗೆ ಮತ್ತು ಏರಿಸಿದ ಧ್ವನಿಗೆ ಪ್ರಾಧಾನ್ಯತೆ ನೀಡಿತು. ಆದರೆ ನಿಜವಾದ ನಟ ಈ ಎಲ್ಲದರಿಂದ ಸ್ವಲ್ಪ ಸ್ವಲ್ಪ ಪಡೆದುಕೊಳ್ಳಬೇಕಾಗುತ್ತದೆ. ಹಾಡುಗಾರ, ನೃತ್ಯಗಾರ, ಹಾಸ್ಯಗಾರ, ದೊಂಬ, ದುರಂತ ನಟ ಮತ್ತು ಹಾಸ್ಯ ನಟನಿಂದ ಪಡೆದುಕೊಳ್ಳಬೇಕಾಗುತ್ತದೆ. ಅಲ್ಲದೆ ಸದೃಢ ಶರೀರ, ಸ್ತಂಭ ಅಥವಾ ಬಂಧಕ ಸ್ಮರಣಶಕ್ತಿ, ಚುರುಕಾದ ಬುದ್ಧಿಶಕ್ತಿ, ನಿಯಂತ್ರಿಸಲ್ಪಟ್ಟ ಉಸಿರಾಟ ನಟನ ನಿಯಂತ್ರಣದಲ್ಲಿರಬೇಕಾಗುತ್ತದೆ. ನಟನ ಕಲೆ ಅವನಲ್ಲಿಯೇ ಹುಟ್ಟಿಕೊಂಡಿರುತ್ತದೆ. ಕೆಲವಷ್ಟನ್ನು ಮಾತ್ರ ಕಲಿಸಬಹುದು.

ನಟ ವರ್ಗ ಬೆಳೆದು ಬಂದ ರೀತಿ ಇದಾಗಿದೆ. ಮತ್ತು ನಟನ ಸಾಮಾಜಿಕ ಸ್ಥಾನಮಾನದ ಕುರಿತೂ ಇಲ್ಲಿ ಚರ್ಚಿಸಲಾಗಿದೆ. ಇದಕ್ಕೆ ಭಾರತ ಕೂಡ ಹೊರತಾಗಿಲ್ಲ. ಈ ಹಿನ್ನೆಲೆಯಲ್ಲಿ ಭಾರತೀಯ ರಂಗಭೂಮಿಯಲ್ಲಿಯ ನಟನ ಕುರಿತು ಅಭ್ಯಸಿಸಬಹುದಾಗಿದೆ. ಭಾರತೀಯ ರಂಗಭೂಮಿ ಎಂದರೆ ಕೇವಲ ಸಂಸ್ಕೃತ ರಂಗಭೂಮಿ ಎಂದರ್ಥವಲ್ಲ. ದೇಶದ ಎಲ್ಲ ಪ್ರಾದೇಶಿಕ ರಂಗಭೂಮಿಯೂ ಆಗಿದೆ.

ನಟವರ್ಗ : ಸಾಮಾಜಿಕ ಸ್ಥಾನಮಾನ

ಭಾರತದಲ್ಲಿ ನಟ ವರ್ಗವನ್ನು ಹೇಗೆ ಕಾಣಲಾಗಿದೆ ಎಂಬ ಪ್ರಶ್ನೆಗಿಂತ ಈ ವರ್ಗವನ್ನು ಹೇಗೆ ಕಾಣಬೇಕು ಎಂದು ಭರತಮುನಿಯು ತನ್ನ ಗ್ರಂಥವಾದ 'ನಾಟ್ಯಶಾಸ್ತ್ರ' ದಲ್ಲಿ ಹೇಳಿದ್ದನ್ನು ಗಮನಿಸುವುದು ಮುಖ್ಯವಾಗಿದೆ. ಭರತ ಮುನಿಯು ನಾಟಕವನ್ನು ಪಂಚಮವೇದ ಎಂದು ಕರೆದನಲ್ಲದೆ ಅದನ್ನು ಕೇವಲ ಶೂದ್ರರ ಮತ್ತು ನೀಚ ಮಾರ್ಗಕ್ಕಿಳಿದವರ ಸಲುವಾಗಿ ಸೃಷ್ಟಿಸಲಾಗಿದೆ ಎಂದಿದ್ದಾನೆ. ಶೂದ್ರರು ವೇದಗಳನ್ನು ಓದುವಂತಿರಲಿಲ್ಲ. ಏಕೆಂದರೆ ಅವು ಬ್ರಾಹ್ಮಣರಿಗೆ ಮಾತ್ರ ಮೀಸಲಾಗಿದ್ದವು. ಶೂದ್ರರ ಸಲುವಾಗಿ ಬ್ರಹ್ಮ ಪಂಚಮವೇದವಾದ ನಾಟ್ಯವೇದವನ್ನು ಸೃಷ್ಟಿಸಿದನು ಎಂದು ನಂಬಲಾಗಿದೆ. ಹೀಗಾಗಿ ನಾಟಕಕಾರ, ನಟ ಹಾಗೂ ಪ್ರೇಕ್ಷಕ ಎಲ್ಲರೂ ಕೀಳುಜಾತಿಗೆ ಸೇರಿದವರು, ಅಸ್ಪೃಶ್ಯರು ಎಂಬ ಭಾವನೆ ರೂಢಿಯಲ್ಲಿತ್ತು. ನಟ ವರ್ಗ ಹಾದರದ ಶಿಶುವಾಗಿಯೇ ಹುಟ್ಟಿಕೊಂಡಿದ್ದರಿಂದ ಅದಕ್ಕೆ ಸಾಮಾಜಿಕ ಸ್ಥಾನಮಾನ ಹೇಗೆ ಸಿಕ್ಕೀತು ? ಭರತ ಮುನಿಯ ನಾಟ್ಯಶಾಸ್ತ್ರದ ಮೊದಲ ಅಧ್ಯಾಯದ ಕೆಲ ಸಾಲುಗಳನ್ನು ನೋಡಬಹುದು :

"ಜಗತ್ತಿನಲ್ಲಿ ಜನರು ನೀಚಮಾರ್ಗಕ್ಕೆ ಇಳಿದುಬಿಟ್ಟಿದ್ದಾರೆ. ಅವರು ದುರಾಶಾ ಪೀಡಿತರಾಗಿದ್ದಾರೆ. ಲೋಭ, ಮಾತ್ಸರ್ಯ, ಜಗಳಗಂಟತನ ಅವರನ್ನು ಮುಸುಕಿದೆ. ತಾವು ಸಂತೋಷವಾಗಿದ್ದಾರೆಯೇ ದುಃಖಿತರೇ ಎಂಬುದು ಕೂಡ ಅವರಿಗೆ ಗೊತ್ತಿಲ್ಲ. ಇದನ್ನು ಮರೆಸಲು ನಮಗೆ ಒಂದು ವಿನೋದ ಬೇಕು. ಅದು ಕೇಳುವ ಹಾಗೂ ಇರಬೇಕು, ನೋಡುವ ಹಾಗೂ ಇರಬೇಕು. ಶೂದ್ರರಿಗೆ ವೇದಾಧ್ಯಯನ ಮಾಡುವ ಅಧಿಕಾರವಿರಲಿಲ್ಲ. ಆದ್ದರಿಂದ ಎಲ್ಲ ವರ್ಣಗಳಿಗೂ ದೊರಕುವಂತಹ ಐದನೆಯ ವೇದವನ್ನು ಸೃಷ್ಟಿಸು... (ಐ.9-12).

ಇದು ಆಗಿನ ಪರಿಸ್ಥಿತಿಯಾದರೆ ತೀರ ಇತ್ತೀಚಿನವರೆಗೆ ಉನ್ನತ ಜಾತಿಗೆ ಸೇರಿದವರು ತಮ್ಮ ಹೆಂಡಿರು-ಮಕ್ಕಳಿಗೆ ನಾಟಕಗಳನ್ನು ನೋಡದಂತೆ ಬಹಿಷ್ಕಾರ ಹಾಕಿದ್ದರು. ಇದಲ್ಲದೆ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ನಾಟಕ ಮಾಡುವವನು (ನಟ, ನಾಟಕಕಾರ, ನಿರ್ದೇಶಕ) ಉಂಡಾಡಿ, ಉಡಾಳ, ಅವನು ಹಾಳಾಗಿ ಹೋಗುತ್ತಾನೆ ಎಂದು ನಂಬಲಾಗುತ್ತಿದೆಯಲ್ಲದೆ ನಟಿಯರನ್ನು ಪಾತ್ರದವಳು, ವೇಶ್ಯೆ, ದಾರಿಬಿಟ್ಟವಳು, ನೀತಿಗೆಟ್ಟವಳು ಎಂದು ಕರೆಯಲಾಗುತ್ತದೆ. ಈ ಹಿನ್ನೆಲೆಯಲ್ಲಿ ನಟ ವರ್ಗವನ್ನು ಇನ್ನೂ ಸ್ಪಷ್ಟವಾಗಿ ಅರ್ಥೈಸಿಕೊಳ್ಳುವ ಯತ್ನ ಮಾಡಬೇಕಾಗಿದೆ.

ಅಭಿನಯ ನಟನೊಂದಿಗೆ ತಾನೇ ತಾನಾಗಿ ಬೆಳೆದು ಬಂದಿರುತ್ತದೆ. ಆದರೆ ಅಭಿನಯದ ಕುರಿತು ನಾನು ಚಿಂತಿಸುತ್ತಿಲ್ಲ. ನಾನು ನಟನ ಸಾಮಾಜಿಕ ಸ್ಥಿತಿಗತಿಗಳನ್ನು, ಸಾಮಾಜಿಕ ಸ್ಥಾನಮಾನವನ್ನು ಕುರಿತು ಚಿಂತಿಸುತ್ತಿದ್ದೇನೆ. ನಟ ವರ್ಗ ಪ್ರಾಚೀನ ಕಾಲದಿಂದಲೂ ಒಂದು

ವಿಶಿಷ್ಟವಾದ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಬಂದಿದೆ. ನಾಟಕ ಅಥವಾ ರಂಗಭೂಮಿ ಪ್ರಾಚೀನ ಕಾಲದಿಂದ ವಿವಿಧ ರೂಪಗಳಲ್ಲಿ ಬೆಳೆದು ಬಂದಿದೆ. ಅದು ಯಾವುದೇ ರೂಪದಲ್ಲಿರಲಿ ರಂಗಚಟುವಟಿಕೆಗಳನ್ನು ನಿರಂತರವಾಗಿ ಮುನ್ನಡೆಸಿಕೊಂಡು ಬಂದದ್ದು ನಟ ವರ್ಗವೇ.

ನಟ ವರ್ಗ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಬಂದಂತೆ ಸಾಂಸ್ಕೃತಿಕ ಉನ್ನತಿಯನ್ನೂ ಸಾಧಿಸಿದೆ. ಸಮಾಜದಲ್ಲಿ ಸಹಬಾಳುವೆ ನಡೆಸುವ ಜನರಿಗೆ ಮನರಂಜನೆ ಅತ್ಯವಶ್ಯವಾಗಿ ಬೇಕಾಗುತ್ತದೆ. ಹಳ್ಳಿಯಲ್ಲಿ ಜೀವಿಸುವ ರೈತನಿಗೆ ಪಟ್ಟಣದಲ್ಲಿ ಕೆಲಸ ಮಾಡುವ ಕಾರ್ಮಿಕನಿಗೆ ನಾಟಕ ಬೇಕು. ಈ ಜನರಿಗೆ ನಾಟಕವೊಂದೇ ಮನರಂಜನೆ ನೀಡುವ ಮಾಧ್ಯಮವಾಗಿದೆ (ದೂರದರ್ಶನ ಮತ್ತು ಚಲನಚಿತ್ರಗಳು ವ್ಯಾಪಕವಾಗಿ ಹರಡುವವರೆಗೆ ಹಾಗೆ ಇದ್ದುದಾಗಿತ್ತು). ಹಾಗೆಯೇ ಪ್ರಾಚೀನ ಕಾಲದ ರಾಜರ ಗೃಹಗಳಲ್ಲಿ, ಸಭೆಗಳಲ್ಲಿ ನಾಟಕಗಳನ್ನು ಆಡಿಸುತ್ತಿದ್ದರು ; ನೃತ್ಯ, ಗಾಯನವನ್ನು ನಡೆಸುತ್ತಿದ್ದರು. ವ್ಯಕ್ತಿಯ ಸಾಮಾಜಿಕ ಸ್ಥಾನಮಾನ ಅಥವಾ ವೃತ್ತಿ ಏನೇ ಆಗಿರಲಿ ಅವನಿಗೆ ಮನರಂಜನೆ ಬಹಳ ಅಗತ್ಯವಾಗಿ ಬೇಕಾಗುತ್ತದೆ. ನಟ ವರ್ಗ ಈ ಜವಾಬ್ದಾರಿಯನ್ನು ಎಂದಿನಿಂದಲೂ ನಿರ್ವಹಿಸಿಕೊಂಡು ಬಂದಿದೆ.

ಅಲ್ಲದೆ ನಟರು ಸಾಮಾಜಿಕ ಬದಲಾವಣೆಗೆ ಕಾರಣರಾಗಿದ್ದಾರೆ. ಉದಾಹರಣೆಗೆ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಟರು ತಮ್ಮ ಅಭಿನಯದ ಮೂಲಕ ಬ್ರಿಟೀಷರ ದುರಾಡಳಿತದ ಬಗ್ಗೆ ಜನರಲ್ಲಿ ಅರಿವು ಮೂಡಿಸಿದರಲ್ಲದೆ ಜನರನ್ನು ದೇಶದ ವಿಮೋಚನಾ ಹೋರಾಟದಲ್ಲಿ ಭಾಗಿಗಳಾಗಲು ಪ್ರೋತ್ಸಾಹಿಸಿದರು. ಹಲವು ಸಾಮಾಜಿಕ ಪಿಡುಗುಗಳನ್ನು ತೊಡೆದು ಹಾಕಲು ಜನರನ್ನು ಸಿದ್ಧಗೊಳಿಸಿದರು. ಒಂದು ರೀತಿಯಿಂದ ನಟರು ದೇಶದ ಸಂಸ್ಕೃತಿಯನ್ನೂ, ನಾಗರಿಕತೆಯನ್ನೂ ಶ್ರೀಮಂತಗೊಳಿಸಿದವರು.

ಇಂಥ ನಿಸ್ವಾರ್ಥ ಸಮಾಜಸೇವಕ ನಟವರ್ಗವನ್ನು ಸಮಾಜ ಹೇಗೆ ಕಂಡಿದೆ ? ಭಾರತದಲ್ಲಿ ಅಷ್ಟೇ ಅಲ್ಲ, ಇಡೀ ಜಗತ್ತಿನಲ್ಲಿ ನಟ ವರ್ಗ ಶೋಷಣೆಗೆ ಒಳಗಾಗಿದ್ದು ಸಮಾಜ ಅವರನ್ನು ಅಸ್ಪೃಶ್ಯರಂತೆ ಕಂಡಿದೆ.

ರಂಗ ಭೂಮಿಯ ಮೇಲಿನ ಕತ್ತಲು ಬೆಳಕಿನಲ್ಲಿ ರಾತ್ರಿಯೆಲ್ಲ ರಾಜ ಮಹಾರಾಜನಾಗಿ, ವೀರ ಧೀರ ಸೇನಾನಾಯಕನಾಗಿ ಮೆರೆದು ಪ್ರೇಕ್ಷಕನಿಂದ ಮುಗಿಲು ಮುಟ್ಟುವ ಹಾಗೆ ಚಪ್ಪಾಳೆಯನ್ನು ತಟ್ಟಿಸಿಕೊಂಡ ನಟ ಬೆಳಕು ಹರಿದಾಗ ಕೈಯಲ್ಲಿ ಭಿಕ್ಷಾಪಾತ್ರೆ ಹಿಡಿದು ಊರ ಗೌಡ ಅಥವಾ ಸಾಹುಕಾರ ಇಲ್ಲವೇ ಅದೇ ಪ್ರೇಕ್ಷಕನ ಮನೆಯೆದುರು ಹಲ್ಲುಗಿಂಜುತ್ತ ನಿಲ್ಲುವ

ದೃಶ್ಯ ಆ ವರ್ಗದ ದುರಂತದ ಸಂಕೇತವಾಗಿದೆ. ಕೇವಲ ಹೊಟ್ಟೆಯನ್ನು ತುಂಬಿಕೊಳ್ಳಲು ಹೋರಾಡುವ ನಟನ ಬದುಕು ಅವನು ನಿರ್ವಹಿಸುವ ಎಲ್ಲ ದುರಂತ ಪಾತ್ರಗಳಿಗಿಂತಲೂ ಕರುಣಾಜನಕವಾದುದಾಗಿದೆ. ಹೀಗಾಗಿ ವೃತ್ತಿ ರಂಗಭೂಮಿಯ ನಟರು ಇವತ್ತಿಗೂ ಬಹಳ ಕನಿಷ್ಟವಾದ ಬದುಕನ್ನು ನಡೆಸುತ್ತಿದ್ದಾರೆ.

ಚಲನಚಿತ್ರ ಹಾಗೂ ದೂರದರ್ಶನಗಳಲ್ಲಿ ಪಾತ್ರ ನಿರ್ವಹಿಸುವ ನಟರಿಗೆ ಸಮಾಜದಲ್ಲಿ ಎಷ್ಟು ದೊಡ್ಡ ಸ್ಥಾನ ಇದೆ ಎಂದರೆ ಒಂದು ಕಾಲಕ್ಕೆ ಮಹಾತ್ಮಾ ಗಾಂಧೀಜಿ ಅಥವಾ ಸುಭಾಸ್‌ಚಂದ್ರ ಬೋಸರಿಗಿದ್ದ ಗೌರವ ಈ ಮಾಧ್ಯಮದ ಕಲಾವಿದರಿಗಿದೆ. ಆದರೆ ರಂಗ ಕಲಾವಿದರ ಬದುಕಿನಲ್ಲಿ ಯಾವ ಗಣನೀಯ ಬದಲಾವಣೆ ಆಗಿಲ್ಲ. ಅವರು ಹೊಟ್ಟೆಗಾಗಿ ನಡೆಸುವ ಹೋರಾಟಕ್ಕೆ ಕೊನೆ ಇಲ್ಲವೆ ? ಸರ್ಕಾರ ಚಲನಚಿತ್ರ ನಟರಿಗೆ ಹೂವಿನ ಹಾಸಿಗೆ ಹಾಸಿದೆ, ರತ್ನಗಂಬಳಿ ಹಾಸಿ ಅವರನ್ನು ಸಕಲ ಮರ್ಯಾದೆ ಮಾಡುತ್ತದೆ. ಆದರೆ ರಂಗ ಕಲಾವಿದರನ್ನು ಬಹಳ ನಿರ್ಲಕ್ಷಿಸಿದೆ. ರಂಗ ಕಲಾವಿದರಿಗಾಗಲಿ, ರಂಗಭೂಮಿಯ ತಂಡಗಳಿಗಾಗಲಿ ಸರ್ಕಾರ ಯಾವ ರೀತಿಯ ಪ್ರೋತ್ಸಾಹವನ್ನೂ ನೀಡುತ್ತಿಲ್ಲ. ಹೀಗಾಗಿ ನಾಡಿನಲ್ಲಿ ಹಲವು ನಾಟಕ ಕಂಪನಿಗಳು ಜೀವಂತವಾಗಿರಲು ಕಷ್ಟಪಡುತ್ತಿವೆ. ಆದರೆ ಸರ್ಕಾರ ಒಂದೆರಡು ಅಮೆಚ್ಯೂರ್ ರಂಗಭೂಮಿ ಕಲಾವಿದರನ್ನು, ವಿದೇಶಗಳಲ್ಲಿಯ ರಂಗಭೂಮಿಗಳನ್ನು ನಕಲು ಮಾಡುತ್ತಿರುವ ಸುಶಿಕ್ಷಿತರು ಮಾಡಿದ್ದು ಬೌದ್ಧಿಕತೆಯಿಂದ ಕೂಡಿರುತ್ತದೆ ಎಂದು ಕೂಗುವ ನಿರ್ದೇಶಕರನ್ನು ಸರ್ಕಾರ ರಮಿಸುತ್ತ ಎಲ್ಲಾ ಸಹಾಯ ಧನವನ್ನು ಅವರಿಗೆ ನೀಡುತ್ತ ಬಂದದ್ದು ಬಹಳ ಕಳವಳಕಾರಿಯಾದ ಸಂಗತಿಯಾಗಿದೆ.

ರಾಜ್ಯದಲ್ಲಿ ನೂರಾರು ರಂಗಕಲಾವಿದರ ಒಂದು ಪ್ರವಾಸ ಇದ್ದರೆ, ಹತ್ತಾರು ನಾಟಕ ಕಂಪನಿಗಳು ಆರ್ಥಿಕ ತೊಂದರೆ ಅನುಭವಿಸಿ ಅವಸಾನ ಹೊಂದುತ್ತಿವೆ. ಸರ್ಕಾರ ಇಂಥ ನಟರನ್ನು, ನಾಟಕಗಳನ್ನು ಉದ್ಧಾರ ಮಾಡಬಾರದೇಕೆ? ಚಲನಚಿತ್ರ ನಿರ್ಮಾಪಕರಿಗೆ ಹತ್ತಾರು ಲಕ್ಷ ಸಹಾಯಧನ ನೀಡುವ ಸರ್ಕಾರ ಕೆಲ ಸಾವಿರ ರೂಪಾಯಿಗಳ ಸಹಾಯಧನ ನೀಡಿ ಶತಮಾನಗಳಿಂದ ನಾಡಿನಲ್ಲಿ ರಂಗಪರಂಪರೆಯನ್ನು ಕಾಪಾಡಿಕೊಂಡು ಬಂದ ರಂಗ ಕಲಾವಿದರನ್ನು ನಾಟಕ ಕಂಪನಿಗಳನ್ನು ಕಾಪಾಡಬಹುದಲ್ಲವೇ ?

ಪ್ರೊ. ಕೀರ್ತಿನಾಥ ಕುರ್ತಕೋಟಿ ಅವರು ನಾಟಕ ಕಂಪನಿಗಳ ಬಗೆಗೆ ಹೇಳಿರುವ ವಸ್ತು ಸ್ಥಿತಿಯನ್ನು ಚಿತ್ರಿಸುವ ಮಾತಿನೊಂದಿಗೆ ಲೇಖನವನ್ನು ಮುಗಿಸುತ್ತಿದ್ದೇನೆ.

"ಪ್ರತಿ ಹಳ್ಳಿಯಲ್ಲಿಯೂ ಐದಾರು ಕಂಪನಿಗಳು ಹುಟ್ಟಿ ಸಾಯುತ್ತವೆ. ಆದರೆ ಸಂಪ್ರದಾಯವೊಂದು ನಿರ್ಮಾಣವಾಗಿಲ್ಲ. ಏನೇ ಆದರೂ ಕಂಪನಿಗಳು ನೋಡಲಿಕ್ಕಾದರೂ

ದೊರೆಯುತ್ತವಲ್ಲ ಎಂಬುದೊಂದು ಸಮಾಧಾನವಿದೆ. ಇಲ್ಲದಿದ್ದರೆ ರಂಗದ ಬೆಳಕು ಎಂದೋ ಆರಿ ಹೋಗಿ ನಾಟಕ ಅಮೆಚ್ಯೂರ್ - ರಂಗಭೂಮಿಯ ಬೆಳದಿಂಗಳನ್ನೇ ಆಶ್ರಯಿಸಬೇಕಾಗಿತ್ತು."

ಗ್ರಂಥಋಣ :

1) The Oxford Companion to the Theatre.

2) An Introduction to the Greek Theatre - Peter D Arnott.

3) Poetics - Aristotle.

4) ನಡೆದು ಬಂದ ದಾರಿ - ಶ್ರೀ ಕೀರ್ತಿನಾಥ ಕುರ್ತಕೋಟಿ.

5) ವಿಮರ್ಶೆಯ ವಿನಯ - ಶ್ರೀ ಕೀರ್ತಿನಾಥ ಕುರ್ತಕೋಟಿ.

6) ಉರಿಯ ನಾಲಗೆ - ಶ್ರೀ ಕೀರ್ತಿನಾಥ ಕುರ್ತಕೋಟಿ.

7) ಭಾರತೀಯ ರಂಗಭೂಮಿ - ಶ್ರೀ ಆದ್ಯರಂಗಾಚಾರ್ಯರು.

ಕನ್ನಡ ಜನಪದ ಕಥೆಗಳಲ್ಲಿ ಶಿವಪಾರ್ವತಿ

ಎಂ. ರಾಮಕೃಷ್ಣಯ್ಯ

ಮುನ್ನುಡಿ :-

ಜನಪದ ಕಥೆ ವಿಶ್ವವ್ಯಾಪಕ ಗುಣವನ್ನು ಪಡೆದ ಒಂದು ಜಾನಪದ ರೂಪ. ಯಾವುದೇ ಒಂದು ಭಾಗಕ್ಕಷ್ಟೇ ಸೀಮಿತವಾಗಿರದೆ ಭಾಷೆಯಿಂದ ಭಾಷೆಗೆ ದೇಶದಿಂದ ದೇಶಕ್ಕೆ ಸಂಚಾರ ಕೈಗೊಂಡು ಆಯಾ ನೆಲದಲ್ಲಿ ಬೇರುಬಿಟ್ಟುಕೊಳ್ಳುತ್ತದೆ. ಆದರೆ ಪ್ರಸ್ತುತ ಲೇಖನದಲ್ಲಿ ಚರ್ಚಿಸಲ್ಪಡುವ ವಿಚಾರ, ಕನ್ನಡ ಜನಪದ ಕಥೆಗಳಲ್ಲಿ ಶಿವಪಾರ್ವತಿ : ಈ ರೀತಿಯಾದ ಕಥೆಗಳು ಅಂದರೆ ಶಿವಪಾರ್ವತಿಯರು ಬರುವ ಸಂದರ್ಭಗಳುಳ್ಳ ಕಥೆಗಳು ಅನ್ಯರಾಷ್ಟ್ರಗಳಲ್ಲಿ ಕಾಣಲು ಸಾಧ್ಯವಿಲ್ಲ. ಅದು ಭಾರತಕ್ಕೆ ಸೀಮಿತವಾಗಿದೆ, ಎಂಬ ವಿಚಾರ ತಿಳಿದು ಬರುತ್ತದೆ ಮತ್ತು ಕನ್ನಡ ಜನಪದ ಕಥೆಗಳಲ್ಲಿಯೂ ಸಹಾ ಹೆಚ್ಚಾಗಿ ಕಾಣುತ್ತೇವೆ.

ಈ ಲೇಖನದಲ್ಲಿ ಕನ್ನಡದ ಹಲವು ಜನಪದ ಕಥಾ ಸಂಕಲನಗಳನ್ನು ಬಳಸಿಕೊಂಡು ಅದರಲ್ಲಿಯ 50ಕ್ಕೂ ಹೆಚ್ಚು ಕಥೆಗಳಲ್ಲಿ ಶಿವಪಾರ್ವತಿಯರು ಬರುವ ಸಂಧರ್ಭಗಳನ್ನೊಳಗೊಂಡ ಕಥೆಗಳನ್ನು ಪಟ್ಟಿ ಮಾಡಿ ಅವುಗಳಲ್ಲಿ 10 ಕಥೆಗಳನ್ನು ಬಳಸಿಕೊಂಡಿರುವುದು ಇದರ ಹಿನ್ನೆಲೆಯಲ್ಲಿಯೇ ಆಗಿದೆ.

ಅ) ಶಿವಪಾರ್ವತಿ ಕಾಣಸಿಕೊಳ್ಳುವ ರೀತಿ :-

ಕನ್ನಡ ಜನಪದ ಕಥೆಗಳಲ್ಲಿ ಕೆಲವು ಸಂದರ್ಭಗಳಲ್ಲಿ ಶಿವ ಮಾತ್ರ ಕಾಣಿಸಿಕೊಳ್ಳುತ್ತಾನೆ. ಮತ್ತೆ ಕೆಲವು ಕಥೆಗಳಲ್ಲಿ ಶಿವಪಾರ್ವತಿಯರು ಜೊತೆಯಾಗಿ ಕಾಣಿಸಿಕೊಳ್ಳುತ್ತಾರೆ. ಈ ರೀತಿಯಾಗಿ ಕಾಣಿಸಿಕೊಳ್ಳುವ ಕಥೆಗಳನ್ನು ಪ್ರಸ್ತುತ ಸಂದರ್ಭದಲ್ಲಿ ಚರ್ಚಿಸಲಾಗುವುದು.

ಶಿವಮಾತ್ರವೇ ಕಾಣಿಸಿಕೊಳ್ಳುವ ಕಥೆಗಳಲ್ಲಿ 'ಕಾಶಿಯಾತ್ರೆ' ಎಂಬ ಕಥೆಯೂ ಒಂದಾಗಿದ್ದು ಇದರಲ್ಲಿ ಐಶ್ವರ್ಯವಂತನೊಬ್ಬ ಬೇಸರಗೊಂಡು ತನ್ನ ಮಕ್ಕಳನ್ನು ಬಿಟ್ಟು ದೇಶಾಂತರ ಹೊರಟು ಕಾಡಿನ ಮಧ್ಯೆ ನಿಲ್ಲುತ್ತಾನೆ. ಅಲ್ಲಿ ದನಕಾಯುವ ಹುಡುಗನಿಂದ ಮತ್ತೆ ಶ್ರೀಮಂತನಾಗಿ ಕಾಶಿಗೆ ಹೊರಟು ಹೋಗುತ್ತಾನೆ. ಅನಂತರ ಹುಡುಗನ ಕಾರಣದಿಂದ ಶಿವ ಪ್ರತ್ಯಕ್ಷನಾಗಿ ಕೈಲಾಸವೇ ಲಭಿಸುತ್ತದೆ. 'ಮೋಟುಭಕ್ತಿ' ಕಥೆಯಲ್ಲಿಯೂ ಸಹಾ ಮೋಟುಭಕ್ತ ಶಿಷ್ಯನಿಂದ ಪಾರಾಗಲು ಗುರುವೊಬ್ಬ ಮರಕ್ಕೆ ಜೋತುಬೀಳುವಂತೆ ಹೇಳಿಹೊರಟು ಹೋಗುತ್ತಾನೆ.

ಅದು ಶಿವನಿಗೆ ಅರಿವಾಗಿ ಕಾಮಧೇನುವನ್ನು ಕಳುಹಿಸುತ್ತಾನೆ. ಆ ಕಾಮಧೇನುವಿನ ಮೂಲಕವೇ ಕೈಲಾಸದಲ್ಲಿ ಶಿವನ ಭೇಟಿಯಾಗುತ್ತಾರೆ. ಇದೇ ರೀತಿ 'ಹುಡುಗನ ಸಾಹಸ' ಕಥೆಯಲ್ಲಿ ಶಿವನು ಮಾತ್ರವೇ ಕಾಣಿಸಿಕೊಳ್ಳುತ್ತಾನೆ.

ಇನ್ನು ಶಿವಪಾರ್ವತಿಯರು ಜೊತೆಯಾಗಿಯೇ ಬರುವ ಕಥೆಗಳು 7 (ಅಡಿ ಟಿಪ್ಪಣಿ ನೋಡಿ). ಅವುಗಳಲ್ಲಿ 'ರುಸ್ತುಮ' ಕಥೆಯೂ ಒಂದು. ಹೈಲುಪೈಲು ರಾಜನಿಂದ ಸೋತ ರಾಣಿ ಕಾಡಿಗೆ ಹೋಗುತ್ತಾಳೆ. ಆ ರಾತ್ರಿ ಭಯಂಕರ ಪ್ರಾಣಿಗಳ ಶಬ್ದಕ್ಕೆ ಹೆದರಿ ರಾಣಿ ಅಳಲಾರಂಭಿಸುತ್ತಾಳೆ. ಅಂತಹ ಸಂದರ್ಭದಲ್ಲೇ ಶಿವಪಾರ್ವತಿಯರು ಬರುತ್ತಾರೆ. ತುಂಬು ಗರ್ಭಿಣಿಯಾದ ರಾಣಿಯು ಮಗುವನ್ನು ಪಡೆದ ನಂತರ ಮತ್ತೆ ದುಃಖಿತಳಾಗುತ್ತಾಳೆ. ಅಂತಹ ಸಂದರ್ಭದಲ್ಲಿ ಶಿವಪಾರ್ವತಿ ಮತ್ತೆ ಕಾಣಿಸಿಕೊಂಡು ಈ ಮೊದಲು ಕೊಟ್ಟಿದ್ದ 2 ರೊಟ್ಟಿ, 1 ಮೊಗೆ ನೀರಿನ ಜೊತೆಗೆ 1 ಮಿಳ್ಳೆ ಹಾಲು ಅವಳು ಬಯಸಿದಾಗಲೆಲ್ಲ ಬರಲೆಂದು ಹೇಳಿ ಹೊರಟುಹೋಗುತ್ತಾರೆ. ಈ ಕಥೆಯನ್ನು ಗಮನಿಸಿದಾಗ ಶಿವಪಾರ್ವತಿಯರು 2 ಕಡೆಗಳಲ್ಲಿ ಬರುವುದನ್ನು ಕಾಣಬಹುದಾಗಿದೆ.

'ಸುಳ್ಳಿನ ಮಹಿಮೆ' ಕಥೆಯಲ್ಲಿ ಇಲಿಗಳ ಕಾಟವನ್ನು ತಾಳಲಾರದ ರೈತನೊಬ್ಬ ಹೊಲದಲ್ಲಿಯೇ ರಾತ್ರಿಯೆಲ್ಲ ಕಾದು ಕುಳಿತು ಅಳಲಾರಂಭಿಸುತ್ತಾನೆ. ಈ ಸಂದರ್ಭದಲ್ಲಿ ಗಾಳಿ ಸಂಚಾರಕ್ಕೆ ಹೊರಟ ಶಿವ ಪಾರ್ವತಿಯರು ಬಂದು ವಿಚಾರಿಸಲು ಎಲ್ಲಾ ಘಟನೆಗಳನ್ನು ವಿವರಿಸುತ್ತಾನೆ. ಅದಕ್ಕೆ ಶಿವ ಪಾರ್ವತಿಯರು ಯುಕ್ತಿಯನ್ನು ಹೇಳಿಕೊಡುತ್ತಾರೆ. ಅದನ್ನು ಬಳಸಿ ಇಲಿಗಳನ್ನು ಕೊಲ್ಲುತ್ತಾನೆ. ಅದನ್ನೇ ಮತ್ತೆ ಹೆಂಡತಿಯ ಮೇಲೆ, ಊರಿನವರು, ನಾಡಿನವರ ಮೇಲೆಲ್ಲಾ ಪ್ರಯೋಗಿಸುತ್ತಾನೆ. ಕೊನೆಗೆ ತನ್ನ ಮೇಲೆಯೇ ಪ್ರಯೋಗಿಸಿಕೊಂಡು ಸಾಯುತ್ತಾನೆ. ಈ ಕಥೆಯಲ್ಲಿ ಶಿವಪಾರ್ವತಿಯರು ಒಂದು ಕಡೆ ಕಾಣಿಸಿಕೊಂಡಿರುವುದು ತಿಳಿಯುತ್ತದೆ. 'ಮೂರು ತಿಂಗಳ ಗಂಡ್ನೆ ನನ್ನ ಬಿಟ್ಟು ಹೋಗ್ತೀಯ' ಕಥೆಯಲ್ಲಿ ಮಕ್ಕಳನ್ನು ಬಯಸಿದ ರಾಣಿಯಿಂದಾಗಿ ದೇವರಲ್ಲಿಗೆ ಹೋದ ರಾಜನು ದೇವರನ್ನು ಕೇಳಲಾಗಿ ಷರತ್ತಿನ ಮೇಲೆ ಮೂರು ತಿಂಗಳಿಗೆ ಮದುವೆ ಮಾಡುವ ರಾಜರನ್ನು ಕೊಡುತ್ತಾನೆ. ಮಂತ್ರಿಯ ಸಹಾಯದಿಂದ ರಾಜ ಮೂರು ತಿಂಗಳಿಗೆ ಮದುವೆ ಮಾಡಿ ಕಾಡಿನಲ್ಲಿ ಬಿಟ್ಟು ಬರುತ್ತಾನೆ. ಆಕೆ

ಅಡಿ ಟಿಪ್ಪಣಿ

1. ರುಸ್ತುಮ
2. ಸುಳ್ಳಿನ ಮಹಿಮೆ
3. ಮೂರು ತಿಂಗ್ಳ ಗಂಡ್ನೆ ನನ್ನ ಬಿಟ್ಟುಹೋಗ್ತೀಯಾ
4. ನಾಗೇಂದ್ರ ಸ್ವಾಮಿ ಮಗಳು
5. ಮಡಿಕೆ ಹೆಣ್ಣು
6. ಗೌಡನ ಮಕ್ಕಳು
7. ಅಪ್ಪ ಕಂಡ ಸಪ್ನ

ಮಗುವನ್ನು ಅಜ್ಜಿಯೊಬ್ಬಳ ಬಳಿ ತನ್ನ ಗಂಡನೆಂದಾಗ ಅದಕ್ಕೆ ಅಜ್ಜಿಯು ಮತ್ತೊಂದು ಮದುವೆಗೆ ಪ್ರೇರೇಪಿಸುತ್ತಾಳೆ. ಆಗ ರಾಣಿ ಅಜ್ಜಿಗೆ ಹೊಡೆಯಲು ಹೋಗುತ್ತಾಳೆ. ಅಂತಹ ಪರಿಸ್ಥಿತಿಯಲ್ಲಿ ಶಿವಪಾರ್ವತಿ ಕಾಣಿಸಿಕೊಂಡು ನಿಜಸ್ಥಿತಿಯನ್ನು ತಿಳಿಸುತ್ತಾರೆ. ಮುಂದೆ ಅಜ್ಜಿಯೊಬ್ಬಳ ಸಹಾಯದಿಂದ ಬೆಳೆದ ಹುಡುಗ ರಾಣಿಯನ್ನು ಬಿಟ್ಟು ಹೋಗಲೆತ್ನಿಸುತ್ತಾನೆ. ಕೊನೆಗೆ ಒಂದು ಮರದಲ್ಲಿ ಕುಳಿತ ಪಕ್ಷಿಗಳ ಸಂಭಾಷಣೆಯಿಂದ ಹುಡುಗನಿಗೆ ಅರಿವಾಗಿ ಪಟ್ಟಣಕ್ಕೆ ಬರುತ್ತಾನೆ. ಈ ಕಥೆಯಲ್ಲಿ ಶಿವಪಾರ್ವತಿಯರು ಜೊತೆಯಾಗಿ ಬಂದು ಒಂದೇ ಕಡೆಯಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಾರೆ. ಇದೇ ರೀತಿಯಲ್ಲಿ 'ಮಡಿಕೆ ಹೆಣ್ಣು' ಕಥೆಯಲ್ಲಿ ಶಿವಪಾರ್ವತಿಯರು ಜೊತೆಯಾಗಿಯೇ ಪ್ರತ್ಯಕ್ಷರಾಗಿ ಎರಡು ಕಡೆಗಳಲ್ಲಿ ಕಾಣಸಿಗುತ್ತಾರೆ. 'ಗೌಡನ ಮಕ್ಕಳು' ಹಾಗೂ 'ಅಪ್ಪ ಕಂಡ ಸ್ವಪ್ನ' ಕಥೆಗಳಲ್ಲಿಯೂ ಸಹಾ ಶಿವಪಾರ್ವತಿಯರು ಜೊತೆಯಾಗಿಯೇ ಕಾಣಿಸಿಕೊಳ್ಳುತ್ತಾರೆ. ಈ ಕಥೆಗಳಲ್ಲಿ ಶಿವಪಾರ್ವತಿಯರನ್ನು ಒಂದೊಂದು ಕಥೆಯಲ್ಲಿ ಮಾತ್ರವೇ ಕಾಣಬಹುದಾಗಿದೆ.

ಆ) ಶಿವಪಾರ್ವತಿಯರು ಕಾಣಿಸಿಕೊಳ್ಳುವ ಸನ್ನಿವೇಶ :-

ಕನ್ನಡದ ಕೆಲವು ಜನಪದ ಕಥೆಗಳಲ್ಲಿ ಶಿವಪಾರ್ವತಿಯರು ಕಷ್ಟದಲ್ಲಿನ ಸಂಧರ್ಭದಲ್ಲಿಯೂ, ಕೆಲವು ಕಡೆ ಸಂತೋಷದಲ್ಲಿನ ಸಂದರ್ಭದಲ್ಲಿಯೂ ಕಾಣಿಸಿಕೊಳ್ಳುತ್ತಾರೆ. ಅಂತಹ ಕಥೆಗಳಲ್ಲಿ 'ರುಸ್ತುಮ' ಕಥೆಯೂ ಒಂದು. ಈ ಕಥೆಯಲ್ಲಿ ಕಾಡಿಗೆ ಕಳುಹಿಸಲ್ಪಟ್ಟ ನಾಯಕಿ ರಾತ್ರಿಯ ವೇಳೆಯಲ್ಲಿ ಭಯಂಕರ ಪ್ರಾಣಿಗಳ ಶಬ್ದಕ್ಕೆ ಹೆದರಿ ಅಳಲಾರಂಭಿಸಿದಾಗ ಶಿವ ಪಾರ್ವತಿಯರು ಕಾಣಿಸಿಕೊಳ್ಳುತ್ತಾರೆ. ರಾಣಿಯ ಹೆರಿಗೆ ನಂತರದ ಸಮಯದಲ್ಲಿಯೂ ಕೂಡ ಪ್ರತ್ಯಕ್ಷರಾಗುತ್ತಾರೆ. 'ಸುಳ್ಳಿನ ಮಹಿಮೆ' ಕಥೆಯಲ್ಲಿ ಇಲಿಗಳು ಬಂದು ಬೆಳೆಯನ್ನು ತಿಂದು ಹಾಳು ಮಾಡುವ ಸಂಧರ್ಭದಲ್ಲಿ ರೈತ ಬಹಳ ದುಃಖಿಸುತ್ತಾನೆ. ಈ ಸನ್ನಿವೇಶದಲ್ಲಿ ಶಿವ ಪಾರ್ವತಿಯರು ಪ್ರತ್ಯಕ್ಷರಾಗುತ್ತಾರೆ. 'ನಾಗೇಂದ್ರಸ್ವಾಮಿ ಮಗಳು' ಕಥೆಯಲ್ಲಿ ಮಕ್ಕಳಿಲ್ಲದ ರಾಜನಿಗೆ ನಾಗೇಂದ್ರಸ್ವಾಮಿಯ ವರದಿಂದ ಒಂದು ಹೆಣ್ಣು ಮತ್ತು ಒಂದು ಗಂಡು ಮಗುವಾಗುತ್ತದೆ. ಆ ಹೆಣ್ಣು ಮಗುವನ್ನು ನಾಗೇಂದ್ರಸ್ವಾಮಿ ತನಗೆ ಹಿಂತಿರುಗಿಸಬೇಕೆಂದಿರುತ್ತಾನೆ. ಆದರೆ ರಾಜ ಹಾಗೆ ಮಾಡದೆ ಪೆಟ್ಟಿಗೇಲಿ ಇಟ್ಟಿರುತ್ತಾನೆ. ನಾಗೇಂದ್ರಸ್ವಾಮಿಯನ್ನೇ ಎಣ್ಣೆಗೆ ಹಾಕುತ್ತಾಳೆ. ಇದರಿಂದ ಸಾಕಷ್ಟು ನೋವು ಅನುಭವಿಸುತ್ತಾಳೆ. ಈ ಸನ್ನಿವೇಶದಲ್ಲಿ ಶಿವ ಪಾರ್ವತಿಯರು ಪ್ರತ್ಯಕ್ಷರಾಗಿ ಅರಿವು ಮಾಡಿಕೊಟ್ಟು, ನಿನ್ನ ಮಗನಿಗೆ ಪಟ್ಟ ಕಟ್ಟಿ ನೀವು ದೀಕ್ಷೆ ತೆಗೆದುಕೊಳ್ಳಿ ಎನ್ನುತ್ತಾರೆ. 'ಕಾಶಿಯಾತ್ರೆ' ಕಥೆಯಲ್ಲಿ ಐಶ್ವರ್ಯವಂತ ಮಾತ್ತಿ ಬೇಸರಗೊಂಡು ಹೊರಟು ಕಾಡಿನ ಮಧ್ಯೆ ತಂಗುತ್ತಾನೆ. ಅಲ್ಲಿ ದನಕಾಯುವ ಹುಡುಗನಿಂದ ಶ್ರೀಮಂತನಾಗಿ ಕಾಶಿಗೆ ಹೋದ ನಂತರ ಶಿವ ಪ್ರತ್ಯಕ್ಷವಾಗುತ್ತಾನೆ. 'ಹುಡುಗನ ಸಾಹಸ' ಎಂಬ ಕಥೆಯಲ್ಲಿ ಶಿವನನ್ನು ಕಾಣಬೇಕೆಂಬ ಆಸೆಯಿಂದ ಹೊರಟ ಹುಡುಗನಿಗೆ ದಾರಿಯಲ್ಲಿ

ಹಲವರ ಸಮಸ್ಯೆಗಳು ಕಾಣಿಸಿಕೊಂಡು ಸಮಸ್ಯೆಗಳನ್ನು ಬಗೆಹರಿಸುತ್ತಾನೆ. 'ಅಪ್ಪ ಕಂಡ ಸ್ವಪ್ನ' ಕಥೆಯಲ್ಲಿ ದೊರೆಯು ಹಿರಿಯ ಹೆಂಡತಿ ಮತ್ತು ಮಕ್ಕಳು 'ಕಿರಿಯ ಗರ್ಭಿಣಿ ಹೆಂಡತಿಯನ್ನು ಓಡಿಸಿಬಿಡುತ್ತಾರೆ, ಆ ಊರಗೌಡ ಆಶ್ರಯವಾಗುತ್ತಾನೆ. ರಾಣಿಯ ಮಗ ಬೆಳೆದು ದೊಡ್ಡವನಾಗುವ ವೇಳೆಗೆ ತಂದೆಗೆ ಕನಸು ಬಿದ್ದು ನಿಜರೂಪದಲ್ಲಿ ತೋರಬೇಕೆಂದು ಸ್ಪರ್ಧೆ ಏರ್ಪಡಿಸುತ್ತಾನೆ. ಅದರಲ್ಲಿ ಕಿರಿಯ ಮಗ ಜಯಸಾಧಿಸುತ್ತಾನೆ. ಇದನ್ನು ಕಂಡ ಅಣ್ಣಂದಿರು ಈತನನ್ನು ಸಾಯಿಸಿ ಬಿಡುತ್ತಾರೆ. ಇವನ ಜೊತೆಗಿದ್ದ ಪ್ರಾಣಿಗಳ ಸಹಾಯದಿಂದ ಶಿವಪಾರ್ವತಿಯರು ಪ್ರತ್ಯಕ್ಷರಾಗಿ ಅವನಿಗೆ ಜೀವಕಳೆ ತುಂಬಿ ಬದುಕಿಸುತ್ತಾರೆ. 'ಮಡಿಕೆ ಹೆಣ್ಣು' ಕಥೆಯಲ್ಲಿ ಅಜ್ಜಿಯ ಮನೆಯ ಮಡಿಕೆಯೊಂದು ಕಷ್ಟಗಳನ್ನು ಅನುಭವಿಸಲಾರದೆ ಶಿವನನ್ನು ಸ್ಮರಿಸಿದಾಗ ಶಿವಪಾರ್ವತಿಯರು ಬಂದು ವಿಚಾರಿಸಲಾಗಿ ತನ್ನನ್ನು ಚೋಟುದ್ದ ಹುಡುಗಿಯಾಗಿ ಮಾಡಲು ಕೇಳಿಕೊಳ್ಳುತ್ತದೆ. ಅನಂತರ ರಾಜಕುಮಾರನೊಬ್ಬನಿಂದ ಅಪ್ರತ್ಯಕ್ಷವಾಗಿ ಗರ್ಭಿಣಿಯಾಗಿ ಹೆರಿಗೆಯ ನಂತರ ರಾಜಕುಮಾರ ಬಂದು ಆ ಮಗುವಿನ ತೊಟ್ಟಿಲನ್ನು ಮೇಲಕ್ಕೆ ಕಟ್ಟಿಬಿಡುತ್ತಾನೆ. ಅದು ಅವಳಿಗೆ ಎಟುಕುವುದಿಲ್ಲ. ಮಗು ಅಳಲಾರಂಭಿಸುತ್ತದೆ. ಅಂತಹ ಸನ್ನಿವೇಶದಲ್ಲಿ ಶಿವಪಾರ್ವತಿ ಕಾಣಿಸಿ ಕೊಂಡು ಉದ್ದನೆಯ ಹುಡುಗಿಯಾಗಿ ಮಾಡುತ್ತಾರೆ. ಈ ಕಥೆಯಲ್ಲಿ ಶಿವಪಾರ್ವತಿಯರು ಎರಡು ಕಡೆಗಳಲ್ಲಿ ಕಾಣಿಸಿಕೊಂಡಿರುವುದು ತಿಳಿಯುತ್ತದೆ. ಎರಡು ಕಥೆಗಳಲ್ಲಿಯೂ ನಾಯಕಿ ಕಷ್ಟಗಳನ್ನು ಅನುಭವಿಸುತ್ತಿರುತ್ತಾಳೆ. ಹೀಗೆಯೇ 'ಗೌಡನ ಮಕ್ಕಳು' ಕಥೆಯಲ್ಲಿ ಗೌಡನೊಬ್ಬನ ಇಬ್ಬರು ಮಕ್ಕಳು ತಮ್ಮ ತಂದೆಯ ಸಾವಿನ ನಂತರ ಚಿಕ್ಕಪ್ಪಂದಿರ ಮೋಸಕ್ಕೆ ಗುರಿಯಾಗಿ ದೂರವಾಗುತ್ತಾರೆ. ಅಣ್ಣನು ಹಲವಾರು ಕಷ್ಟಗಳನ್ನು ಅನುಭವಿಸಿ ಕೊನೆಗೆ ಹಲಸಿನ ಹಣ್ಣು ಮಾರುವವನ ಮನೆಯಲ್ಲಿ ಮೋಸಕ್ಕೆ ಒಳಗಾಗಿ ದುಃಖಿಸುತ್ತಿರುತ್ತಾನೆ. ಇಂತಹ ಸನ್ನಿವೇಶದಲ್ಲಿ ಶಿವಪಾರ್ವತಿ ಪ್ರತ್ಯಕ್ಷರಾಗಿ ಯುಕ್ತಿಯನ್ನು ಹೇಳಿಕೊಡುತ್ತಾರೆ. ಅದರ ಮೂಲಕ ಗೌಡನ ಮಗನು ಜಯವನ್ನು ಸಾಧಿಸುತ್ತಾನೆ.

ಇಷ್ಟು ಕಥೆಗಳನ್ನು ಗಮನಿಸಿದಾಗ ಶಿವಪಾರ್ವತಿಯರು ದುಃಖದ ಸಂಧರ್ಭದಲ್ಲಿಯೂ ಸಂತೋಷದ ಸಂಧರ್ಭದಲ್ಲಿಯೂ ಕಾಣಿಸಿಕೊಳ್ಳುವುದು ಗೊತ್ತಾಗುತ್ತದೆ. ಆದರೆ ದುಃಖದ ಸಂಧರ್ಭದಲ್ಲಿಯೇ[1]* ಹೆಚ್ಚಾಗಿ ಕಾಣಿಸಿಕೊಳ್ಳುತ್ತಾರೆ. (ಕಥೆಗಳು ಅಡಿ ಟಿಪ್ಪಣಿಯಲ್ಲಿ ನೋಡಿ). ಸಂತೋಷದ ಸಂಧರ್ಭಗಳಲ್ಲಿ[2]* ಶಿವಪಾರ್ವತಿಯರು ಅಪರೂಪವಾಗಿ ಕಾಣಿಸಿಕೊಳ್ಳುತ್ತಾರೆ. (ಕಥೆಗಳು ಅಡಿ ಟಿಪ್ಪಣಿಯಲ್ಲಿ ಕೊಡಲಾಗಿದೆ.)

ಅಡಿ ಟಿಪ್ಪಣಿ :-

1. * ರುಸ್ತುಮ
   * ಸುಳ್ಳಿನ ಮಹಿಮೆ
   * ಮೂರು ತಿಂಗ್ಳ ಗಂಡ್ನೆ ನನ್ನ ಬಿಟ್ಟು ಹೋಗ್ತೀಯ
   * ನಾಗೇಂದ್ರಸ್ವಾಮಿ ಮಗಳು
   * ಮಡಿಕೆ ಹೆಣ್ಣು
   * ಹುಡುಗನ ಸಾಹಸ
   * ಮೋಟು ಭಕ್ತಿ
   * ಗೌಡನ ಮಕ್ಕಳು
   * ಅಪ್ಪ ಕಂಡ ಸ್ವಪ್ನ
2. * ಕಾಶಿಯಾತ್ರೆ

ಇ) ಶಿವಪಾರ್ವತಿಯರು ಕಾಣಿಸಿಕೊಳ್ಳುವ ರೂಪಗಳು :-

ಜನಪದ ಕಥೆಗಳಲ್ಲಿ ಶಿವಪಾರ್ವತಿಯರು ತಮ್ಮ ನಿಜರೂಪಕ್ಕೆ ಬದಲಾಗಿ ಮುದುಕಿಯಾಗಿಯೋ ಮುದುಕನಾಗಿಯೋ ಕಾಣಿಸಿಕೊಳ್ಳುತ್ತಾರೆ. ಕೆಲವೊಮ್ಮೆ ತಮ್ಮ ಬದಲಿಗೆ ಇತರ ಪ್ರಾಣಿಗಳನ್ನು ಕಳುಹಿಸಿಕೊಡುವುದನ್ನು ಸಹಾ ಕಾಣುತ್ತೇವೆ. ಇಂತಹ ಕಥೆಗಳಲ್ಲಿ 'ಮೂರು ತಿಂಗ್ಳ ಗಂಡ್ನೆ ನನ್ನ ಬಿಟ್ಟು ಹೋಗ್ತೀಯ' ಕಥೆಯೂ ಒಂದಾಗಿದ್ದು, ಈ ಕಥೆಯಲ್ಲಿ ಪಾರ್ವತಿಯು ಮುದುಕಿಯ ರೂಪದಲ್ಲಿ ಕಾಣಿಸಿಕೊಂಡು ನಾಯಕಿಗೆ ಈ ಮಗು ನಿನ್ನದೇನಮ್ಮಾ ಎಂದಾಗ ನಾಯಕಿ ಇದು ನನ್ನ ಗಂಡ ಎನ್ನುತ್ತಾಳೆ. ಆಗ ಮುದುಕಿ ಈ ಪಟ್ನದ ದೊರೆಗೆ ಮದುವೆ ಮಾಡಿಸ್ತೀನಿ ಬಾ ಎನ್ನುತ್ತಾಳೆ. ಕೋಪದಿಂದ ನಾಯಕಿ, ಇನ್ನೊಂದು ಸಾರಿ ಹಾಗಂದೀಯ ಎಂದು ಹೊಡೆಯಲು ಹೋಗುತ್ತಾಳೆ. ಆಗ ಅಜ್ಜಿ ನನ್ನ ಹೊಡೆಯಬೇಡ ನಾನು ಪಾರ್ವತಿ ಎನ್ನುತ್ತಾಳೆ. ಹೀಗೆಯೇ ಮುದುಕನ ರೂಪದಲ್ಲಿ ಶಿವ 'ಹುಡುಗನ ಸಾಹಸ' ಎಂಬ ಕಥೆಯಲ್ಲಿ ಕಾಣಿಸಿಕೊಳ್ಳುತ್ತಾನೆ. ಪ್ರತ್ಯಕ್ಷನಾದ ಶಿವ ಕಷ್ಟ ಪಡುತ್ತಿರುವ ಹುಡುಗನನ್ನು ಕಂಡು 'ನೀನು ಹಿಂತಿರುಗು ಶಿವನನ್ನು ನೀನು ಕಾಣಲು ಸಾಧ್ಯವಿಲ್ಲ' ಎಂದಾಗ ಅದೆಷ್ಟು ಕಷ್ಟವಾದರೂ ಸರಿಯೇ ನೋಡಿಯೇ ತೀರುತ್ತೇನೆ ಎಂದಾಗ ಶಿವ ಮೆಚ್ಚಿ ತನ್ನ ನಿಜರೂಪ ತೋರುತ್ತಾನೆ. ಇನ್ನು ಕೆಲವು ಕಥೆಗಳಲ್ಲಿ ಶಿವ ತನ್ನ ಬದಲಿಗೆ ಇತರ ಪ್ರಾಣಿಗಳನ್ನು ಕಳುಹಿಸುತ್ತಾನೆ. 'ಮೋಟು ಭಕ್ತಿ' ಕಥೆಯಲ್ಲಿ ಮರಕ್ಕೆ ಜೋತು ಬಿದ್ದಿರುವ ಮೋಟುಭಕ್ತಿಯ ಶಿಷ್ಯನಿಗೆ ಶಿವ ಪ್ರತಿದಿನ ಹಾಲು ಕೊಟ್ಟು ಬರುವಂತೆ ಕಾಮಧೇನುವನ್ನು ಕಳುಹಿಸುತ್ತಾನೆ. ಇನ್ನು ಕೆಲವು ಕಥೆಗಳಲ್ಲಿ ಶಿವಪಾರ್ವತಿಯರು ತಮ್ಮ ನಿಜರೂಪದಲ್ಲಿಯೇ ಕಾಣಿಸಿಕೊಳ್ಳುತ್ತಾರೆ.

ಈ) ಶಿವಪಾರ್ವತಿಯರು ಸಹಾಯ ಮಾಡುವ ರೀತಿ :-

ಶಿವಪಾರ್ವತಿಯರು ಕೆಲವು ಸಂದರ್ಭಗಳಲ್ಲಿ ಪ್ರತ್ಯಕ್ಷವಾಗಿ ಮಂತ್ರಗಳನ್ನು ಅಥವಾ ಯುಕ್ತಿಗಳನ್ನು[1] ಹೇಳಿಕೊಡುವುದರಿಂದ, ಸ್ವತಃ ತಾವೇ ನೇರ ಸಹಾಯ[2] ಮಾಡುವ ಮೂಲಕ ಮತ್ತು ಇತರೇ ಪ್ರಾಣಿಗಳ[3] ಸಹಾಯದಿಂದಲೂ ನಾಯಕ, ನಾಯಕಿ ಅಥವಾ ಕೇಂದ್ರ ವ್ಯಕ್ತಿಯ ಸಮಸ್ಯೆಗಳನ್ನು ಬಗೆಹರಿಸುವ ರೀತಿಗಳನ್ನು ಕಾಣುತ್ತೇವೆ(ಒಟ್ಟು 10 ಕಥೆಗಳು ಇಲ್ಲಿ ಸೇರಿವೆ).

ಅಡಿ ಟಿಪ್ಪಣಿ :-

1. ಸುಳ್ಳಿನ ಮಹಿಮೆ
   ಗೌಡನ ಮಕ್ಕಳು
2. ರುಸ್ತುಮ
   ಮೂರು ತಿಂಗ್ಳ ಗಂಡ್ನೆ ನನ್ನ
   ಬಿಟ್ಟು ಹೋಗ್ತೀಯ
   ಕಾಶಿಯಾತ್ರೆ
   ಹುಡುಗನ ಸಾಹಸ
   ಮಡಿಕೆ ಹೆಣ್ಣು
   ನಾಗೇಂದ್ರ ಸ್ವಾಮಿ ಮಗಳು
   ಅಪ್ಪ ಕಂಡ ಸ್ವಪ್ನ
3. ಮೋಟು ಭಕ್ತಿ

'ರುಸ್ತುಮ' ಕಥೆಯಲ್ಲಿ ನಾಯಕಿಗೆ 2 ರೊಟ್ಟಿ, 1 ಮೊಗೆ ನೀರು, ಅವಳಿಗೆ ಹೆರಿಗೆಯ ನಂತರದಲ್ಲಿ ರೊಟ್ಟಿ, ನೀರಿನ ಜೊತೆಗೆ 1 ಮಿಳ್ಳೆ ಹಾಲು ಬರುವಂತೆ ಹೇಳುತ್ತಾರೆ. 'ಸುಳ್ಳಿನ ಮಹಿಮೆ' ಕಥೆಯಲ್ಲಿ ಇಲಿಗಳ ಕಾಟಕ್ಕೆ ಗುರಿಯಾದ ರೈತನಿಗೆ ಇಲಿಗಳು ಬರದಂತೆ ತಡೆಗಟ್ಟಲು ಯುಕ್ತಿಯನ್ನು ಹೇಳಿಕೊಡುವುದು, ಅಲ್ಲಿಗೆ ಇಲಿಗಳು ಬಂದಾಗ 'ನೀವು ಬಂದಿರುವುದು ಸುಳ್ಳು ನನ್ನ ಬೆಳೆಯನ್ನು ತಿನ್ನುವುದು ಸುಳ್ಳು' ಎಂದು ರೈತನು ಹೇಳುವುದರಿಂದ ಇಲಿಗಳು ಸಾಯುತ್ತವೆ. "ಮೂರು ತಿಂಗ್ಳ ಗಂಡ್ನೆ ನನ್ನ ಬಿಟ್ಟು ಹೋಗ್ತೀಯ" ಕಥೆಯಲ್ಲಿ ಮುದುಕಿಯ ರೂಪದಲ್ಲಿ ಕಾಣಿಸಿಕೊಂಡ ಪಾರ್ವತಿ ನಾಯಕಿಯ ಸತ್ಯಕ್ಕೆ ಮೆಚ್ಚಿ ತನ್ನ ನಿಜರೂಪದ ಜೊತೆಗೆ, ಶಿವನೂ ಪ್ರತ್ಯಕ್ಷವಾಗಿ 'ಈ ಮಗೂನೇ ನಿನ್ನ ಗಂಡಾಮ್ಮಾ, ಈತ ನೀರಿಗೆ ಬಿದ್ರೂ ಸಾಯಕ್ಕಿಲ್ಲ, ಬೆಂಕಿಗೆ ಬಿದ್ರೂ ಸಾಯೋದಿಲ್ಲ' ಎಂದು ವರವನ್ನು ನೀಡುತ್ತಾರೆ. "ನಾಗೇಂದ್ರಸ್ವಾಮಿ ಮಗಳು" ಕಥೆಯಲ್ಲಿ ಪ್ರತ್ಯಕ್ಷರಾದ ಶಿವಪಾರ್ವತಿ ನಾಯಕಿಗೆ ಹೇಳುತ್ತಾರೆ, ನಿನ್ನ ಸತ್ಯಕ್ಕೆ ಮೆಚ್ಚಿದೆ. ನಾಗೇಂದ್ರ ಸ್ವಾಮಿಗೆ ಎಣ್ಣೆಗೆ ಹಾಕಿದಕ್ಕೆ ನಿನಗಿಷ್ಟು ಕಷ್ಟ ಬಂತು. ನೀನು ನಾಗೇಂದ್ರಸ್ವಾಮಿ ಮಗಳಮ್ಮ. ನಿನ್ನ ಮಗನಿಗೆ ಪಟ್ಟ ಕಟ್ಟಿ, ನೀನು ನಿನ್ನ ಗಂಡ ಇಬ್ರೂ ದೀಕ್ಷೆ ತಗೊಂಡು ಕೆಂಡಕೊಂಡವಾಗಿ ಎಂದು ಹೇಳಿ ವರ ನೀಡಿ ಸಹಕರಿಸುತ್ತಾರೆ. 'ಕಾಶಿಯಾತ್ರೆ' ಕಥೆಯಲ್ಲಿ ಐಶ್ವವರ್ಯವಂತನಿಗೆ ಷರತ್ತನ್ನು ಹಾಕಿ ನಿನಗೆ ನರಕ ಬೇಕೋ ಅಥವಾ ಕೈಲಾಸವೇ ಬೇಕೋ ಎಂದು ಕೇಳಿ ಕೈಲಾಸ ಬೇಕೆಂದಾಗ ಅವನನ್ನು ಶಿವ ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಾನೆ. ಮಡಿಕೆ ಹೆಣ್ಣು ಕಥೆಯಲ್ಲಿ ಚೋಟುದ್ದ ನಾಯಕಿಯನ್ನು ಎರಡನೇ ಬಾರಿಗೆ ಪ್ರತ್ಯಕ್ಷರಾದ ಶಿವಪಾರ್ವತಿಯರು ಉದ್ದನೆಯ ಹುಡುಗಿಯಾಗಿ ರೂಪಿಸುತ್ತಾರೆ. 'ಹುಡುಗನ ಸಾಹಸ' ಕಥೆಯಲ್ಲಿ ಮುದುಕನ ರೂಪದಲ್ಲಿ ಕಾಣಿಸಿಕೊಂಡ ಶಿವ ಅವನ ಭಕ್ತಿಗೆ ಮೆಚ್ಚಿ ಅವನು ತಂದಿದ್ದ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ ಅವುಗಳ ಮೂಲಕವೇ ಈತ ಸುಖಿಯಾಗುವಂತೆ ಕರುಣಿಸುತ್ತಾನೆ. 'ಮೋಟು ಭಕ್ತಿ ಕಥೆಯಲ್ಲಿ ಶಿವ ಕಾಮಧೇನುವನ್ನು ಕಳುಹಿಸಿಕೊಟ್ಟು ಹಾಲನ್ನು ಕೊಟ್ಟು ಅದರ ಮೂಲಕವೇ ತನ್ನ ಆಸ್ಥಾನಕ್ಕೆ ಶಿಷ್ಯ ಮತ್ತು ಅವನ ಗುರು ಬರುವಂತೆ ಮಾಡಿಕೊಳ್ಳುತ್ತಾನೆ. ಹಲವರ ಮೋಸಕ್ಕೆ ಗುರಿಯಾಗಿ ದುಃಖಪಡುತ್ತಿದ್ದ ಹುಡುಗನೊಬ್ಬನಿಗೆ ಅತ್ರಂಡೆ ಬಿಡುಗಡೆ ಎಂಬ ಯುಕ್ತಿಯನ್ನು ಹೇಳಿಕೊಡುವ ಮೂಲಕ ಜಯವನ್ನು ಸಾಧಿಸಲು ಸಹಾಯ ಮಾಡುವ ಶಿವಪಾರ್ವತಿಯರು 'ಗೌಡನ ಮಕ್ಕಳು' ಕಥೆಯಲ್ಲೂ ಕಾಣಿಸಿಕೊಳ್ಳುತ್ತಾರೆ. 'ಅಪ್ಪ ಕಂಡ ಸ್ವಪ್ನ' ಕಥೆಯಲ್ಲಿ ಕಿರಿಯರಾಣಿಯ ಮಗನನ್ನು ಬಾವಿಗೆ ತಳ್ಳಿ ಹೋದ ಅಣ್ಣಂದಿರ ವಿಚಾರ ಕೇಳಿ ಶಿವಪಾರ್ವತಿಯರು ಕುದ್ರೆಯ ಸಹಾಯದಿಂದ ಜೀವಕಳೆಯನ್ನು ಕೊಡಿಸುತ್ತಾರೆ. ಹೀಗೆ ಒಂದೊಂದು ಕಥೆಯಲ್ಲಿ ಒಂದೊಂದು ರೀತಿಯಲ್ಲಿ ಸಹಾಯ ಮಾಡಿರುವುದನ್ನು ಕಾಣಬಹುದಾಗಿದೆ. ಶಿವಪಾರ್ವತಿಯರು ಮಾಡಿರುವ ಈ ಸಹಾಯಗಳನ್ನು ಕೆಲವು ಸಾಮಾನ್ಯ ಅಂಶಗಳಾಗಿ ವಿಂಗಡಿಸಬಹುದು. ಅವುಗಳಲ್ಲಿ -

* ನಿಬಂಧನೆ ಹಾಕುವುದು :- 'ಕಾಶಿಯಾತ್ರೆ' ಕಥೆಯಲ್ಲಿ ಐಶ್ವರ್ಯವಂತನಿಗೆ ಕೈಲಾಸ ಬೇಕೋ ಅಥವಾ ನರಕವೇ ಬೇಕೋ ಎಂದು ಕೇಳುವುದು.

* ಭವಿಷ್ಯದಲ್ಲಿ ನಡೆಯುವುದನ್ನು ಹೇಳುವುದು :- ಮೂರು ತಿಂಗ್ಳ ಗಂಡ್ನೆ ನನ್ನ ಬಿಟ್ಟು ಹೋಗ್ತೀಯ ಕಥೆಯಲ್ಲಿ ಕಾಣಿಸಿಕೊಂಡ ಶಿವಪಾರ್ವತಿಯರು "ಈ ಮಗೂನೇ ನಿನ್ನ ಗಂಡಾಮ್ಮಾ ಈತ ನೀರಿಗೆ ಬಿದ್ರೂ ಸಾಯೋದಿಲ್ಲ. ಬೆಂಕಿಗೆ ಬಿದ್ರೂ ಸಾಯೋದಿಲ್ಲ" ಎಂದು ಹೇಳುವುದು. ಹಾಗೆಯೇ 'ನಾಗೇಂದ್ರ ಸ್ವಾಮಿ ಮಗಳು' ಕಥೆಯಲ್ಲಿ ಪ್ರತ್ಯಕ್ಷ ರಾದ ಶಿವಪಾರ್ವತಿಯರು ನಿನ್ನ ಸತ್ಯಕ್ಕೆ ಮೆಚ್ಚಿದೆ. ನೀನು ನಾಗೇಂದ್ರಸ್ವಾಮಿ ಮಗಳಮ್ಮ, ನಿನ್ನ ಮಗನಿಗೆ ಪಟ್ಟ ಕಟ್ಟಿ, ನೀನು ನಿನ್ನ ಗಂಡ ಇಬ್ರೂ ದೀಕ್ಷೆ ತೆಗೆದು ಕೊಳ್ಳಿ ಎಂದು ಹೇಳುತ್ತಾರೆ.

* ವಿಶ್ಲೇಷಣೆಯನ್ನು ನೀಡುವುದು :- ನಾಗೇಂದ್ರ ಸ್ವಾಮಿಯ ಕಥೆಯಲ್ಲಿ ಶಿವಪಾರ್ವತಿ ಯರು ನಾಯಕಿಗೆ - ನೀನು ನಾಗೇಂದ್ರ ಸ್ವಾಮಿಯನ್ನು ಎಣ್ಣೆಗೆ ಹಾಕಿದ್ದಕ್ಕೆ ನಿನಗಿಷ್ಟು ಕಷ್ಟ ಬಂತು. ನಿನ್ನ ಸತ್ಯಕ್ಕೆ ಮೆಚ್ಚಿದೆ ಎಂದು ಹೇಳುತ್ತಾರೆ. ಹೀಗೆ ಕಾರಣವನ್ನು ವಿಶ್ಲೇಷಿಸಿ ಮಾತಾಡುವ ಕಾರಣದಿಂದ ಇದನ್ನು ವಿಶ್ಲೇಷಣೆಗೆ ಒಳಪಡಿಸಬಹುದು.

* ಯುಕ್ತಿಯನ್ನು ಹೇಳಿಕೊಡುವುದು :- 'ಸುಳ್ಳಿನ ಮಹಿಮೆ' ಕಥೆಯಲ್ಲಿ ಇಲಿಗಳು ಬಂದಾಗ 'ನೀವು ಬಂದಿರುವುದು ಸುಳ್ಳು ನನ್ನ ಬೆಳೆಯನ್ನು ತಿನ್ನುವುದು ಸುಳ್ಳು" ಎಂದು ರೈತನಿಗೆ ಹೇಳಿಕೊಡುವ ಮೂಲಕ ಇಲಿಗಳನ್ನು ಕೊಲ್ಲುವುದು, 'ಗೌಡನ ಮಕ್ಕಳು' ಕಥೆಯಲ್ಲಿ ಹಲವರ ಮೋಸಕ್ಕೆ ಗುರಿಯಾದ ಹುಡುಗನಿಗೆ ಅತ್ರಂಡೆ - ಬಿಡುಗಡೆ ಮಂತ್ರವನ್ನು ಹೇಳಿಕೊಟ್ಟು ಆ ಮೂಲಕ ಜಯವನ್ನು ಸಾಧಿಸಲು ಸಹಾಯ ಮಾಡುವುದನ್ನು ಕಾಣಬಹುದು. ಈ ಐದು ಕಥೆಗಳು ನಾಲ್ಕು ಅಂಶಗಳಿಗೆ ಒಳಪಟ್ಟಿದ್ದಾಗಿದೆ.

ತೀರ್ಮಾನಗಳು :-

ಕನ್ನಡಕ್ಕೆ ವಿಶೇಷವಾದ ಶಿವಪಾರ್ವತಿಯ ಆಶಯ ಬರುವ ರೀತಿ, ಬರುವ ಸಂಧರ್ಭ ಮುಂತಾದವುಗಳನ್ನು ನಾವು ಅಧ್ಯಯನ ಮಾಡುವಾಗ ಕೆಲವು ತೀರ್ಮಾನಗಳಿಗೆ ಬರಬಹುದು. ಈ ಆಶಯ ಯಾವುದೇ ಜಾಗದಲ್ಲಿ ಅಂದರೆ ಕಥೆಯ ಮೊದಲಲ್ಲಿ ಮಧ್ಯದಲ್ಲಿ ಅಥವಾ ಕೊನೆಯಲ್ಲಿಯಾದರೂ ಬರಬಹುದು. ಅದೇ ರೀತಿ ಬಂದು ಸಹಾಯ ಮಾಡುವಲ್ಲಿ ಕೂಡ ಬಹುನೆಲೆಗಳನ್ನು ಕಾಣುತ್ತೇವೆ. ದುಃಖದ ಸಂಧರ್ಭದಲ್ಲಿ ಅಥವಾ ಸಂತೋಷದ ಸಂಧರ್ಭದಲ್ಲಿ ಸಹಾ ಕಾಣಬಹುದು. ಸಹಾಯಗಳನ್ನು ತೆಗೆದುಕೊಂಡು ವಿಶ್ಲೇಷಿಸುವಾಗ ಆ ಸಹಾಯಗಳು

ಕೂಡ ನಾನಾ ವಿಧಗಳಲ್ಲಿರುತ್ತವೆ. ಕೆಲವು ಕಥೆಗಳಲ್ಲಿ ನಿಬಂಧನೆಯಾಗಿ ಬಂದರೆ ಮತ್ತೆ ಕೆಲವು ಕಥೆಗಳಲ್ಲಿ ಭವಿಷ್ಯದಲ್ಲಿ ಏನು ಮಾಡಬೇಕು ಎನ್ನುವುದಾಗಿರುತ್ತದೆ. ಕೆಲವುಗಳಲ್ಲಿ ಈಗ ಬಂದಿರುವ ಕಷ್ಟಕ್ಕೆ ವ್ಯಾಖ್ಯಾನವನ್ನು ಕೊಡುವುದಾಗಿರುತ್ತದೆ.

ಸಹಾಯದ ವಸ್ತುವನ್ನು (ಮಂತ್ರದಂಡ, ಕಲ್ಲು ಹಾಗೂ ಇತರೆ ವಸ್ತುಗಳು) ಈ ಕಥೆಗಳಲ್ಲಿ ಕೊಟ್ಟು ಪ್ರಯೋಗಿಸಿ ಕೊರತೆಯನ್ನು ಈಡೇರಿಸಿರುವುದಾಗಿ ಎಲ್ಲೂ ಕಂಡು ಬಂದಿಲ್ಲ, ಆದರೆ 'ರುಸ್ತುಮ' ಎನ್ನುವ ಒಂದು ಕಥೆಯಲ್ಲಿ ಮಾತ್ರ ನಾಯಕಿಗೆ 2 ರೊಟ್ಟಿ, 1 ಮೊಗೆ ನೀರು ಹಾಗೂ 1 ಮಿಳ್ಳೆ ಹಾಲು ಆಕೆ ಬಯಸಿದಾಗಲೆಲ್ಲ ಬರುವಂತೆ ಹೇಳಿದರೂ ಅದಕ್ಕೆ ಕಾರಣವಾಗುವ ಶಕ್ತಿಯಷ್ಟೇ ಕೊಟ್ಟು ಹೋಗುತ್ತಾರೆ.

ಪ್ರಪಂಚದ ಬೇರೆಡೆಯಲ್ಲಿಯೂ ನೋಡಲಾಗದ ಶಿವಪಾರ್ವತಿಯರನ್ನು ಇಲ್ಲಿ ಒಂದು ಹೊಸ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಈ ಆಶಯ ಯಾಂತ್ರಿಕವಾಗಿ ಒಂದು ಕ್ರಿಯೆಯನ್ನು ಮಾಡದೆ ಕಥೆಯ ಪ್ರಪಂಚದಲ್ಲಿ ಹಲವಾರು ರೀತಿಯಾಗಿ ಇರುವುದು ಇಲ್ಲಿ ಸ್ಪಷ್ಟವಾಗಿದೆ. ಇಂತಹ ಅಧ್ಯಯನ ಕನ್ನಡದ ಎಲ್ಲಾ ಶಿವಪಾರ್ವತಿ ಬರುವ ಕಥೆಗಳಲ್ಲೂ ಪ್ರಯೋಗಿಸ ಬಹುದು. ಆಗ ಶಿವ ಪಾರ್ವತಿ ಆಶಯದ ಎಲ್ಲಾ ತಾತ್ವಿಕ ಅಂಶಗಳನ್ನು ತಿಳಿಯಲಾಗುವುದು. ಅಂತಹ ಅಧ್ಯಯನಕ್ಕೆ ಪ್ರಾರಂಭವಾಗಿ ಈ ಪ್ರಯತ್ನ ಕೈಗೊಳ್ಳಲಾಗಿದೆ.*

ಗ್ರಂಥ ಋಣ

1. ರಾಮೇಗೌಡ ದೊ.ನ, ನಮ್ಮೂರಿನ ಜನಪದ ಕಥೆಗಳು ತ.ವೆಂ. ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿಪುರಂ, ಮೈಸೂರು 4, 1975.
2. ಜಯಚಂದ್ರ ಎಂ.ಎ., 115 ಜನಪದ ಕಿರುಕತೆಗಳು, ಪ್ರಸಾರಾಂಗ, ಬೆಂ.ವಿ.ವಿ., 1977.
3. ರಾಮಚಂದ್ರೇಗೌಡ ಪಿ.ಶಿ., ಹಾಸನ ಜಿಲ್ಲೆಯ ಜನಪದ ಕಥೆಗಳು, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 1980.
4. ರಾಜಪ್ಪ ಬಿ.ಎಸ್., 'ರಾಯಚೂರು ಜಿಲ್ಲೆಯ ಜನಪದ ಕಥೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., 1976.
5. ಬೋರೇಗೌಡ ಬಳದರೆ 'ಗ್ರಾಮಾಂತರ ಕಥೆಗಳು,' ಪ್ರಬುದ್ಧ ಪ್ರಕಾಶನ, ಮೈಸೂರು 6, 1970.

---

* ಅಖಿಲಭಾರತ 7ನೇಯ ಜಾನಪದ ಸಮ್ಮೇಳನ (ಫಾಸಿಲ್ಸ್)ದಲ್ಲಿ 3.10.98 ರಂದು ಮಂಡಿಸಿದ ಪ್ರಬಂಧ.

ಸಾಂಸ್ಕೃತಿಕ ಕೇಂದ್ರವಾಗಿ ನಾಗಾವಿ

ಡಾ. ಸಿ. ನಾಗಭೂಷಣ.

ಪ್ರಾಚೀನ ಕಾಲದಲ್ಲಿ ಶಿಕ್ಷಣವು ಮಹತ್ವದ ಪಾತ್ರ ವಹಿಸಿದ್ದಿತು. ಚಾರಿತ್ರ್ಯದ ನಿರೂಪಣೆ, ಗುರುಗಳ ನೇತೃತ್ವದಲ್ಲಿನ ಬ್ರಹ್ಮಚರ್ಯದ ನಿಷ್ಠಾಜೀವನ ಅನಾದಿ ಕಾಲ ದಿಂದಲೂ ಪವಿತ್ರವೂ, ಧರ್ಮಸಂಸ್ಕೃತಿಗಳ ಆಗರವೂ ಆದುದೆಂದು ಭಾವಿಸಿದ್ದ ವೈದಿಕ ಸಾಹಿತ್ಯ ಹಾಗೂ ಇನ್ನಿತರ ಸಾಹಿತ್ಯದ ಸಂರಕ್ಷಣೆ, ವ್ಯಕ್ತಿಗಳಲ್ಲಿಯ ಸಾಮಾಜಿಕ ದಕ್ಷತೆ, ಹೊಣೆಗಾರಿಕೆ, ಜನಾಂಗದ ಸಂಸ್ಕೃತಿಯ ರಕ್ಷಣೆಗಳಂತಹ ಕರ್ತವ್ಯಗಳನ್ನು ಅದು ನಿರ್ವಹಿಸಬೇಕಾಗಿದ್ದಿತು.

ಬೌದ್ಧ ಶಿಕ್ಷಣಪದ್ಧತಿ ಕನ್ನಡ ನಾಡಿನಲ್ಲಿ ಪೂರ್ವದಿಂದಲೂ ಅಸ್ತಿತ್ವದಲ್ಲಿದ್ದ ಶಿಕ್ಷಣದ ಮೇಲೆ ಪ್ರಭಾವವನ್ನು ಬೀರಿತು. ಇದರ ಪರಿಣಾಮದಿಂದಾಗಿ ವೈಯಕ್ತಿಕವಾಗಿ ನಡೆದು ಕೊಂಡು ಬರುತ್ತಿದ್ದ ಗುರುಕುಲಾಶ್ರಮಗಳ ಜೊತೆಗೆ ವ್ಯವಸ್ಥಿತ ರೀತಿಯಲ್ಲಿ ಸಂಘಟಿಸಲ್ಪಟ್ಟ ಉಚ್ಚತಮ ಶಿಕ್ಷಣ ಸಂಸ್ಥೆಗಳು ಅಸ್ತಿತ್ವಕ್ಕೆ ಬರಲಾರಂಭಿಸಿದವು. ಮಾನ್ಯಖೇಟ ಕಲ್ಯಾಣ ಗಳಂತಹ ರಾಜಧಾನಿಗಳು ಬಳ್ಳಿಗಾವೆ, ತಂಬಳಗಳಂತಹ ಪುಣ್ಯಕ್ಷೇತ್ರಗಳು, ವಿದ್ವಜ್ಜನರನ್ನು ಆಕರ್ಷಿಸಿ ಕಾಲಾನುಕ್ರಮದಲ್ಲಿ ಉನ್ನತಶಿಕ್ಷಣ ಕೇಂದ್ರಗಳಾದವು. ಇಂತಹ ಸಂಘಟಿತ ಸಂಸ್ಥೆಗಳ ಜೊತೆಗೆ ಅಗ್ರಹಾರ, ಬ್ರಹ್ಮಪುರಿಗಳೆಂಬ ಬ್ರಾಹ್ಮಣ ಪಂಡಿತರ ವಸತಿಗಳು ತಮ್ಮದೇ ರೀತಿಯಲ್ಲಿ ಶಿಕ್ಷಣದ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದವು.

ಬೌದ್ಧ ಶಿಕ್ಷಣ ಪದ್ಧತಿಯಿಂದ ಪ್ರಭಾವಿತವಾಗಿ ಅಸ್ತಿತ್ವಕ್ಕೆ ಬಂದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಘಟಿಕಾಲಯಗಳು ಪ್ರಮುಖವಾಗಿದ್ದವು. ಬಳ್ಳಿಗಾವೆ, ಕರಡ್‌ಖೇಡ, ಹಂಚೇರು, ಬೆಲಹೋಡು, ತೇರದಾಳ, ಎಲೆವಾಳ, ಸಾಲೊಟಗಿ, ಕಡಲೆವಾಡ, ಹೂವಿನಬಾಗೆ, ಹೊಟ್ಟೂರು ಗಳು ಘಟಿಕಾಲಯಗಳನ್ನು ಹೊಂದಿದ್ದು ಉನ್ನತ ವಿದ್ಯಾಚಟುವಟಿಕೆಗಳಲ್ಲಿ ತೊಡಗಿದ್ದವು ಎಂಬುದು ಶಾಸನಗಳಿಂದ ತಿಳಿದು ಬರುತ್ತದೆ. ಈ ಘಟಿಕಾಲಯಗಳಲ್ಲಿ ಅತ್ಯಂತ ಪ್ರಮುಖವೂ, ತಕ್ಷಶಿಲೆ, ನಳಂದದಂತಹ ಪ್ರಾಚೀನ ವಿಶ್ವವಿದ್ಯಾಲಯಗಳನ್ನು ನೆನಪಿಸುವಂತಹ ಇಡೀ ದಕ್ಷಿಣ ಭಾರತದಲ್ಲಿಯೇ ಅತ್ಯಂತ ವ್ಯವಸ್ಥಿತವಾದ ಘಟಿಕಾಲಯವು ಈಗಿನ ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೋಕಿನ ನಾಗಾವಿಯ ಘಟಿಕಾಲಯವಾಗಿದೆ.

'ಘಟಿಕಾ ಸ್ಥಾನ' ಪದವು ಉನ್ನತ ವಿದ್ಯಾಕೇಂದ್ರವನ್ನು ಸೂಚಿಸುತ್ತದೆ. ಘಟಿಕಾಲಯಗಳ ಸ್ವರೂಪದ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಘಟಿಕಾಸ್ಥಾನ ಎಂದರೆ ಧಾರ್ಮಿಕ

ಕೇಂದ್ರ (Religious centre) ಎಂಬ ಅಭಿಪ್ರಾಯ[1] ಒಂದೆಡೆ ಇದ್ದರೆ ಮತ್ತೊಂದೆಡೆ 'ಬ್ರಾಹ್ಮಣರು ಒಂದೆಡೆ ಸೇರುತ್ತಿದ್ದ ಸಾರ್ವಜನಿಕ ಮಂದಿರ'[2] ಎಂಬ ಅಭಿಪ್ರಾಯ ಇದೆ.

ವಿಶಾಲಾರ್ಥದಲ್ಲಿ ಘಟಿಕಾಲಯದ ಸ್ವರೂಪವನ್ನು ಒಬ್ಬ ವಿದ್ವಾಂಸರು ಈ ರೀತಿಯಲ್ಲಿ ಅರ್ಥೈಸಿದ್ದಾರೆ. ಉಪಾಧ್ಯಾಯರೂ ವಿದ್ಯಾರ್ಥಿಗಳೂ ಕೂಡಿಯೇ ಚರ್ಚೆ ನಡೆಯಿಸುತ್ತಿದ್ದ, ಮಹಾ ವಿದ್ವಾಂಸರ ಸಂಪರ್ಕದಿಂದ ಧಾರ್ಮಿಕ ವಿಷಯದಲ್ಲಿ ಅತ್ಯುತ್ತಮ ಜ್ಞಾನವನ್ನು ಪಡೆಯಲು ಸಾಧ್ಯವಾದ ಉಚ್ಚತಮ ಸಂಸ್ಥೆಯೇ ಘಟಿಕಾಲಯ.[3]

ಮೇಲಿನ ವಿವರಗಳಲ್ಲಿ ಅಗ್ರಹಾರಗಳ ಮುಂದುವರೆದ ರೂಪವೇ ಘಟಿಕಾಲಯ ಎನ್ನುವ ಅರ್ಥ ಮೇಲ್ನೋಟಕ್ಕೆ ಗ್ರಹಿತವಾಗುತ್ತದೆ. ಘಟಿಕಾಲಯಗಳಲ್ಲಿ ವೇದಗಳಂತಹ ಧಾರ್ಮಿಕ ಸಾಹಿತ್ಯದ ಜೊತೆಗೆ ಶಾಸ್ತ್ರಗಳಂತಹ ವಿಷಯದಲ್ಲಿಯೂ ಕಲಿಯಲು ಅವಕಾಶ ಇದ್ದುದರ ಬಗೆಗೆ ನಾಗಾವಿ, ಬಳ್ಳಿಗಾವೆ ಶಾಸನಗಳಲ್ಲಿ ಉಲ್ಲೇಖ ಇರುವುದರಿಂದ ಧಾರ್ಮಿಕ ಸಾಹಿತ್ಯದ ಅಧ್ಯಯನಗಳಿಗಷ್ಟೇ ಅವು ಸೀಮಿತವಾಗಿರಲಿಲ್ಲ ಎಂದು ಹೇಳಬಹುದು. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸಮಯಕ್ಕೆ ಹೆಚ್ಚಿನ ಮಹತ್ವ ಇದ್ದಿತು. 'ಘಟೀ' ಎನ್ನುವುದು ಘಳಿಗೆಯ ಸೂಚಕವಾದ ಅಳತೆ, ಘಳಿಗೆಯನ್ನು ಅಳೆಯುವ ಘಟಿಕಾ ಯಂತ್ರಗಳ ಬಳಕೆ. ಅದನ್ನು ನೋಡಿಕೊಳ್ಳುವಂತಹ ಘಟಿಕಾ ಪ್ರಹಾರಿಗಳು ಇದ್ದರು ಎಂಬುದು ನಾಗಾವಿ ಶಾಸನದ ವಿವರಣೆಯಿಂದ ತಿಳಿದು ಬರುತ್ತದೆ. ಘಟಿಕಾಲಯಗಳ ಬಗೆಗೆ ಅಧಿಕೃತ ವಿವರಣೆ ಸಾಧ್ಯವಾಗಿಲ್ಲವಾದರೂ ಅದು ಉನ್ನತ ವಿದ್ಯಾ ಚಟುವಟಿಕೆಗಳ ಕೇಂದ್ರ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ.

ನಾಗಾವಿಯು ನಾಗವಾಪಿ, ನಾಗವಾವಿ, ನಾಗಾಯಿ ಎಂಬ ಪರ್ಯಾಯ ಹೆಸರುಗಳಿಂದಲೂ ಗುರುತಿಸಲ್ಪಡುತ್ತಿತ್ತು. ನಾಗವಾಪಿಯು ನಾಗ ಮತ್ತು ವಾಪಿ ಎಂಬ ಎರಡು ಅರ್ಥಗಳಿಂದ ಕೂಡಿದುದಾಗಿದೆ. ವಾಪಿಯ ಅರ್ಥ ಬಾವಿ. ನಾಗವಾವಿ ಹೆಸರೇ ಅಪಭ್ರಂಶವಾಗಿ ನಾಗಾಯಿ ಆಗಿರಬಹುದು. ವರ್ಷದ ಎಲ್ಲಾ ಕಾಲದಲ್ಲಿಯೂ ನೀರು ಉಕ್ಕುವಂತಿರುವ ಚಿಲುಮೆ ಈಗಲೂ ಇಲ್ಲಿ ಕಂಡು ಬರುತ್ತದೆ. ಚಿಲುಮೆಯು ಮುಕ್ತ ಬಾವಿಯೋಪಾದಿಯಲ್ಲಿ ಕಲ್ಲುಗಳಿಂದ ಆವೃತವಾಗಿದೆ. ಅಷ್ಟರವರೆಗೆ ನೀರು ನಿಂತಿದ್ದು ಮಿಕ್ಕ ನೀರು ಕಾಲುವೆ ಮೂಲಕ ತನ್ನಷ್ಟಕ್ಕೆ ತಾನೇ ಹರಿದು ಹೋಗುತ್ತದೆ. ಕ್ರಿ.ಶ. 1058ರ ಶಾಸನದಲ್ಲಿಯ[4] ವಿವರಣೆಯ ಪ್ರಕಾರ ಇದರ ಹೆಸರು ರಾಮತೀರ್ಥ. ನಿರ್ಮಾಣ ಮಾಡಿದವನು ಕಾಳಿದಾಸಯ್ಯ ದಂಡನಾಯಕ.

---

1. ಕೆ. ಬಿ. ಪಾಠಕ್ : ಇಂಡಿಯನ್ ಆ್ಯಂಟಿಕ್ವಯರಿ, ಸಂ.14, ಪು.24.
2. ಬಿ.ಎಲ್. ರೈಸ್ : ಮೈಸೂರು ಮತ್ತು ಕೂರ್ಗ್ ಫ್ರಂ ಇನ್ ಸ್ಕ್ರಿಪ್‌ಶನ್ಸ್, ಪು. 77.
3. ಎಸ್.ವಿ. ವೆಂಕಟೇಶ್ವರ, ಇಂಡಿಯನ್ ಕಲ್ಚರ್ ಥ್ರೂ ದಿ ಏಜಸ್-1, ಪು. 243-244.
4. ಹೈದರಾಬಾದ್ ಆರ್ಕಿಯಾಲಾಜಿಕಲ್ ಸೀರೀಸ್-8, ಪು. 11-12.

ನಾಗಾವಿ ಪ್ರಾಚೀನ ಅರಸುಮನೆತನಗಳ ಕಾಲದಿಂದಲೂ ಅಗ್ರಹಾರ, ಬ್ರಹ್ಮಪುರಿಯಾಗಿದ್ದು ನಂತರ ಘಟಿಕಾಲಯವಾಗಿ ಮಾರ್ಪಟ್ಟಿತ್ತು. ರಾಷ್ಟ್ರಕೂಟ ಅರಸು ಮನೆತನದ 4ನೇ ಗೋವಿಂದನು ತನ್ನ ಪಟ್ಟಾಭಿಷೇಕ ಕಾಲದಲ್ಲಿ 600 ಅಗ್ರಹಾರಗಳಿಗೆ ಮತ್ತು 800 ವಿದ್ಯಾರ್ಥಿಗಳಿಗೆ ದತ್ತಿ ಬಿಟ್ಟ ವಿಷಯವನ್ನು ಶಿಲಾಶಾಸನಗಳು ಹೇಳುತ್ತವೆ. ಆ ವೇಳೆಗಾಗಲೇ ನಾಗಾವಿ ಮಹಾಗ್ರಹಾರವಾಗಿತ್ತೆಂಬುದು ಸಂಶೋಧಕರ ಅಭಿಪ್ರಾಯ.

ನಾಗಾವಿಯ ರಾಮೇಶ್ವರ ದೇವಾಲಯದ ಜೊತೆಗೆ ಇದ್ದ ಸತ್ರ ಮತ್ತು ವಿದ್ಯಾಕೇಂದ್ರಕ್ಕಾಗಿ ಭೂಮಿದಾನವನ್ನು ನೀಡಿರುವುದನ್ನು ರಾಷ್ಟ್ರಕೂಟರ ಕಾಲದ ಕ್ರಿ.ಶ. 969ರ ನಿತ್ಯವರ್ಷದೇವನ ಶಾಸನವು ಉಲ್ಲೇಖಿಸಿದೆ. [5]

ರಾಷ್ಟ್ರಕೂಟರ ಕಾಲದಲ್ಲಿ ವ್ಯವಸ್ಥಿತವಾದ ಅಗ್ರಹಾರ ಕೇಂದ್ರವಾಗಿತ್ತು ಎಂಬುದು ಕ್ರಿ.ಶ. 1058ರ ಶಾಸನದಲ್ಲಿಯ 'ಚತುರ್ವೇದ ಪಾರವಾರ ಪಾರಗವುರೆನಿಸಿದ ನಾಲ್ನೂರ್ವರ್ವಿಪ್ರೋತ್ತಮರ್ಗೆ ಭರಣಂಗೆಯ್ಸಲಭಿನವ ಬ್ರಹ್ಮಲೋಕಮಿದೆಂಬನ್ನು ನೆಗಳ್ತೆವೆತ್ತ ಸಕಳ ವಸುಮತೀ ತಳಕ್ಕೆ ತಲೆಯಿದೆನಿಸಿ ನೆಗಳ್ದ ಕುಂತಳ ಮಹೀತಳಕ್ಕೆ ತಿಳಕಮಪ್ಪನಿರ್ದ ಮಹಾಗ್ರಹಾರ ನಾಗಾವಿ' ಎಂಬ ಉಲ್ಲೇಖದಿಂದ ತಿಳಿದು ಬರುತ್ತದೆ.[6] ಕ್ರಿ.ಶ. 993ರಲ್ಲಿ ಹೈಹಯವಂಶದ ಮಹಾಮಂಡಲೇಶ್ವರ ಶಿರಸರನು ನಾಗವಾಪಿಯಲ್ಲಿ ಜ್ಞಾನದಾನ ಅಖಂಡವಾಗಿ, ಅವ್ಯಾಹತವಾಗಿ ನಡೆಯಲೆಂದು ಸಾಕಷ್ಟು ಭೂಮಿ ಸೀಮೆಗಳನ್ನು ದತ್ತಿ ಕೊಟ್ಟ ವಿಷಯ ಶಾಸನಗಳಲ್ಲಿ ವ್ಯಕ್ತವಾಗಿದೆ.

ನಾಗಾವಿಯು ಶಿಲಾಹಾರ, ರಾಷ್ಟ್ರಕೂಟರ ಕಾಲದಿಂದಲೂ ಅಗ್ರಹಾರವಾಗಿದ್ದು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಉನ್ನತ ಶಿಕ್ಷಣಕ್ಕೆ ಅವಕಾಶ ನೀಡುವಂತಹ ಘಟಿಕಾಲಯವಾಗಿ ಮಾರ್ಪಟ್ಟಿತು. ಕಲ್ಯಾಣಿ ಚಾಲುಕ್ಯ ದೊರೆ 1ನೇ ಸೋಮೇಶ್ವರನ ಕಾಲದಲ್ಲಿ ಮಧುವಪ್ಪರಸನ ಮಗನಾದ ಕಾಳಿದಾಸಯ್ಯ ದಂಡನಾಯಕನು ತ್ರೈಪುರುಷದೇವರ ಶಾಲೆಯನ್ನು, ಮಧುಸೂದನ ದೇವಾಲಯವನ್ನು, ತ್ರೈಪುರುಷ ದೇವರ ಶಾಲೆಯಲ್ಲಿ ಘಟಿಕಾಸ್ಥಾನವನ್ನು ನಿರ್ಮಾಣ ಮಾಡಿದ ಒಂದನೇ ಸೋಮೇಶ್ವರನು ಕೋಳೂರು ನೆಲೆವೀಡಿನಲ್ಲಿ ಇದ್ದಾಗ ದೊರೆಯಿಂದ ಪಾರಮೇಶ್ವರ ದತ್ತಿಯಾಗಿ ಪಡೆದ ಭೂಮಿಯನ್ನು ತ್ರೈಪುರುಷ ದೇವರ ಶಾಲೆಯಲ್ಲಿಯ ಘಟಿಕಾಲಯಕ್ಕೆ

---

5. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, ಸಂ. 11, ನಂ. 41.
6. ಶಾಸನ ಸಾಹಿತ್ಯ ಸಂಚಯ (ಸಂ। ಮೇವುಡಿ ಮಲ್ಲಾರಿ), ಪು. 42-43.
MS.

ಧಾರೆಯೆರೆದನೆಂದು ಶಾಸನದಿಂದ ತಿಳಿದುಬರುತ್ತದೆ.[7] ಕಾಳಿದಾಸಯ್ಯ ದಂಡನಾಯಕನು ನಾಗಾವಿಯಲ್ಲಿ ಸ್ಥಾನಿಕ ವಿದ್ಯಾಲಯ ಮಟ್ಟದ ವಿದ್ಯೆಗಾಗರವಾದ ಮಧುಸೂದನಾಲಯವನ್ನು, ಘಟಿಕಾಲಯವನ್ನು ನಿರ್ಮಿಸಿ ವಿದ್ಯಾಚಟುವಟಿಕೆಗಳು ನಿರಂತರವಾಗಿ ನಡೆಯಲು ದತ್ತಿಯನ್ನು ಬಿಟ್ಟು ಭಾರತೀಯ ಸಾಂಸ್ಕೃತಿಕ ಇತಿಹಾಸದಲ್ಲಿ ತನ್ನ ಹೆಸರನ್ನು ಚಿರಸ್ಥಾಯಿಯಾಗಿಸಿದ್ದಾನೆ.

ನಾಗಾವಿಯ ಘಟಿಕಾಲಯವು ಸನಿವಾಸ ವಿಶ್ವವಿದ್ಯಾಲಯವಾಗಿತ್ತು. ಅಲ್ಲಿ ಪ್ರಾಚೀನ ಭಾರತೀಯ ಪ್ರೌಢವಿದ್ಯೆಯ ಮಹತ್ವದ ಶಾಖೆಗಳೆಲ್ಲವನ್ನೂ ಬೋಧಿಸುತ್ತಿದ್ದರು. ಅಲ್ಲಿಯ ವಿವಿಧ ವಾಙ್ಮಯ ಶಾಖೆ, ಅದನ್ನು ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ, ಕಲಿಸುವ ಉಪಾಧ್ಯಾಯರು ಇತ್ಯಾದಿ ವಿವರಗಳು ಕ್ರಿ.ಶ. 1058ರ ಶಾಸನದಿಂದ ತಿಳಿದುಬರುತ್ತದೆ.

ಶಾಲೆಯಲೋದುವ ವೇದಾಧ್ಯಾಯಿಗಳಿನ್ನೂರ್ವರ್ಗ್ಗಂ ಶಾಸ್ತ್ರಾಧ್ಯಾಯಿಗಳಯ್ವದಿಂಬರ್ಗಂ ತದುಪಾಧ್ಯಾಯಿಗಳು, ಭಟ್ಟದರ್ಶನ, ನ್ಯಾಸ, ಪ್ರಭಾಕರ ವ್ಯಾಖ್ಯಾತೃಗಳ್ಮೂವರ್ಗ್ಗಂ ವೇದವನೋದಿಸುವುಪಾಧ್ಯಾಯಮ್ಮೂವರ್ಗ್ಗಂ, ಸಾಲೆಯ ಸರಸ್ವತೀ ಭಂಡಾರಿಗರಾರ್ವರ್ಗ್ಗೆಮನ್ತು 257 ಮಾಣಸನ ಆಶನಚ್ಛಾದನಕ್ಕಂ ಜೀರ್ಣೋದ್ಧಾರ ಖಂಡ ಸ್ಫುಟಿಥಾ ನವಸುಧಾಕರ್ಮಕ್ಕಂ ಗನ್ಧಾಕ್ಷತಪುಷ್ಪ ಧೂಪದೀಪ ನಿವೇದ್ಯಕ್ಕಂ ತ್ರೈಪುರುಷದೇವರ ಶಾಲೆಯ ಪರಿಷಮಾಣಿಯರ್ಗ್ಗೆ ಸರ್ವನಮಸ್ಯವಾಗಿ ಕೊಟ್ಟ ಕೆಯ್ಮಾಣಿಕೇಶ್ವರದ ಗಟ್ಟಿ ಬಡಗ ಮತ್ತರು ೧೦೦೦ : ಆ ಹೊಲಂ ನಾಗಾವಿಯ ದಿಗ್ಗವಿಗೆಯ ಅಜಿಲೂರ ಎಡೆವಾ ಅನದ ಕೆಳಗೆ, ಭಾಟ್ಟದರ್ಶನ ವ್ಯಾಖ್ಯಾತೃಗೆ ಮತ್ತರು 35, ನ್ಯಾಸ ವ್ಯಾಖ್ಯಾತೃಗೆ ಮತ್ತರು 30, ಪ್ರಭಾಕರ ವ್ಯಾಖ್ಯಾತ್ರ್ಸಗೆ ಮತ್ತರು 45, ಸರಸ್ವತಿ ಭಂಡಾರಿಗೆ ಮತ್ತರು 30, ಘಟಿಕಾ ಪ್ರಹಾರಿಗೆ ಮತ್ತರು 30.....

ಘಟಿಕಾಲಯದಲ್ಲಿ ವೇದಗಳನ್ನು ಅಧ್ಯಯನ ಮಾಡುವ 200 ವಿದ್ಯಾರ್ಥಿಗಳು, ಶಾಸ್ತ್ರವನ್ನು ಅಭ್ಯಸಿಸುವ 50 ವಿದ್ಯಾರ್ಥಿಗಳು, ವೇದಗಳನ್ನು ಕಲಿಸುವ ಮೂವರು ಅಧ್ಯಾಪಕರು, ಭಟ್ಟದರ್ಶನ, ನ್ಯಾಸಗಳಂತಹ ಶಾಸ್ತ್ರಗಳಲ್ಲಿ ಮನ್ನಣೆ ಪಡೆದ ಒಬ್ಬೊಬ್ಬ ಅಧ್ಯಾಪಕರು, ಸರಸ್ವತಿ ಭಂಡಾರಿ (ಗ್ರಂಥಪಾಲಕ), ಘಟಿಕೆ (ಗಂಟೆ) ಹೊಡೆಯುವ ಘಟಿಕಾ ಪ್ರಹಾರಿಗಳಿದ್ದು ಜೀವನೋಪಾಯಕ್ಕಾಗಿ ಅರ್ಹತೆಗನುಗುಣವಾಗಿ ವಿವಿಧಳತೆಯ ಮತ್ತರು ಭೂಮಿಯನ್ನು ಸಂಭಾವನೆಯಾಗಿ ಪಡೆದ ವಿವರ ತಿಳಿದು ಬರುತ್ತದೆ. ಘಟಿಕಾಲಯದಲ್ಲಿ ಪ್ರತಿಯೊಂದು ಕಾರ್ಯದಲ್ಲಿಯೂ ಸಮಯಕ್ಕೆ ಮಹತ್ವ ಇರುತ್ತಿದ್ದುದರಿಂದ ಘಟಿಕಾ ಯಂತ್ರಗಳನ್ನು ಸ್ಥಾಪಿಸಿ ಅದನ್ನು ನೋಡಿಕೊಳ್ಳಲು ಘಟಿಕಾ ಪ್ರಹಾರಿಗಳನ್ನು ನೇಮಿಸಿಕೊಂಡಿದ್ದರ ವಿವರ ತಿಳಿದು

---

7. ಅದೇ ಪು. 44.

ಬರುತ್ತದೆ. ಅಧ್ಯಯನದ ವಿಷಯಗಳು ವೇದ ಮತ್ತು ಶಾಸ್ತ್ರಗಳನ್ನು ಒಳಗೊಂಡಿದ್ದವು. 3 ವೇದಗಳ ಜೊತೆಗೆ ವ್ಯಾಕರಣ ಮತ್ತು ಮೀಮಾಂಸೆಗಳನ್ನು ಅಭ್ಯಸಿಸುತ್ತಿದ್ದರು. ಘಟಿಕಾಲಯದಲ್ಲಿ ಅತ್ಯುತ್ತಮ ಪುಸ್ತಕ ಭಂಡಾರ ಇದ್ದು ಬೋಧಿಸುವ ಗ್ರಂಥಗಳ ಜೊತೆಗೆ ಹೆಚ್ಚಿನ ಓದಿಗಾಗಿ ಇನ್ನೂ ಅನೇಕ ಆಕರ ಗ್ರಂಥಗಳನ್ನು ಸಂಗ್ರಹಿಸಲಾಗಿತ್ತು. ಅಚ್ಚುಕಟ್ಟಾದ ಪುಸ್ತಕ ಭಂಡಾರ ಇದ್ದು ಮೇಲ್ವಿಚಾರಣೆಗಾಗಿ ಸರಸ್ವತಿ ಭಂಡಾರಿಯೊಬ್ಬ ಇದ್ದು, ನಿಷ್ಠೆಯ ಕಾರ್ಯಕ್ಕಾಗಿ 30 ಮತ್ತರು ಭೂಮಿಯನ್ನು ಉಂಬಳಿಯಾಗಿ ಪಡೆದಿದ್ದನು.

ಹೈದರಾಬಾದ್ ಆರ್ಕಿಯಾಲಜಿಕಲ್ ಸೀರೀಸ್ 8ರ ಪು. 30 ಮತ್ತು 33ರಲ್ಲಿ ಪ್ರಕಟವಾಗಿರುವ ಕಲ್ಯಾಣಿ ಚಾಲುಕ್ಯರ ಕಾಲದ ಕ್ರಿ.ಶ. 1068, 1085ರ ನಾಗಾವಿಗೆ ಸೇರಿದ ಎರಡು ಶಾಸನಗಳಲ್ಲಿ ವ್ಯಕ್ತವಾಗಿರುವ ವಿಷಯಗಳು ಕ್ರಿ.ಶ. 1058ರ ಶಾಸನಕ್ಕೆ ಪೂರಕವಾಗಿರುವುದಲ್ಲದೆ ನಾಗಾವಿಯಲ್ಲಿದ್ದು ವಿದ್ಯಾಸಂಸ್ಥೆಯ ವ್ಯಾಪ್ತಿಯನ್ನು, ಇನ್ನಿತರ ಸಾಂಸ್ಕೃತಿಕ ಅಂಶಗಳನ್ನು ತಿಳಿಯುವುದಕ್ಕೆ ನೆರವಾಗಿವೆ. ಇಲ್ಲಿಯವರೆಗೂ ಕ್ರಿ.ಶ. 1058ರ ಶಾಸನದಲ್ಲಿಯ ವಿವರಗಳನ್ನು ಅನುಸರಿಸಿ ನಾಗಾವಿಯು ಘಟಿಕಾಲಯವಾಗಿತ್ತು ಎಂಬುದನ್ನು ಮಾತ್ರ ಗಮನಿಸಲಾಗಿತ್ತು. ಈ ಶಾಸನಗಳ ವಿವರದಿಂದ ನಾಗಾವಿಯ ಮಧುಸೂದನ ದೇವಾಲಯವು ಕೇವಲ ಘಟಿಕಾಲಯ ಮಾತ್ರವಾಗಿರದೆ ಆ ಕಾಲದಲ್ಲಿ ಸಾಮಾಜಿಕ ಸಂಸ್ಥೆಯಾಗಿಯೂ ಪ್ರಮುಖ ಪಾತ್ರ ವಹಿಸಿತ್ತು ಎಂಬುದಾಗಿ ತಿಳಿದು ಬರುತ್ತದೆ. ಕ್ರಿ.ಶ. 1068 ರ ಶಾಸನದಲ್ಲಿಯ ವಿವರವು ನಾಗಾವಿಯ ಮಧುಸೂದನ ದೇವಾಲಯದ ವಿದ್ಯಾ ಚಟುವಟಿಕೆಗಳ ವ್ಯಾಪ್ತಿಯನ್ನು ವಿಸ್ತೃತವಾಗಿ ತಿಳಿಸುತ್ತದೆ. ಏಕದಂಡಿ, ತ್ರಿದಂಡಿ, ಸ್ನಾತಕ, ಬ್ರಹ್ಮಚಾರಿ, ಹಂಸ, ಪರಮಹಂಸ, ಅನುಷ್ಠಾನಿಗಳು, ವೇದ ವೇದಾಂಗವನ್ನು ಅಭ್ಯಸಿಸುವ ವಿದ್ಯಾರ್ಥಿವರ್ಗಶ್ರೇಣಿ ಇದ್ದು ಪ್ರತಿಯೊಂದು ಶ್ರೇಣಿ, ವರ್ಗವೂ ತನ್ನದೇ ಆದ ಭವನಗಳನ್ನು ಹೊಂದಿತ್ತು. ಇತರೆ ಅಧ್ಯಾಪಕ ವರ್ಗಗಳೂ ಇದ್ದವು. ಅಂತಹವುಗಳೆಂದರೆ ಜನ್ನಯ ಭಟ್ಟೋಪಾಧ್ಯಾಯರು, ಬ್ರಹ್ಮಪುರಿ ದೋಣಯ ಭಟ್ಟರು, ಶಿಕ್ಷಾ, ವ್ಯಾಕರಣ.

ಛಂದಸ್ಸು, ನಿರುಕ್ತ, ಜ್ಯೋತಿಷ್ಯ ಕಲ್ಪಗಳಲ್ಲಿ ಬಲ್ಲವರಾದ ಮೂವರು ಘಡಂಗಿಗಳು, ಸಂಜೆ ಮಠದಲ್ಲಿ ಪುರಾಣವಾಚಿಸುವ ಪುರಾಣಭಟ್ಟ ಇತ್ಯಾದಿಯವರು ಜ್ಞಾನ ಪ್ರಸಾರ ಕಾರ್ಯದಲ್ಲಿ ನಿರತರಾಗಿದ್ದು ಜೀವನೋಪಾಯಕ್ಕೆ ಅರ್ಹತೆಗನುಗುಣವಾಗಿ ಹಲವು ಮತ್ತರು ಭೂಮಿಯನ್ನು ದತ್ತಿಯಾಗಿ ಪಡೆದಿದ್ದರು.

ಕ್ರಿ.ಶ. 1058ರ ಕಾಲಕ್ಕೆ ಉನ್ನತ ಶಿಕ್ಷಣದ ಕಲಿಕೆಗೆ ಆಗರವಾಗಿದ್ದ ನಾಗಾವಿಯು ಕ್ರಿ.ಶ. 1085ರ ವೇಳೆಗೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ಸಾಂಸ್ಕೃತಿಕ ಚಟುವಟಿಕೆಗಳಿಗೂ ಅವಕಾಶವನ್ನು ಕಲ್ಪಿಸಿಕೊಟ್ಟು ಲಲಿತಕಲೆಗಳ ನೆಲೆವೀಡು ಆಗಿತ್ತು. ಪ್ರಾಚೀನ ಕಾಲದಲ್ಲಿ

ದೇವಸ್ಥಾನಗಳು ಸಾಮಾಜಿಕ, ಸಾಂಸ್ಕೃತಿಕ ಕೇಂದ್ರಗಳ ನೆಲೆವೀಡಾಗಿ ವ್ಯವಸ್ಥಿತವಾದ ಸಂಸ್ಥೆಗಳಾಗಿದ್ದು ಜನತೆಯ ಮೇಲೆ ಪ್ರಭಾವವನ್ನು ಬೀರಿದ್ದವು ಎಂಬುದನ್ನು ಶಾಸನಗಳು ಹಾಗೂ ಇನ್ನಿತರ ಆಧಾರಗಳಿಂದ ತಿಳಿಯಬಹುದಾಗಿದೆ. ದೇವಸ್ಥಾನಗಳು ಪ್ರಾಚೀನ ಕರ್ನಾಟಕದ ಜನಜೀವನದ ಅವಿಭಾಜ್ಯ ಅಂಗವಾಗಿ ಕಾಣಿಸಿಕೊಂಡಿವೆ. *ಹನ್ನೊಂದನೆಯ ಶತಮಾನದಲ್ಲಿ ನಾಗಾವಿಯಲ್ಲಿದ್ದ ಮಧುಸೂದನ ದೇವಾಲಯವು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮಹತ್ತರವಾದ ಸ್ಥಾನವನ್ನು ಪಡೆದಿತ್ತು ಎಂಬುದು ಕ್ರಿ.ಶ. 1068, 1088ರ ಶಾಸನಗಳಲ್ಲಿಯ ವಿವರದಿಂದ ತಿಳಿದು ಬರುತ್ತದೆ.

ದೇವಸ್ಥಾನದ ವಿವಿಧ ಕಾರ್ಯಚಟುವಟಿಕೆಗಳಿಗಾಗಿ ಬೇರೆ ಬೇರೆ ಜವಾಬ್ದಾರಿಯನ್ನು ಹೊತ್ತ ಕಾರ್ಯನಿರತ ಅಧಿಕಾರವರ್ಗಗಳಿದ್ದವು ಎಂಬುದು ಶಾಸನಗಳಿಂದ ತಿಳಿದು ಬರುತ್ತಿದ್ದು, ಈ ಶಾಸನದಲ್ಲಿಯ ವಿವರವೂ ಕೂಡ ಮಧುಸೂದನ ದೇವಾಲಯವು ವಿವಿಧ ರೀತಿಯ ಕಾರ್ಯನಿರತ ವ್ಯಕ್ತಿಗಳ ಉಲ್ಲೇಖ, ಅವರ ಜೀವನೋಪಾಯಕ್ಕಾಗಿ ನೀಡಿದ ದತ್ತಿಯ ಬಗೆಗೆ ತಿಳಿಸುತ್ತದೆ. ಅಂತಹವರೆಂದರೆ, ದೇವಾಲಯವು ಶಿಥಿಲವಾದರೆ ಜೀರ್ಣೋದ್ಧಾರ ಮಾಡುವಂತಹ ಕಲುಕುಟಿಕ (ಜೀರ್ಣೋದ್ಧಾರದ ಬೆಸಕ್ಕೆ ಕೊಲ್ಲನುಣ್ಣು ಮಾಡುವ) ವೋಜುಗಳು ನಾಲ್ವರು, ಪೂಜೆಯ ಸಮಯದಲ್ಲಿ ಘಂಟೆಯನ್ನು ಬಾರಿಸುವ ದೇವರ ಘಟಿಗೆಯ ಮಾಣಿಗಳು ನಾಲ್ವರು, ಬ್ರಹ್ಮಚರ್ಯನಕ್ತ ಬೋಜನ ಮಧಶಯನದಿಂದ ದೇವರಂ ಪೂಜಿಸುವ ದೇಹಾರಿಗಳೀರ್ವರು, ದೇವರಿಗೆ ನೈವೇದ್ಯವನ್ನು ತಯಾರು ಮಾಡುವ ಬಾಣಸಿಗರು, ಕಾಪಿನ ಘಟಿಯರು ಮೂವರು, ದೇವರ ಪಳವಿಗೆ ಅಥವಾ ಧ್ವಜವನ್ನು ಹೊರುವ ಪಾಳವಿಗಳಿಬ್ಬರು, ಮದ್ದಳೆಯನ್ನು ಬಾರಿಸುವ ಮದ್ದಳಿಕಾರರು ನಾಲ್ವರು ಇದ್ದು ಜೀವನದ ನಿರ್ವಹಣೆಗಾಗಿ ಭೂಮಿಯನ್ನು ಉಂಬಳಿಯಾಗಿ ಪಡೆದಿದ್ದರು ಎಂಬುದಾಗಿ ತಿಳಿದು ಬರುತ್ತದೆ.

ದೇವಾಲಯದ ಗರ್ಭಗುಡಿಯ ದೇವತಾ ವಿಗ್ರಹದ ಮುಂದುಗಡೆಯ ರಂಗದಲ್ಲಿ ನರ್ತಕಿಯರಿಂದ ನಡೆಯುವ ಗೀತ-ನೃತ್ಯಗಳಾದ ರಂಗಭೋಗಗಳು ಸಹ ಮಧುಸೂದನ ದೇವಾಲಯದಲ್ಲಿ ನಡೆಯುತ್ತಿದ್ದವು ಎಂಬುದು ಶಾಸನದಿಂದ ತಿಳಿದುಬರುತ್ತದೆ. ರಂಗಭೋಗದ ಉಪಕರಣಗಳಂತಿದ್ದ ದೇವದಾಸಿಯರ ಉಲ್ಲೇಖ ಈ ಶಾಸನದಿಂದ ತಿಳಿದುಬರುತ್ತದೆ. ಹಾಡುವ ಸಮುದಾಯದವರು, ನೃತ್ಯ ಗೀತಾದಿಗಳ ಪರಿಣಿತರಾಗಿದ್ದು ದೇವರ ಕಾರ್ಯಕ್ಕೆ ಮೀಸಲಾಗಿದ್ದಂತಹ ಪಾತ್ರದವರು, ನಾಲ್ವರು ಕಂಭದ ಸೂಳೆಯರು ಈ ದೇವಾಲಯದಲ್ಲಿ

---

* ಹೆಚ್ಚಿನ ವಿವರಗಳಿಗೆ ನೋಡಿ : ಎಂ. ಚಿದಾನಂದ ಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. 177-190.

ಇದ್ದು ದೇವತಾ ಕಾರ್ಯಕ್ಕೆ ಮೀಸಲಾಗಿದ್ದರು. ಇವರಿಗೂ ಜೀವನೋಪಾಯಕ್ಕಾಗಿ ಭೂಮಿಯನ್ನು ದತ್ತಿ ಬಿಟ್ಟಿರುವ ಬಗೆಗೆ ಉಲ್ಲೇಖ ಇದೆ. ಹೀಗೆ ಪ್ರಾಚೀನ ಕಾಲದಲ್ಲಿ ದೇವಸ್ಥಾನವು ಊರಿನ ಕೇಂದ್ರಬಿಂದುವಾಗಿ ಆಯಾ ಊರಿನ ಸಾಂಸ್ಕೃತಿಕ ಜೀವನದ ವೃದ್ಧಿಗೆ ಕಾರಣೀಭೂತವಾಗಿದ್ದುದರ ಜೊತೆಗೆ ಶಿಲ್ಪ, ಚಿತ್ರ, ಸಂಗೀತ, ನರ್ತನದಂತಹ ಲಲಿತ ಕಲೆಗಳು, ದೇವಸ್ಥಾನದ ಆಶ್ರಯದಲ್ಲಿ ರೂಪುಗೊಳ್ಳಲು ಆಶ್ರಯ ಕಲ್ಪಿಸಿದ್ದಲ್ಲದೆ, ಜನಜೀವನದ ಕೇಂದ್ರ ಬಿಂದುವಾಗಿ ಸಮಾಜದ ಮೇಲೆ ಪ್ರಭಾವವನ್ನು ಬೀರಿದ್ದವು ಎಂಬುದಕ್ಕೆ ನಾಗಾವಿಯ ಮಧುಸೂದನ ದೇವಾಲಯವು ಸಾಕ್ಷಿಯಾಗಿದೆ. ಧನಿಕರ ಧನವನ್ನು ವಿದ್ಯೆಯ ಕಡೆಗೆ, ಕಲೆಗಳ ಕಡೆಗೆ ಹರಿಸುವಲ್ಲಿ ದೇವಸ್ಥಾನಗಳ ಹಿರಿಮೆ ಅಗಾಧವಾದುದು ಎಂಬುದು ಈ ದೇವಾಲಯದಿಂದ ತಿಳಿದು ಬರುತ್ತದೆ.

ನಾಗಾವಿಯ ಮಧುಸೂದನ ದೇವಾಲಯದಲ್ಲಿ ವಿದ್ಯೆಗೆ ಹಾಗೂ ಲಲಿತಕಲೆಗಳಿಗೆ ಸಂಬಂಧಿಸಿದ ಚಟುವಟಿಕೆಗಳು ನಿರಂತರವಾಗಿ ಯಾವುದೇ ಅಡೆತಡೆಯಿಲ್ಲದೆ ನಡೆಯಲು, ಮಧುಸೂದನ ದೇವಾಲಯವನ್ನು ನಿರ್ಮಿಸಿದ ಕಲ್ಯಾಣಿ ಚಾಲುಕ್ಯ ದೊರೆ ತ್ರೈಲೋಕ ಮಲ್ಲ ಅಹವಮಲ್ಲ ಸೋಮೇಶ್ವರನ ದಂಡನಾಯಕನಾದ ಕಾಳಿದಾಸ ದಂಡನಾಯಕ ಮಾತ್ರವಲ್ಲದೆ ನಂತರದ ಕಾಲದಲ್ಲಿ ತ್ರಿಭುವನ ಮಲ್ಲನ ಮಹಾಸಾಮಂತ ಕನ್ನಡ ಸಂಧಿವಿಗ್ರಹಿ ಕಡಿತವೆರ್ಗ್ಗಡೆ ದಂಡನಾಯಕ ಮಧುಪರಸನಿಂದ ಹಾಗೂ ಅಹಿಹಯ ವಂಶದ ಲೋಕರಸ ಮಹಾಮಂಡಲೇಶ್ವರನಿಂದಲೂ ಭೂಮಿ ಹಾಗೂ ಇತರೆ ವಸ್ತುಗಳನ್ನು ದತ್ತಿಯಾಗಿ ಪಡೆದಿದ್ದಿತು ಎಂಬ ವಿವರ ಶಾಸನದಿಂದ ತಿಳಿದು ಬರುತ್ತದೆ. ನಾಗಾವಿ ಅಗ್ರಹಾರದ ನಾಲ್ಕುನೂರು ಮಹಾಜನಂಗಳು ಆ ಕಾಲದಲ್ಲಿ ಪ್ರತಿಷ್ಠಿತ ಸ್ಥಾನವನ್ನು ಪಡೆದಿದ್ದು ಯಾವುದೇ ಅರಸ, ಮಾಂಡಲೀಕ ಹಾಗೂ ದಂಡನಾಯಕರು ನಾಗಾವಿಯ ಯಾವುದೇ ದೇವಾಲಯಗಳಿಗೆ ದತ್ತಿಗಳನ್ನು ಬಿಟ್ಟರೂ ಇವರ ಸಮ್ಮುಖದಲ್ಲಿಯೇ ಬಿಡುತ್ತಿದ್ದರು ಎಂಬುದು ನಾಗಾವಿಯಲ್ಲಿ ದೊರೆತ ಉಳಿದ ನಾಲ್ಕು ಶಾಸನಗಳಿಂದ ತಿಳಿದು ಬರುತ್ತವೆ. ಉದಾ॥ ನಾಗಾವಿಯಲ್ಲಿ ಲಕ್ಷ್ಮಣೇಶ್ವರ ಮತ್ತು ಶ್ರೀ ಸಿದ್ಧೇಶ್ವರ ದೇವಾಲಯಗಳಿದ್ದು ಇವುಗಳ ದೇವರ ನೈವೇದ್ಯಕ್ಕೂ, ತ್ರಿಕಾಲದ ಪೂಜೆಗೂ ದಂಡನಾಯಕ ಕಾಳಿಮರಸರು ಹಾಗೂ ಹೈಹಯವಂಶದ ಮಹಾಮಂಡಲೇಶ್ವರ ಆಸಿಮರಸರು ನಾಗಾವಿಯ ಮಹಾಗ್ರಹಾರದ ನಾಲ್ಕುನೂರು ವಿಪ್ರೋತ್ತಮರ ಸಮ್ಮುಖದಲ್ಲಿ ದತ್ತಿಯನ್ನು ಬಿಟ್ಟ ವಿವರ ಕ್ರಿ.ಶ 1093ರ ನಾಗಾವಿ ಶಾಸನ ತಿಳಿಸುತ್ತದೆ.

ಇಲ್ಲಿಯವರೆಗೂ ನಾಗಾವಿಯು ವ್ಯವಸ್ಥಿತವಾದ ಘಟಿಕಾಲಯದ ಕೇಂದ್ರವಾಗಿದ್ದುದರ ಬಗೆಗೆ ತಿಳಿದಿದ್ದೆವು. ಆದರೆ ನಾಗಾವಿಗೆ ಇತ್ತೀಚೆಗೆ ಕೈಗೊಂಡ ಕ್ಷೇತ್ರ ಕಾರ್ಯದ ಅವಧಿಯಲ್ಲಿ ದೊರೆತ ಜೈನ ಧರ್ಮಕ್ಕೆ ಸಂಬಂಧಿಸಿದ ಕೆಲವೊಂದು ಅವಶೇಷಗಳಿಂದ ಅಗ್ರಹಾರ

ಘಟಿಕಾಲಯವಾಗುವುದಕ್ಕಿಂತ ಮೊದಲು ಜೈನಧರ್ಮದ ತಾಣವೂ ಆಗಿತ್ತು ಎಂಬುದು ತಿಳಿದು ಬಂದಿದೆ. ನಾಗಾವಿಯ ಈಗಿನ ಮಧುಸೂದನ ದೇವಾಲಯದ ಹಿಂಬದಿಯ ಅರ್ಧ ಕಿ.ಮೀ. ಅಂತರದಲ್ಲಿ ಪಾಳುಬಿದ್ದ ಕಟ್ಟಡಗಳ ಅವಶೇಷಗಳು ಎಲ್ಲಾ ಕಡೆ ಹರಡಿದ್ದು ಆ ಅವಶೇಷ ಗಳನ್ನು ಕೆದಕಿ ಪರಿಶೀಲಿಸಿದಾಗ ಜೈನ ತೀರ್ಥಂಕರರ ವಿಗ್ರಹ ಹಾಗೂ ಇನ್ನಿತರ ಕುರುಹುಗಳು ಕಂಡು ಬಂದವು. ಈ ಅವಶೇಷಗಳಿರುವ ಸ್ಥಳವನ್ನು ಉತ್ಖನನ ಮಾಡಿದರೆ ಜೈನಧರ್ಮಕ್ಕೆ ಸಂಬಂಧಿಸಿದ ಮತ್ತಷ್ಟು ಅವಶೇಷಗಳು ದೊರೆಯುವ ಸಾಧ್ಯತೆ ಇದೆ. ಹೀಗಾಗಿ ನಾಗಾವಿಯ ಅಗ್ರಹಾರ ಘಟಿಕಾಲಯವಾಗುವುದಕ್ಕಿಂತ ಮೊದಲು ಜೈನಕೇಂದ್ರವೂ ಆಗಿದ್ದಿತು ಎಂಬಲ್ಲಿ ಸಂದೇಹವೇ ಇಲ್ಲ. 9, 10ನೇ ಶತಮಾನದ ಅವಧಿಯಲ್ಲಿ ಮಾನ್ಯಖೇಟವನ್ನು ರಾಜಧಾ ನಿಯನ್ನಾಗಿ ಮಾಡಿಕೊಂಡು ರಾಷ್ಟ್ರಕೂಟರು ಆಳ್ವಿಕೆ ನಡೆಸುತ್ತಿದ್ದ ಕಾಲದಲ್ಲಿ ಜೈನಧರ್ಮವು ಪ್ರಮುಖ ಸ್ಥಾನ ಗಳಿಸಿಕೊಂಡಿದ್ದನ್ನು ಆ ಕಾಲದ ಶಾಸನಗಳು ಸಮರ್ಥಿಸಿವೆ. ಮಾನ್ಯಖೇಟದ ಪರಿಸರದಲ್ಲಿಯೇ ನಾಗಾವಿಯು ಇದ್ದುದರಿಂದ ಅಗ್ರಹಾರ ಘಟಿಕಾಲಯವಾಗುವ ಮುನ್ನ ಜೈನಕೇಂದ್ರವೂ ಆಗಿದ್ದಿತು ಎಂದು ಹೇಳಬಹುದಾಗಿದೆ. ದೊರೆತಿರುವ ಹಾಗೂ ಉತ್ಖನನ ಮಾಡಿದರೆ ದೊರೆಯುವ ಅವಶೇಷಗಳನ್ನು ಪರಿಶೀಲಿಸಿದರೆ ಜೈನಧರ್ಮದ ಯಾವ ಶಾಖೆ ಇಲ್ಲಿ ಅಸ್ತಿತ್ವದಲ್ಲಿ ಇದ್ದಿತು ಎಂಬುದು ತಿಳಿದು ಬರುತ್ತದೆ. ಸುತ್ತಮುತ್ತಲ ಪರಿಸರದಲ್ಲಿ ಯಾಪನೀಯ ಪಂಥ ಇದ್ದಿತೇ ಎಂಬ ಪ್ರಶ್ನೆ ನಮ್ಮಲ್ಲಿ ಉದ್ಭವಿಸುವುದು ಸಹಜ. ಈ ಕೆಲಸ ಆದಷ್ಟು ಬೇಗ ಸಂಬಂಧಪಟ್ಟ ಇಲಾಖಾವತಿಯಿಂದ ನಡೆಯಬೇಕಾಗಿದೆ.

ವಿದ್ಯಾಚಟುವಟಿಕೆಗಳ ಹಾಗೂ ಲಲಿತ ಕಲೆಗಳ ಆಶ್ರಯತಾಣವಾಗಿದ್ದ ಮಧುಸೂದನ ದೇವಾಲಯವು ಇಂದು ದುಃಸ್ಥಿತಿಯಲ್ಲಿದೆ. ಅಲ್ಲಿಗೆ ಭೇಟಿ ಕೊಟ್ಟ ಯಾರಿಗಾದರೂ ಅದನ್ನು ಕಂಡಾಗ ಮರುಕವಾಗದಿರದು. ಪಾಳುಬಿದ್ದ ಮಂದಿರದಲ್ಲಿ ಬಾವಲಿಗಳು, ಗೂಬೆಗಳು ಆವ ರಿಸಿವೆ. ಘಟಿಕಾಲಯದ ಪರಿಸರದ ಅವಶೇಷಗಳನ್ನು ನೋಡಿದರೆ ಮೇಲ್ನೋಟಕ್ಕೆ ಎಲ್ಲವೂ ಇಸ್ಲಾಂಮಯವಾಗಿರುವುದನ್ನು ಕಾಣಬಹುದು. ಮುಸ್ಲಿಂ ಧಾಳಿಗೆ ಸಿಲುಕಿ ನಾಶವಾಗಿದ್ದಿರ ಬಹುದು. ಘಟಿಕಾಲಯದ ಹಾಗೂ ದೇವಾಲಯದ ಕಟ್ಟಡಗಳನ್ನು ಮುಸ್ಲಿಂಮಯವಾಗಿ ಪರಿ ವರ್ತಿಸಲು ಪ್ರಯತ್ನಿಸಿರುವುದನ್ನು ಕಾಣಬಹುದು. ದೂರದಿಂದ ನೋಡಿದರೆ ಎಲ್ಲಾ ಕಟ್ಟಡಗಳ ಮೇಲ್ಭಾಗವು ಗುಮ್ಮಟ ಹಾಗೂ ಮಿನಾರ್‌ಗಳನ್ನು ಒಳಗೊಂಡಂತೆ ತೋರಿಬರುವುದರಿಂದ ಇವೆಲ್ಲವೂ ಇಸ್ಲಾಂಮಯ ಕಟ್ಟಡಗಳೇನೋ ಎಂಬಂತೆ ಕಂಡುಬರುತ್ತದೆ. ಆದರೆ ಒಳಹೊಕ್ಕು ನೋಡಿದರೆ ದೇವಾಲಯ ಹಾಗೂ ಇನ್ನಿತರ ಕಟ್ಟಡಗಳ ವಾಸ್ತುಶೈಲಿಯಲ್ಲಿ ಹಿಂದು ದೇವಾ ಲಯವನ್ನೇ ಹೋಲುತ್ತವೆ. ಕನ್ನಡನಾಡಿನ ಸಂಸ್ಕೃತಿಯ ಪ್ರತೀಕವಾದ ನಾಗಾವಿಯು ಈಗ ಜಾಲಿಮುಳ್ಳುಗಿಡಗಳಿಂದ ಆವೃತವಾಗಿ ಪಾಳುಬಿದ್ದ ಅವಶೇಷಗಳಿಂದ ಹುಳುಹುಪ್ಪಟೆಗಳಿಗೆ

ಆಶ್ರಯತಾಣವಾಗಿ ಯಾರಿಗೂ ಬೇಡವಾದ ಸ್ಥಳವಾಗಿದೆ. ಆಂಧ್ರಪ್ರದೇಶದ ಪುರಾತತ್ತ್ವ ಇಲಾಖೆಯವರ ಒಂದು ಫಲಕ ಮಾತ್ರ ಮಧುಸೂದನ ದೇವಾಲಯದ ಆವರಣದ ಮುಂಭಾಗ ದಲ್ಲಿ ಹಾಕಿರುವುದನ್ನು ಬಿಟ್ಟರೆ ಮತ್ತೇನೂ ಕಾಣುವುದಿಲ್ಲ.

ಬೌದ್ಧ ಕೇಂದ್ರ ಸನ್ನತಿ, ರಾಷ್ಟ್ರಕೂಟರ ನೆಲೆವೀಡು ಮಳಖೇಡ (ಮಾನ್ಯಖೇಟ) ಇವುಗಳ ನಡುವೆ ಇರುವ ನಾಗಾವಿಗೆ ಸನ್ನತಿಗೆ ಕೊಟ್ಟ ಪ್ರಾಮುಖ್ಯತೆಯಲ್ಲಿ ಅರ್ಧದಷ್ಟ ನ್ನಾದರೂ ರಾಜ್ಯ ಪುರಾತತ್ತ್ವ ಇಲಾಖೆಯವರು ಕೊಟ್ಟಿದ್ದರೆ ಈಗಿನ ಹೀನಸ್ಥಿತಿಗೆ ತಲುಪು ತ್ತಿರಲಿಲ್ಲವೇನೋ ಎಂದೆನಿಸುತ್ತದೆ.

ಕನ್ನಡ ಸಂಸ್ಕೃತಿಯ ಪ್ರತೀಕವಾದ ನಾಗಾವಿಯನ್ನು ಯಥಾಸ್ಥಿತಿಗೆ ತರುವ, ಸಂರಕ್ಷಿಸುವ ಹೊಣೆ ಎಲ್ಲರದ್ದಾಗಿದೆ. ಇಲ್ಲದಿದ್ದರೆ ವ್ಯವಸ್ಥಿತವಾದ ಘಟಿಕಾಲಯವು ನಾಗಾವಿಯಲ್ಲಿತ್ತು ಎಂಬುದು ಕೇವಲ ದಾಖಲೆಯಲ್ಲಿ ಮಾತ್ರ ಉಳಿಯುತ್ತದೆ.

ಕರ್ನಾಟಕ ಮತ್ತು ಆಂಧ್ರ ಜಾನಪದ

ಡಾ|| ಜಿ.ಎಸ್. ಮೋಹನ್

ದ್ರಾವಿಡ ಭಾಷೆಗಳಲ್ಲಿ ಪ್ರಧಾನವಾದುವು ತೆಲುಗು ಮತ್ತು ಕನ್ನಡ. ಈ ಎರಡು ಭಾಷೆಗಳಿಗೂ ತಮ್ಮವೇ ಆದ ಲಿಪಿ, ಸಾಹಿತ್ಯಗಳಿವೆ. ಇವುಗಳು ಪರಸ್ಪರ ಪ್ರಭಾವಗಳನ್ನು ಒಳಗೊಂಡಿವೆ. ಸಂಸ್ಕೃತಿ, ಸಾಹಿತ್ಯ ಎರಡರಲ್ಲಿಯೂ ಕೊಡುಕೊಳ್ಳುವಿಕೆಗಳು ನಡೆದಿವೆ.

ಈ ಪ್ರಬಂಧದಲ್ಲಿ ನಾನು ತೆಲುಗು ಮತ್ತು ಕನ್ನಡ ಜಾನಪದಗಳಲ್ಲಿ ನಡೆದ ಅಧ್ಯಯನದೊಂದಿಗೆ, ಈ ಎರಡೂ ಜಾನಪದಗಳಲ್ಲಿರುವ ಸರೂಪತೆಯನ್ನು ಉಲ್ಲೇಖಿಸುತ್ತೇನೆ.

ತೆಲುಗು ಭಾಷೆಯಲ್ಲಿ ಅತ್ಯಂತ ಶ್ರೀಮಂತವಾದ ಜಾನಪದ ಪರಂಪರೆಯಿದೆ. 10ನೇಯ ಶತಮಾನದ ನನ್ನೆಚೋಡ ಮಹಾಕವಿ ತನ್ನ "ಕುಮಾರಸಂಭವಮು" ಎಂಬ ಕೃತಿಯಲ್ಲಿ ಲಾಲಿಪದ್ಯಗಳು, ಆರತಿ ಹಾಡುಗಳು, ಕುಟ್ಟುವ - ಬೀಸುವ ಪದಗಳು, ಭಕ್ತಿಗೀತೆಗಳನ್ನು ಉಲ್ಲೇಖಿಸಿದ್ದಾನೆ. ಅಲ್ಲದೆ ತನ್ನ ಕಾಲದಲ್ಲಿ ಪ್ರಚಾರದಲ್ಲಿದ್ದಂತಹ "ಗೌಡುಗೀತಮುಲು" ಎಂಬ ಸಂಸ್ಕಾರ ವಿಧಿಗೆ ಸಂಬಂಧಪಟ್ಟ ಜನಪದಗೀತೆಗಳನ್ನು ಉಲ್ಲೇಖಿಸಿದ್ದಾನೆ. 13ನೇಯ ಶತಮಾನದ ಪಾಲ್ಕುರಿಕೆ ಸೋಮನಾಥನು ಶೈವಭಕ್ತರು ಹಾಡಿದ ಜನಪ್ರಿಯಗೀತೆಗಳ ಆಧಾರದ ಮೇಲೆ ತಾನು "ಬಸವಪುರಾಣಮು" ಎಂಬ ಗ್ರಂಥವನ್ನು ರಚಿಸಿರುವುದಾಗಿ ಹೇಳಿಕೊಂಡಿದ್ದಾನೆ. ಇದು ತೆಲುಗಿನಿಂದ ಇತರ ಭಾಷೆಗಳಿಗೆ ಅನುವಾದಿಸಲ್ಪಟ್ಟ ಮೊಟ್ಟ ಮೊದಲನೆಯ ತೆಲುಗು ಕೃತಿ. ಕನ್ನಡದಲ್ಲಿ ಭೀಮಕವಿ ಬಸವಪುರಾಣ ಗ್ರಂಥವನ್ನು 1369ರಲ್ಲಿ ರಚಿಸಿರುವನು. ಪಾಲ್ಕುರಿಕೆ ಸೋಮನಾಥನು ರಚಿಸಿದ ಇನ್ನೊಂದು ಕೃತಿ "ಪಂಡಿತಾರಾಧ್ಯ ಚರಿತಮು". ಇದರಲ್ಲಿಯೂ ಅಂದಿನ ಕಾಲದ ಅನೇಕ ಜನಪದ ಗೀತೆಗಳು ಮತ್ತು ಹಲವಾರು ಬಗೆಯ ಜನಪದ ಕಲಾ ಪ್ರಕಾರಗಳೂ ಉಲ್ಲೇಖಿಸಲ್ಪಟ್ಟಿದೆ. ಪಂಡಿತಾರಾಧ್ಯ ಚರಿತ್ರೆಯನ್ನು ಆಧಾರವಾಗಿಟ್ಟುಕೊಂಡು ಕನ್ನಡದಲ್ಲಿ ನೀಲಕಂಠಾಚಾರ್ಯನು "ಆರಾಧ್ಯ ಚರಿತ್ರೆ"ಯನ್ನು ರಚಿಸಿದ್ದಾನೆ. ಹೀಗೆ ಹಲವಾರು ಪ್ರಾಚೀನ ತೆಲುಗು ಕನ್ನಡ ಕಾವ್ಯಗಳಲ್ಲಿ ಜಾನಪದವು ಉಲ್ಲೇಖಿಸಲ್ಪಟ್ಟಿರುವುದನ್ನು ಗಮನಿಸಬಹುದಾಗಿದೆ.

ಆಂಧ್ರ, ಕರ್ನಾಟಕ ಜಾನಪದ ಜಗತ್ತು ವೈವಿಧ್ಯಪೂರ್ಣವೂ ವಿಸ್ತಾರವೂ ಆದುದು ಎಂಬ ತಿಳುವಳಿಕೆ ನಮಗೆ ಮೂಡಿದ್ದು ಕಳೆದ 19ನೇಯ ಶತಮಾನದಲ್ಲಿ. ಇದು ಕೂಡ ಸಾಧ್ಯವಾದದ್ದು ಪಾಶ್ಚಾತ್ಯ ವಿದ್ವಾಂಸರು ಈ ಪ್ರದೇಶಗಳ ಜಾನಪದ ಜಗತ್ತಿನ ಕಡೆಗೆ ಗಂಭೀರ ವಿಶ್ಲೇಷಣೆಯ ಹೊಸಬೆಳಕು ಬೀರಿದ ನಂತರವೇ. ಕಳೆದ ಶತಮಾನದ ಆರಂಭದಿಂದಲೂ

ಅನೇಕ ಪಾಶ್ಚಾತ್ಯ ವಿದ್ವಾಂಸರು ಭಾರತಕ್ಕೆ ಬಂದು ಬೇರೆ ಬೇರೆ ಉದ್ದೇಶಗಳಿಗಾಗಿ ನಾನಾ ಬಗೆಯ ಸಂಶೋಧನಾ ಕಾರ್ಯ ಕೈಗೊಂಡಂತೆ ಜಾನಪದ ಸಂಗ್ರಹಣೆಗೂ ಕೈ ಹಾಕಿದರು. ತೆಲುಗಿನಲ್ಲಿ ಕರ್ನಲ್ ಕೋಲಿನ್ ಮೆಕಂಜಿ (1754 - 1821), ಸಿ.ಪಿ. ಬ್ರೌನ್ (1798 - 1884), ಜೆ.ಎ. ಬೋಯಲ್ (1874) ಮತ್ತು ಕ್ಯಾಪ್ಟನ್ ಎಂ.ಡಬ್ಲ್ಯೂ ಕಾರ್ ಮುಂತಾದ ಮಹನೀಯರನ್ನು ಹೆಸರಿಸಬಹುದು. ಕನ್ನಡದಲ್ಲಿ ಜಾನ್‌ಲೇಡನ್, ಅಬ್ಬೆದುಬಾಯ್, ಚಾರ್ಲ್ಸ್ ಇ. ಗೋವರ್, ಮೇರಿ ಫ್ರೀರೆ, ಫ್ಲೀಟ್ ಮತ್ತು ಕಿಟಲ್ ಪ್ರಮುಖರು. ಹೀಗೆ ಹತ್ತೊಂಬತ್ತನೆಯ ಶತಮಾನದಲ್ಲಿ ಜನಪದ ಸಾಹಿತ್ಯ ಸಂಗ್ರಹಕ್ಕೆ ಪಾಶ್ಚಾತ್ಯ ವಿದ್ವಾಂಸರು ಪ್ರೇರಣೆ ಒದಗಿಸಿದ್ದು ಒಂದು ಮಹತ್ವದ ಸಂಗತಿ. ಆಂಗ್ಲ ಪಂಡಿತರ ಪ್ರಭಾವದಿಂದ ಆಂಧ್ರ ಕರ್ನಾಟಕಗಳಲ್ಲಿ ಜನಪದ ಸಾಹಿತ್ಯ ಸೌರಭ ಹಬ್ಬಿ ಹರಡಿತು. ಎರಡು ರಾಜ್ಯಗಳಲ್ಲಿಯೂ ಜಾನಪದ ಅಧ್ಯಯನ ಆರಂಭವಾದುದು ಸಾಹಿತ್ಯಕ ದೃಷ್ಟಿಕೋನದಿಂದಲೇ ಎಂದು ಗಮನಿಸಬಹುದು. ಕನ್ನಡದಲ್ಲಿ ನಡಿಕೇರಿಯಂಡ ಚೆಣ್ಣಪ್ಪ, ಹಲಸಂಗಿ ಸೋದರರು, ಸಿಂಪಿ ಲಿಂಗಣ್ಣ, ಅರ್ಚಕ ರಂಗಸ್ವಾಮಿ, ಮಾಸ್ತಿ, ನರಸಿಂಹಶಾಸ್ತ್ರಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಮತಿಘಟ್ಟ ಕೃಷ್ಣಮೂರ್ತಿ ಮುಂತಾದ ಮಹನೀಯರು ಸಂಗ್ರಹಕಾರ್ಯವನ್ನು ಮುಂದುವರಿಸಿದರೆ, ತೆಲುಗಿನಲ್ಲಿ ಪಂಚಾಗ್ನುಲ ಆದಿನಾರಾಯಣ ಶಾಸ್ತ್ರಿ, ಎ. ಉಮಾಕಾಂತ ವಿದ್ಯಾಶೇಖರ, ವೇಟೂರಿ ಪ್ರಭಾಕರ ಶಾಸ್ತ್ರಿ, ಮಲ್ಲಂಪಲ್ಲಿ ಸೋಮಶೇಖರ ಶರ್ಮ, ಡಾ|| ಚೆಲುಕೂರಿ ನಾರಾಯಣರಾವ್ ಮುಂತಾದ ವಿದ್ವಾಂಸರು ಅನೇಕ ಜನಪದ ಸಾಹಿತಿಗಳಿಗೆ ಸ್ಫೂರ್ತಿ ಮತ್ತು ಪ್ರೇರಣೆ ನೀಡಿದರು.

ತೆಲುಗು ಮತ್ತು ಕನ್ನಡ ಜಾನಪದ ಅಧ್ಯಯನಗಳು ಅತಿನಿಧಾನವಾಗಿ ವಿಶ್ವವಿದ್ಯಾಲಯಗಳನ್ನು ಪ್ರವೇಶಿಸಿವೆ. ಈ ದಿಶೆಯಲ್ಲಿ ತೆಲುಗು ಜಾನಪದ ಸಾಹಿತ್ಯದಲ್ಲಿ ಮೊದಲನೆಯ ಪಿ.ಹೆಚ್.ಡಿ. ಮಹಾಪ್ರಬಂಧ "ತೆಲುಗು ಜಾನಪದ ಗೇಯ ಸಾಹಿತ್ಯಮು". ಇದು ಉಸ್ಮಾನಿಯ ವಿಶ್ವವಿದ್ಯಾಲಯದಿಂದ ಡಾ|| ಬಿರುದುರಾಜು ರಾಮರಾಜ ಅವರಿಗೆ 1956ರಲ್ಲಿ ಪಿ.ಹೆಚ್.ಡಿ. ಪದವಿಯನ್ನು ದೊರಕಿಸಿಕೊಟ್ಟಿತು. ಅಂತೆಯೇ ಕನ್ನಡದಲ್ಲಿ ಮೊದಲನೆಯ ಪಿ.ಹೆಚ್.ಡಿ. ಪ್ರಬಂಧ ಬಿ.ಎಸ್. ಗದ್ದಗಿ ಮಠ ಅವರ "ಕನ್ನಡ ಜನಪದ ಗೀತೆಗಳು". ಈ ಗ್ರಂಥವು 1963ರಲ್ಲಿ ಪ್ರಕಟವಾಗಿದೆ.

ಕರ್ನಾಟಕದಲ್ಲಿ 1966ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ 'ಜಾನಪದ ಸಾಹಿತ್ಯ'ದ ಪತ್ರಿಕೆಯೊಂದನ್ನು ಕನ್ನಡ ಎಂ.ಎ. ತರಗತಿಗೆ ಐಚ್ಛಿಕ ವಿಷಯವಾಗಿ ಸೇರಿಸಿ ಕ್ರಮಕ್ರಮವಾಗಿ ಅದರ ಸ್ವರೂಪವನ್ನು ಬದಲಿಸಿ "ಜಾನಪದ" ಸಮಗ್ರ ಅಧ್ಯಯನಕ್ಕೆ ದಾರಿ ಮಾಡಿಕೊಟ್ಟಂತೆ, ಆಂಧ್ರ ದೇಶದಲ್ಲಿಯೂ 1971ರಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಮೊದಲ ಬಾರಿ ತೆಲುಗು ಎಂ.ಎ. ತರಗತಿಗೆ 'ಜನಪದ ಸಾಹಿತ್ಯ'ದ ಪತ್ರಿಕೆಯನ್ನು ಐಚ್ಛಿಕ ವಿಷಯವಾಗಿ ಸೇರಿಸಿ

ತೆಲುಗು ಜಾನಪದದ ಸಮಗ್ರ ಅಧ್ಯಯನಕ್ಕೆ ದಾರಿ ಮಾಡಿಕೊಟ್ಟಿದೆ. ಈ ಎರಡು ರಾಜ್ಯಗಳಲ್ಲಿಯೂ ಎಲ್ಲ ವಿಶ್ವವಿದ್ಯಾಲಯಗಳ ಆಯಾ ವಿಭಾಗಗಳು ಜಾನಪದವನ್ನು ಅಧ್ಯಯನ ಮಾಡುತ್ತಿರುವುದನ್ನು ಕಾಣಬಹುದು. ಮೈಸೂರು, ಬೆಂಗಳೂರು, ಕರ್ನಾಟಕ, ಗುಲ್ಬರ್ಗಾ ವಿಶ್ವವಿದ್ಯಾನಿಲಯಗಳು ಪ್ರತ್ಯೇಕವಾಗಿ ಜನಪದ ಸಾಹಿತ್ಯದಲ್ಲಿ ಎಂ.ಎ. ಶಿಕ್ಷಣವನ್ನು ಆರಂಭಿಸಿದಂತೆ, ಆಂಧ್ರದಲ್ಲಿ ಇನ್ನೂ ಆರಂಭಿಸದೇ ಇರುವುದು ಒಂದು ಶೋಚನೀಯವಾದ ಸಂಗತಿಯಾಗಿದೆ.

Richard M.Dorson ವರ್ಗೀಕರಿಸಿದಂತೆ ತೆಲುಗು ಮತ್ತು ಕನ್ನಡ ಜಾನಪದವನ್ನು ನಾಲ್ಕು ವಿಭಾಗಗಳನ್ನಾಗಿ ವಿಂಗಡಿಸಬಹುದು. ಅವುಗಳೆಂದರೆ 1. ಮೌಖಿಕ ಜಾನಪದ, 2. ಸಾಂಘಿಕ ಜಾನಪದ ಆಚಾರ (Social Folk Custom), 3. ವಸ್ತು ಸಂಸ್ಕೃತಿ, 4. ಜನಪದ ಪ್ರದರ್ಶನಾತ್ಮಕ ಕಲೆಗಳು (Performing Folk Arts) . ಈ ಜಾನಪದ ಪ್ರಕಾರಗಳಲ್ಲಿ ತೆಲುಗು ಮತ್ತು ಕನ್ನಡ ಜಾನಪದ ಅಧ್ಯಯನವು ನಡೆದಿರುವ ಬಗೆಯನ್ನು ಹೇಳಬಯಸುತ್ತೇನೆ. ತೆಲುಗು ಮತ್ತು ಕನ್ನಡ ಜಾನಪದಗಳಲ್ಲಿ ಹಲವಾರು ಸಾರೂಪ್ಯಗಳು ಕಂಡು ಬರುತ್ತವೆ. ಅವುಗಳ ಪಕ್ಷಿ ನೋಟವನ್ನು ನೋಡೋಣ.

ಮೌಖಿಕ ಜಾನಪದದಲ್ಲಿ ಮುಖ್ಯವಾದ ಅಂಗಗಳು ಜನಪದ ಗೀತೆಗಳು ಮತ್ತು ಜನಪದ ಕಥನ ಗೀತೆಗಳು. ತೆಲುಗು ಜನಪದಗೀತೆಗಳು ಪ್ರಧಾನವಾಗಿ ತ್ರಿಶ್ರ, ಚತುರಸ್ರ, ಮಿಶ್ರಗತಿಗಳಲ್ಲಿ ನಡೆದರೆ ಕನ್ನಡ ಜನಪದಗೀತೆಗಳು ತ್ರಿಪದಿಗಳಲ್ಲಿ ನಡೆಯುತ್ತವೆ. ಜನಪದ ಗೀತೆಗಳಲ್ಲಿ ಮಕ್ಕಳ ಹಾಡುಗಳಿಗೆ ವಿಶಿಷ್ಟ ಸ್ಥಾನವಿದೆ. ಕೆಲವು ತೆಲುಗು ಮತ್ತು ಕನ್ನಡ ಮಕ್ಕಳ ಹಾಡುಗಳನ್ನು ಗಮನಿಸಿ.

ತೆ. 'ಏನುಗೊಚ್ಚಿಂದೇನುಗೂ - ಏವೂರೊಚ್ಚೆಂದೇನುಗೂ
ಮಾವೂರೊಚ್ಚಿಂದೇನುಗೂ - ಮಂಚಿನೀಳ್ಳು ತಾಗಿಂದೇನುಗೂ
ಉಪ್ಪಾಡೊಚ್ಚಿಂದೇನುಗೂ - ಉಪ್ಪನೀಳ್ಳು ತಾಗಿಂದೇನುಗೂ'

ಕ. 'ಆನಿ ಬಂತಾನೆ - ಯಾವೂರಾನೆ
ವಿಜಯನಗರದ ಆನೆ - ಇಲ್ಲಿಗೇಕೆ ಬಂತು
ಹಾದೀ ತಪ್ಪಿ ಬಂತೂ ....'

ಅಂತೆಯೇ ತೆಲುಗಿನಲ್ಲಿ ಪ್ರಚಾರದಲ್ಲಿರುವ
'ಸೇದೇ ಬಾಯಿ ಪೆಂಗನ್ನ ಬಾಯಿ
ಮಾತಾತ ತೊಗಿಚ್ಚಿನ ಮಂಚಿನೀಳ್ಳಬಾಯಿ'
ಎಂಬ ಹಾಡು ಕನ್ನಡದಲ್ಲಿ

'ಸೇದುಂ ಬಾವಿ, ಪರಕಾರ ಬಾವಿ
ನಮ್ಮಪ್ಪ ಕಟ್ಸಿಸ್ಯಾನ ಮುತ್ತಿನ ಬಾವಿ'

ಎಂದು ಪ್ರಚಾರದಲ್ಲಿದೆ.

ಮಕ್ಕಳ ಹಾಡುಗಳ ಬಗ್ಗೆ ತೆಲುಗಿನಲ್ಲಿ ಮೂರು ಪಿ.ಹೆಚ್.ಡಿ., ಪ್ರಬಂಧಗಳು ಹೊರಬಂದಿವೆ. ಹಲವಾರು ಎಂ.ಫಿಲ್. ಪ್ರಬಂಧಗಳು ಸಹ ಹೊರಬಂದಿವೆ. ಅನೇಕ ವಿದ್ವಾಂಸರು, ಮಕ್ಕಳ ಹಾಡುಗಳನ್ನು ಸ್ವತಂತ್ರವಾಗಿ ಶೇಖರಿಸಿರುವುದೂ ಉಂಟು.

ತೆಲುಗು ಹಾಸ್ಯಗೀತೆಗಳಲ್ಲಿ ಒಂದಾದ 'ಓಕರೀಕಿ ಚೇಯಿನಿಚ್ಚಿ - ಓಕರೀಕಿ ಕಾಲುನಿಚ್ಚಿ' ಎಂಬ ಹಾಡು ಕನ್ನಡದಲ್ಲಿ 'ಒಬ್ಬನಿಗೆ ಕಾಲ್ಕೊಟ್ಟೆ, ಒಬ್ಬನಿಗೆ ಕೈಕೊಟ್ಟೆ' ಎಂದು ಪ್ರಚಾರದಲ್ಲಿದೆ

'ಚೆಳ್ಳೊಳಲ ಹಾಯೀ ಹಾಯಮ್ಮ ಹಾಯಿ ಹೌಲಾಯಿ
ಅತ್ತಾರೆ ಅಳಲಮ್ಮ ಅಳುವ ಕೂಸು ಇರಲಮ್ಮಾ
ಕೊಟ್ಟಾರೆ ಕೊಡಲಿ ಮನೆ ಕೆಲಸ
ಮನೆ ಕೆಲಸಾ ಕೊಟ್ಟಾರೂ ಮಕ್ಕಳಿರಲಮ್ಮ ಮನೆ ತುಂಬಾ
ಚೆಳ್ಳೊಳಲ ಹಾಯೀ'

'ಜೋ ಅಚ್ಯುತಾನಂದ ಜೋಜೋ ಮುಕುಂದಾ
ಲಾಲಿ ಪರಮಾನಂದ ರಾಮ ಗೋವಿಂದಾ ॥ಲಾಲೀ॥'

ಇಂತಹ ಲಾಲಿ ಹಾಡುಗಳು ತೆಲುಗಿನಲ್ಲಿಯೂ ಕಂಡು ಬರುತ್ತವೆ. ನೋಡಿ :

'ಏಡವಕು ಏಡವಕು ಎರ್ರಿ ನಾ ತಂಡ್ರೀ
ಏಡಿಸ್ತೇ ನೀ ಕಳ್ಳು ನೀ ಲಾಲುಗಾರು
ನೀ ಲಾಲು ಕಾರಿತೇ ನೇ ಚೂಡಲೇನು
ಪಾಲಯಿನ ಕಾರವೇ ಬಂಗಾರುಕಳ್ಳು' ॥ ಚೆಚ್ಚೊಳಲ ಹಾಯೀ ॥

'ಹಾಯಿ ಹಾಯಿ ರಾವೇ ಆಪದಲಕಾಯಿ
ಚೆನ್ನಿಪಾಂಡ್ಲಮ ಕಾಯಿ ಶ್ರೀರಂಗತಾಯಿ ॥ ಚೆಚ್ಚೊಳಲ ಹಾಯೀ ॥

ತೆಲುಗು ಕನ್ನಡ ಜನಪದಗೀತೆಗಳಲ್ಲಿ ಹೆಂಗಸರ ಹಾಡುಗಳಿಗೆ, ಅದರಲ್ಲಿಯೂ ಮದುವೆಯ ಹಾಡುಗಳಿಗೆ ಹೆಚ್ಚು ಪ್ರಾಧಾನ್ಯ ಕಂಡು ಬರುತ್ತದೆ. ತೆಲುಗು ಕನ್ನಡಿಗರ ಆಚಾರ ವಿಚಾರಗಳು, ಸಂಪ್ರದಾಯಗಳು ಮದುವೆಯ ಸಂದರ್ಭಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

ಕರ್ನಾಟಕದ ಗಡಿ ಪ್ರದೇಶಗಳಲ್ಲಿ ತೆಲುಗಿನವರ ಆಚಾರವಿಚಾರಗಳು, ಆಂಧ್ರದ ಗಡಿ ಪ್ರದೇಶ ಗಳಲ್ಲಿ ಕನ್ನಡಿಗರ ಆಚಾರ ವಿಚಾರಗಳು ಪ್ರಭಾವವನ್ನು ಬೀರುತ್ತವೆ. ತೆಲುಗಿನಲ್ಲಿ ಹೆಂಗಸರ ಹಾಡುಗಳ ಬಗ್ಗೆ ಮೂರು ಪಿ.ಹೆಚ್.ಡಿ ಮಹಾ ಪ್ರಬಂಧಗಳು ಹೊರಬಂದಿವೆ.

ತೆಲುಗಿನಲ್ಲಿ ಮೈನೆರೆಯುವ ಹಾಡುಗಳಿವೆ. ಹೆಣ್ಣು ಬೆಳೆದು ಪ್ರಾಯಕ್ಕೆ ಬರುತ್ತಲೇ ಋತುಮತಿಯಾದ ಸಂದರ್ಭದಲ್ಲಿ ಹೇಳುವುದನ್ನು ತೆಲುಗಿನಲ್ಲಿ 'ಸಮರ್ತ ಪಾಟಲು' ಎನ್ನುತ್ತಾರೆ. ಉತ್ತರ ಕರ್ನಾಟಕದಲ್ಲಿಯೂ ಇಂತಹ ಹಾಡುಗಳನ್ನು ಸೋಬಾನ ಹಾಡು ಅಥವಾ ಮೈನೆರದ ಹಾಡುಗಳೆಂದು ಕರೆಯುವುದುಂಟು. ಋತುಮತಿಯಾದ ಬಾಲೆಗೆ ಸಂಬಂಧ ಪಟ್ಟ ಶುಭಾಶುಭ ವಾರಗಳನ್ನು ತಿಳಿಸುವ ಒಂದು ತೆಲುಗಿನ ಮೈನೆರೆಯುವ ಹಾಡನ್ನು ಕೇಳಿ :

'ಅಲ್ಲೋನೇರೆಡಲ್ಲೋ ವೆಲದಿರುಕ್ಮಿಣಿ ಸಮರ್ತ ವೇಡೂಕಲಾಯ
ಅಲ್ಲೋನೇರೆಡಲ್ಲೋ ಆದಿವಾರಮುನಾಡು ಅತಿರೋಗಿಯೌನು
ಅಲ್ಲೋನೇರೆಡಲ್ಲೋ ಸೋಮವಾರಮುನಾಡು ಶುಭತಿಪತಿವ್ರತ
ಅಲ್ಲೋನೇರೆಡಲ್ಲೋ ಮಂಗಳವಾರಮುನಾಡು ಮತಿಮಂತುರಾಲು
ಅಲ್ಲೋನೇರೆಡಲ್ಲೋ ಬುಧವಾರಮುನಾಡು ಬುದ್ಧಿಮತಿಯೌನು
ಅಲ್ಲೋನೇರೆಡಲ್ಲೋ ಬೇಸ್ತವಾರಮುನಾಡು ಪುತ್ರವತಿಯಾಗುನು
ಅಲ್ಲೋನೇರೆಡಲ್ಲೋ ಶುಕ್ರವಾರಮುನಾಡು ಶುಭತಿ ಸಂಪದ ಕಲಿಗಿಯುಂಡು
ಅಲ್ಲೋನೇರೆಡಲ್ಲೋ ಶನಿವಾರಮುನಾಡು ಸತಿಪೇದರಾಲು'

ಕೇರಳ ರಾಜ್ಯದಲ್ಲಿಯೂ, ಮುಜಾಫಿರ್ ಪ್ರಾಂತ್ಯದ ಹಿಂದೂ ಮುಸ್ಲಿಂರಲ್ಲಿಯೂ ಶುಭಾಶುಭವಾರಗಳನ್ನು ನೋಡುವುದುಂಟು. ಕರ್ನಾಟಕದಲ್ಲಿಯೂ, ಮುಖ್ಯವಾಗಿ ತುಳು ಜನ ರಲ್ಲಿ ಇಂತಹ ನಂಬಿಕೆಯಿದೆಯೆಂದು ತಿಳಿಯುತ್ತದೆ.

ತೆಲುಗು ಕನ್ನಡ ಜನಪದ ಗೀತೆಗಳಲ್ಲಿ ಹಲವಾರು ಬಗೆಯ ಗೀತೆಗಳಿವೆ. ಡಾ|| ಆರ್.ವಿ.ಎಸ್. ಸುಂದರಂರವರು ಮೊದಲನೆಯ ಬಾರಿಗೆ ತೆಲುಗು ಕನ್ನಡ ಜನಪದ ಗೀತೆಗಳ ಬಗೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತೌಲನಿಕ ಅಧ್ಯಯನ ನಡೆಸಿ 1973ರಲ್ಲಿ ಪಿ.ಎಚ್.ಡಿ. ಪದವಿ ಪಡೆದಿದ್ದಾರೆ.

ತೆಲುಗು ಕನ್ನಡ ಕಥನ ಗೀತೆಗಳ ಬಗ್ಗೆಯೂ ತೆಲುಗು ಕನ್ನಡಗಳಲ್ಲಿ ಸಾಕಷ್ಟು ಕೆಲಸ ನಡೆದಿದೆ. ತೆಲುಗು - ಕನ್ನಡಗಳಲ್ಲಿ ಕುಮಾರ ರಾಮುನಿಕಥೆ, ಕರಿರಾಯ ಬಂಟು ಲಾವಣಿಗಳು ಪ್ರಚಾರದಲ್ಲಿರುವುದನ್ನೂ ನೋಡುತ್ತೇವೆ. ಬಾಲನಾಗಮ್ಮ, ಸಾರಂಗಧರ ಚರಿತ್ರೆ ಮುಂತಾದ ಕಥನ ಗೀತೆಗಳು ಈ ಎರಡು ಸಾಹಿತ್ಯಗಳಲ್ಲಿಯೂ ಪ್ರಚಾರದಲ್ಲಿವೆ.

ಹೆಂಗಸರ ಕಥನ ಗೀತೆಗಳಲ್ಲಿ ರಾಮಾಯಣ, ಭಾರತ, ಭಾಗವತಗಳಿಗೆ ಸಂಬಂಧಪಟ್ಟ ಕಥನ ಗೀತೆಗಳು, ಲಕ್ಷ್ಮಣ ನಕ್ಕ ಹಾಡು, ದತ್ತಾತ್ರೇಯನ ಹುಟ್ಟು, ಕೃಷ್ಣನ ಹುಟ್ಟು, ಗೋಪಿಯರ ಜಲಕ್ರೀಡೆ, ಸೀತಾವನವಾಸ, ಪುತ್ರಕಾಮೇಷ್ಠಿ, ಗಂಗಾಗೌರಿ ಜಗಳ ಮುಂತಾದವುಗಳು ಕರ್ನಾಟಕ, ಆಂಧ್ರ ರಾಜ್ಯಗಳಲ್ಲಿರುವುದು ಕಂಡುಬರುತ್ತದೆ. ಅನಂತಪುರ ಜಿಲ್ಲೆಯಲ್ಲಿ ಋಷಿ ಪಂಚಮೀ ವ್ರತ, ಭೀಮನ ಅಮಾವಾಸ್ಯೆ ಮುಂತಾದ ವ್ರತ ಕಥೆಗಳನ್ನೂ ಕನ್ನಡದಲ್ಲಿಯೇ ಹಾಡುವುದು ಒಂದು ವಿಶೇಷದ ಸಂಗತಿ. ತೆಲುಗಿನಲ್ಲಿ ಇವುಗಳಿಗೆ ವ್ರತ ಕಥೆಗಳಿಲ್ಲ.

ಕನ್ನಡ ವೃತ್ತಿಗಾಯಕರಲ್ಲಿ ಹಲವಾರು ಮಂದಿ ತೆಲುಗನ್ನು ಮಾತೃಭಾಷೆಯಾಗಿ ಪಡೆದಿರುವುದು ಕಂಡುಬರುತ್ತದೆ. ಉದಾಹರಣೆಗೆ ಹೆಳವರು (ಪಿಚ್ಚುಕುಂಟ್ಲು), ತೆಲುಗು ಬಣಜಿಗರು (ಬಲಿಜಲು), ದಾಸರು (ದಾಸರ್ಲು) ಮುಂತಾದ ಗಾಯಕರು ಇಂದಿಗೂ ಮನೆಯಲ್ಲಿ ತೆಲುಗು ಭಾಷೆಯನ್ನೂ ಮಾತನಾಡುತ್ತಿದ್ದಾರೆ.

ಎಲ್ಲಮ್ಮ ಸಂಪ್ರದಾಯ, ಮೈಲಾರ ದೇವ ಸಂಪ್ರದಾಯಗಳು ಸಹ ಆಂಧ್ರ - ಕರ್ನಾಟಕ ರಾಜ್ಯಗಳಲ್ಲಿ ವಿಶಿಷ್ಟ ಸಂಪ್ರದಾಯಗಳಾಗಿ ಕಂಡುಬರುತ್ತವೆ.

ಜನಪದ ಗದ್ಯ ಕಥನಗಳಲ್ಲಿ ಪುರಾಣ, ಐತಿಹ್ಯ, ಜನಪದ ಕಥೆ ಎಂಬ ಮೂರು ಪ್ರಕಾರಗಳಿವೆ. ಎಲ್ಲಮ್ಮ, ಗಂಗಮ್ಮ ಮುಂತಾದ ಗ್ರಾಮದೇವತೆಗಳಿಗೆ ಸಂಬಂಧಪಟ್ಟ ಗದ್ಯ ರೂಪಗಳು, ಗೀತ ರೂಪಗಳು ತೆಲುಗು ಮತ್ತು ಕನ್ನಡ ಜಾನಪದಗಳಲ್ಲಿವೆ.

ಜನಪದ ಕಥೆಗಳು ತೆಲುಗು ಜನಪದ ಸಾಹಿತ್ಯದಲ್ಲಿ ಹಲವಾರು ಇದ್ದರೂ ಇದರ ಸಂಗ್ರಹಕಾರ್ಯ ಅಷ್ಟು ನಡೆದಿಲ್ಲ. ತೆಲುಗು ಜನಪದ ಕಥಾ ಸಂಗ್ರಹಗಳು ಎರಡು ಮಾತ್ರ ಹೊರಬಂದಿವೆ. ಕನ್ನಡದಲ್ಲಿ ಹಲವಾರು ಸಂಕಲನಗಳು ಬಂದಿರುವುದು ಹೆಮ್ಮೆಯ ವಿಷಯ. ತೆಲುಗಿನಲ್ಲಿ ಪಿ.ಹೆಚ್.ಡಿ. ಮಹಾ ಪ್ರಬಂಧಗಳು ನಾಲ್ಕು ಬಂದಿವೆ. ನನಗೆ ತಿಳಿದ ಮಟ್ಟಿಗೆ ಕನ್ನಡ ಜಾನಪದ ಕಥೆಗಳ ಬಗ್ಗೆ ಡಾ|| ಸಂಧ್ಯಾ ರೆಡ್ಡಿ ಕೆ.ಆರ್. ಅವರದು ಮೊದಲನೆಯ ಪಿ.ಹೆಚ್.ಡಿ. ಮಹಾ ಪ್ರಬಂಧ. ತೆಲುಗಿನಲ್ಲಿ ಹೆಚ್ಚು ಪ್ರಚಾರದಲ್ಲಿರುವ ತೆನಾಲಿ ರಾಮಕೃಷ್ಣನ ಕಥೆಗಳು ಮತ್ತು ಪರಮಾನಂದಯ್ಯ ಶಿಷ್ಯರ ಕಥೆಗಳು ಕನ್ನಡದಲ್ಲಿಯೂ ಅತ್ಯಂತ ಪ್ರಚಾರದಲ್ಲಿವೆ. ತೆಲುಗಿನಲ್ಲಿ ಕಂಡುಬರುವ ಕಥನ ಘಟಕಗಳಾದ (moljs) ಬ್ರಹ್ಮರಾಕ್ಷಸರು, ಮಾಂತ್ರಿಕರು, ದೇವತೆಗಳು, ಮಲತಾಯಿಯಂತಹ ಪಾತ್ರಗಳು ಮತ್ತು ಮಂತ್ರದಂಡ, ಮಾಂತ್ರಿಕ ಶಕ್ತಿಯುಳ್ಳ ವಸ್ತುಗಳು ಕನ್ನಡದಲ್ಲಿಯೂ ಕಂಡುಬರುತ್ತವೆ.

ಜನಪದ ಸಾಹಿತ್ಯದಲ್ಲಿ ಅತ್ಯಂತ ವಿಶಿಷ್ಟವಾದ ಪ್ರಕಾರಗಳು ಗಾದೆಗಳು ಮತ್ತು ಒಗಟುಗಳು. ಈ ಎರಡು ಪ್ರಕಾರಗಳು ಭಾಷಾಸಾಹಿತ್ಯಗಳೆರಡಕ್ಕೂ ಸಂಬಂಧಪಟ್ಟಂತಹವು. ಗಾದೆಗಳು

ಅನುಭವಗಳ ಸಂಗಮ. ತೆಲುಗಿನಲ್ಲಿ ಗಾದೆಯನ್ನು 'ಸಾಮೆತ' ಎನ್ನುತ್ತಾರೆ. ಕನ್ನಡದಲ್ಲಿ 'ಗಾದೆ ವೇದಕ್ಕೆ ಸಮಾನ' ವೆಂಬಂತೆಯೇ ತೆಲುಗಿನಲ್ಲಿ 'ಗಾದೆಯಿಲ್ಲದ ಮಾತು ಔತಣವಿಲ್ಲದ ಮನೆ' ಎಂದು ಪ್ರಚಾರದಲ್ಲಿದೆ.

ಅಲ್ಪಾಕ್ಷರಗಳಲ್ಲಿ ಅನಲ್ಪಭಾವವನ್ನು, ಅನುಭವವನ್ನು ಚೂಟಿಯಾಗಿ ಹೇಳುವುದು ಗಾದೆಯ ಧರ್ಮ. ಇಂತಹ ಗಾದೆಗಳು ತೆಲುಗಿನಲ್ಲಿ ರಾಶಿಗಟ್ಟಲೆ ಇವೆ. ಡಾ|| ಚಿಲುಕೂರಿ ನಾರಾಯಣರಾವ್‌ರವರು ಒಂದು ಲಕ್ಷಕ್ಕೂ ಹೆಚ್ಚು ಗಾದೆಗಳನ್ನು ಸಂಗ್ರಹಿಸಿದ್ದಾರೆ. Captain M.W. Carr ಎಂಬ ಆಂಗ್ಲೇಯನು 'ಆಂಧ್ರ ಲೋಕೋಕ್ತಿ ಚಂದ್ರಿಕ' ಎಂಬ ಹೆಸರಿನಲ್ಲಿ ತೆಲುಗು ಗಾದೆಗಳ ಸಂಗ್ರಹವನ್ನೂ 1868ರಲ್ಲಿ ಪ್ರಕಟಿಸಿದ್ದಾನೆ. ಇದು ತೆಲುಗಿನಲ್ಲಿ ಮೊದಲನೆಯ ಗಾದೆಗಳ ಸಂಗ್ರಹವಾಗಿದೆ. 1912 ರಲ್ಲಿ ಬಾಸೆಲ್ ಮಿಷನ್ ಪ್ರೆಸ್‌ನವರು ಕನ್ನಡಗಾದೆಗಳನ್ನು ಸಂಗ್ರಹಿಸಿ 'ಕರ್ನಾಟಕ ಲೋಕೋಕ್ತಿ ನಿಧನ' ಎಂಬ ಹೆಸರಿನಿಂದ ಪ್ರಕಟಿಸಿದ್ದಾರೆ. ಇದು ಕನ್ನಡ ಗಾದೆಗಳ ಪ್ರಥಮ ಸಂಕಲನ ಗ್ರಂಥವೆಂದು ತಿಳಿಯುತ್ತದೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಾ|| ಪಿ.ಎಸ್. ಗೋಪಾಲಕೃಷ್ಣರವರು ತೆಲುಗು ಕನ್ನಡ ಗಾದೆಗಳ ತೌಲನಿಕ ಅಧ್ಯಯನ ಮಾಡಿ ತೆಲುಗಿನಲ್ಲಿ ಪಿ.ಹೆಚ್.ಡಿ. ಪಡೆದಿದ್ದಾರೆ. ನಾನು 1977ರಲ್ಲಿ "ಕನ್ನಡ ತೆಲುಗು ಗಾದೆಗಳು - ಸಮಾನಾರ್ಥಗಳು' ಎಂಬ ಹೆಸರಿನಲ್ಲಿ ಕನ್ನಡದಲ್ಲಿ ಒಂದು ಗ್ರಂಥವನ್ನು ಪ್ರಕಟಿಸಿದ್ದೇನೆ. ಇದರ ತೆಲುಗು ಭಾಷಾಂತರವನ್ನು ಸಹ ನಾನು ಪ್ರಕಟಿಸಿದ್ದೇನೆ.

ಕೆಲವು ತೆಲುಗು ಮತ್ತು ಕನ್ನಡ ಗಾದೆಗಳನ್ನು ಇಲ್ಲಿ ಉಲ್ಲೇಖಿಸುತ್ತೇನೆ.

1. ತೆ. ಉಂಟೇ ಉಗಾದಿ, ಲೇಪೋತೆ ಏಕಾಶಿ
   ಕ. ಇದ್ದಾಗ ಹಿರಿಹಬ್ಬ, ಇಲ್ಲದಾಗ ಕಿರಿಹಬ್ಬ.

2. ತೆ. ಸಾಯಬು ಗಡ್ಡಂ ಕಾಲಿ ಏಡುಸ್ತುಂಟೇ, ಬೀಡೀ ಅಂಟೆಂಚುಕುಂಟಾ ತಾಲು ಅನ್ನಡಟ
   ಕ. ಗಡ್ಡ ಹತ್ತಿ ಉರಿಯುವಾಗ ಬೀಡಿ ಹಚ್ಚಿ ಕೊಳ್ಳಲು ಬಂದ.

3. ತೆ. ಅತ್ತ ಪೆಟ್ಟೇದು, ಅಡಕ್ಕು ತಿನನೀದು
   ಕ. ಅತ್ತೆ ಇಕ್ಕಂಗಿಲ್ಲ, ಬೇಡ್ಕೊಂಡು ತಿನ್ನಂಗಿಲ್ಲ.

4. ತೆ. ಅಂದಿತೇ ಜುಟ್ಟು, ಅಂದಕುಂಟೇ ಕಾಳ್ಳು
   ಕ. ಎದ್ದಾಗ ಜುಟ್ಟು ಹಿಡಿ, ಬಿದ್ದಾಗ ಕಾಲುಹಿಡಿ.

5. ತೆ. ಅಯ್ಯೇ ದಾನಿಕೆ ಅರಕತ್ತು, ಕಾನಿದಾನಿಕೆ ಕುಮ್ಮುಕ್ಕು
ಕ. ಆಗೋದುಕ್ಕೆ ಹರಕತ್ತು, ಆಗದ್ದಕ್ಕೆ ಕುಮ್ಮಕ್ಕು

ನನ್ನ ಕ್ಷೇತ್ರಕಾರ್ಯದಲ್ಲಿ ಕೋಲಾರ ಜಿಲ್ಲೆಯಲ್ಲಿ ಹಲವಾರು ಅಶ್ಲೀಲ ಗಾದೆಗಳನ್ನು ಶೇಖರಿಸಿದ್ದೇನೆ. ಆಂಧ್ರದೇಶಕ್ಕಿಂತ ಇಲ್ಲಿಯೇ ಹಲವಾರು ಅಶ್ಲೀಲ ಗಾದೆಗಳು ಇವೆಯೆಂದು ತೋರುತ್ತದೆ. ತೆಲುಗಿನಲ್ಲಿ ಅಶ್ಲೀಲ ಗಾದೆಗಳು ಗ್ರಂಥಸ್ಥವಾಗಿಲ್ಲ. ಕೋಲಾರ ಜಿಲ್ಲೆಯ ಕನ್ನಡ ಮಾತನಾಡುವ ಜನರು ತಮ್ಮ ನಿತ್ಯ ವ್ಯವಹಾರದಲ್ಲಿ ತೆಲುಗು ಗಾದೆಗಳನ್ನೂ ಸಹ ಬಳಸುವುದನ್ನು ಕಾಣಬಹುದು.

ಆಂಧ್ರದೇಶದಲ್ಲಿ ಪ್ರಚಾರದಲ್ಲಿ ಇಲ್ಲದಿರುವ ಹಲವಾರು ತೆಲುಗು ಗಾದೆಗಳು ಕೋಲಾರ ಜಿಲ್ಲೆಯಲ್ಲಿ ಕಂಡುಬರುತ್ತವೆ. ಉದಾಹರಣೆಗೆ "ಸೂಪುಲು ಮಾವಿ, ಮೇಪುಲು ಮಾವಿ"

ಹೊಸಗಾದೆಗಳು ಸಹ ಹುಟ್ಟಿಕೊಂಡಿರುವುದನ್ನು ಕಾಣಬಹುದು. ಉದಾ : ತೆ. "ಓಟು ಪುಟ್ಟಿ ಜನಾಲಕು ಚೇಟು ತೆಚ್ಚಿಂದಿ"

ತೆಲುಗು ಕನ್ನಡಗಳಿಗೆ ಸಂಬಂಧಪಟ್ಟ ಹೊಸಗಾದೆಯನ್ನು ನೋಡಿ

ತೆ. "ಊರಿಗೆ ಬಂದವಳು ನೀರಿಗೆ / ಬೋರಿಗೆ ಬಾರದೇ ಹೋಗ್ತಾಳಾ ?"
ಕ. "ಊರುಕೊಚ್ಚಿಂದಿ ನೀಳ್ಳಕು / ಬೋರುಕು ರಾಕುಂಡಾ ಪೋತುಂದಾ ?"

ಇಂತಹ ತೆಲುಗು ಮತ್ತು ಕನ್ನಡ ಗಾದೆಗಳನ್ನು ನೋಡಿದಾಗ ಇವು ಅನುವಾದಗಳೇನೋ ಎನ್ನುವಂತೆ ಸಂದೇಹವನ್ನು ಉಂಟು ಮಾಡುತ್ತವೆ. ನಿಜವಾಗಿಯೂ ಇವು ಅನುವಾದಗಳಲ್ಲ. ಈ ಎರಡು ಭಾಷೆಗಳಿಗೂ ಮತ್ತು ಎರಡು ಸಂಸ್ಕೃತಿಗಳಿಗೂ ಇರುವ ಅನ್ಯೋನ್ಯ ಸಂಬಂಧವೇ ಇದಕ್ಕೆ ಕಾರಣ.

ಗಾದೆಗಳಂತೆಯೇ ಜನಪದ ಸಾಹಿತ್ಯದಲ್ಲಿ ಪ್ರಮುಖವಾಗಿರುವುವು ಒಗಟುಗಳು. ತೆಲುಗಿನಲ್ಲಿ ಒಗಟುಗಳನ್ನು "ಪೊಡುಪುಕಥಲು" ಎನ್ನುತ್ತಾರೆ. ಅನಂತಪುರಂ ಜಿಲ್ಲೆಯಲ್ಲಿ ಇವುಗಳನ್ನು "ಎದುರು ಕಥಲು" ಎಂದು ಕರೆಯುತ್ತಾರೆ. ಇಲ್ಲಿನ ಕನ್ನಡದವರು ಇವುಗಳನ್ನೂ "ಎದುರು ಕತೆಗಳು" "ಒಡಕತೆಗಳು" ಎಂದು ಕರೆಯುವುದುಂಟು. ತುಳು ಒಗಟುಗಳನ್ನು "ಎದುರುಕತೆ" ಎಂದು ಕರೆಯುತ್ತಾರೆ. ಕೋಲಾರ ಜಿಲ್ಲೆಯಲ್ಲಿ ತೆಲುಗಿನವರು "ಒಗಟ್ಲು" ಎಂದೂ, "ಒಡ್ಡುಕಥ" ಎಂದೂ ಕರೆಯುತ್ತಾರೆ.

ತೆಲುಗಿನಲ್ಲಿ ಒಗಟುಗಳ ಬಗ್ಗೆ ಒಂದು ಪಿ.ಎಚ್.ಡಿ. ಮಹಾಪ್ರಬಂಧ ಹೊರ ಬಂದಿದೆ. ಎರಡು, ಮೂರು ಒಗಟಿನ ಸಂಕಲನ ಗ್ರಂಥಗಳು ಪ್ರಕಟವಾಗಿವೆ. ಕನ್ನಡದಲ್ಲಿ

ಹಲವಾರು ಸಂಕಲನ ಗ್ರಂಥಗಳು ಹೊರಬಂದಿವೆ. ನನ್ನ ಮಾರ್ಗದರ್ಶನದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಶ್ರೀ ಎ. ಆಂಜಿನಪ್ಪ ಅವರು ತೆಲುಗು ಕನ್ನಡ ಒಗಟುಗಳ ಬಗೆಗೆ ಪಿ.ಹೆಚ್.ಡಿ. ಮಾಡುತ್ತಿದ್ದು, ಇನ್ನು ಒಂದೆರಡು ತಿಂಗಳುಗಳಲ್ಲಿ Submit ಮಾಡುವ ಹಂತದಲ್ಲಿದ್ದಾರೆ.

ಕೆಲವು ತೆಲುಗು ಮತ್ತು ಕನ್ನಡ ಒಗಟುಗಳನ್ನು ಹೆಸರಿಸುತ್ತೇನೆ.

1. ತೆ. ತಂಡ್ರಿ ಗರಗರ
ತಲ್ಲಿ ಪೀಚು ಪೀಚು
ಬಿಡ್ಡಲು ರತ್ನ ಮಾಣಿಕ್ಯಾಲು
ಮನುಮಲು ಬೊಮ್ಮರಾಳ್ಳು

ಅಂತೆಯೇ ಕನ್ನಡದಲ್ಲಿ
ತಂದೆ ಗರಗರ
ತಾಯಿ ತರಕಲು
ಮಗಳು ಬೋಡಿ
ಮೊಮ್ಮಗಳು ಕಮ್ಮಗೆ
- ಸಮಾಧಾನ "ಹಲಸಿನ ಹಣ್ಣು"

2. ತೆ. ಅಂಗೀಮೀದ ಪದಾರು ಅಂಗೀಲು
ಕ. ಅಂಗೀಮೇಲೆ ಹದ್ನಾರು ಅಂಗಿಗಳು
- ಸಮಾಧಾನ "ಈರುಳ್ಳಿ"

3. ತೆ. ಕೊಂಡ ನಿಂಡಾ ಕೊಡಿವೆಂಡ್ಲು
ಕ. ಬೆಟ್ಟದ ತುಂಬಾ ಕುಡುಗೋಲುಗಳು
- ಸಮಾಧಾನ "ಹುಣಿಸೇಕಾಯಿ"

4. ತೆ. ಅಂಬಾಲು ಅಂಬಾಲು ಮಾದ ತುಂಬಾಲು (ಕಾಳ್ಲು, ಪಿರುದುಲು)
ಕುಂಬಾಲಮೀದ ಕುಡಿತಿಬಾನ (ಕಡುಪು)
ಕುಡಿತಿಬಾನುಮೀದ ಈರ ಚೆಕ್ಕಲು (ರೊಮ್ಮು)
ದಾನಿಮೀದ ಇನುಪಗುಂಡು (ತಲ)
ದಾನಿಮೀದ ಎದುರುಪೊದ (ವೆಂಟ್ರುಕಲು)
ಎದುರು ಪೊದಲೋ ವೇಟಾಡೇ ರಾಜು ರಾಜುಪೇರೇಮಿ ?
- ಸಮಾಧಾನ "ತಲಲೋ ಪೇನು"

(ಕಡೇಹಳ್ಳಿಗ್ರಾಮ, ಗುಡಿಬಂಡೆ ತಾಲ್ಲೂಕು, ಕೋಲಾರ ಜಿಲ್ಲೆ)

ಅಂತೆಯೇ ಕನ್ನಡದಲ್ಲಿ -

ಕ. ಡೊಂಕಾ ಬಿಂಕದ ಎರಡು ಆಲದಮರ (ಮೊಣಕಾಲು)
ಆಲದಮರದ ಮೇಲೆ ಕೂಸುಗಡಿಗೆ (ಹೊಟ್ಟೆ)
ಕೂಸುಗಡಿಗೆಯ ಮೇಲೆ ಕುತಾರಿ ಚೆಂಬು (ತಲೆ)
ಕುತಾರಿ ಚೆಂಬಿನ ಮೇಲೆ ಕರಿಕೇ ಪಾಚು (ಕೂದಲು)
ಕರಿಕೇ ಪಾಚಿನಮೇಲೆ ಕಣ ಮೇಸ್ತ್ರೆತೆ (ಹೇನು)
(ಮಲಯನೂರು, ಅನಂತಪುರ ಜಿಲ್ಲೆ)

ಈ ಮೇಲಿನ ತೆಲುಗು ಮತ್ತು ಕನ್ನಡ ಒಗಟುಗಳಲ್ಲಿ ತೆಲುಗಿಗೆ ಸಂಬಂಧಪಟ್ಟಿದ್ದಷ್ಟು ಕನ್ನಡ ದೇಶದಲ್ಲಿಯೂ, ಕನ್ನಡಕ್ಕೆ ಸಂಬಂಧಪಟ್ಟಿದ್ದು ತೆಲುಗುನಾಡಿನಲ್ಲಿಯೂ ಪ್ರಚಾರದಲ್ಲಿರುವುದು ಒಂದು ವೈಶಿಷ್ಟ್ಯವಾಗಿದೆ.

ತೆಲುಗು ಜಾನಪದವು ವೈಜ್ಞಾನಿಕವಾಗಿ ವೈವಿಧ್ಯಮಯ ವಿಭಾಗಗಳಿಂದ ಪರಿಪುಷ್ಟವಾಗಿದ್ದರೂ ಅದರ ಬಗ್ಗೆ ಅಧ್ಯಯನ ಸಾಕಷ್ಟು ನಡೆಯಲೇ ಇಲ್ಲ ಎಂಬುದು ವಿಷಾದದ ಸಂಗತಿ. ತೆಲುಗು ಜನಪದ ನಂಬಿಕೆಗಳನ್ನು ಕುರಿತಂತೆ ನಾನು ಸಂಗ್ರಹಿಸಿ, ವಿಶ್ಲೇಷಿಸಿ, ಪ್ರಕಟಿಸಿದ "ಜಾನಪದುಲು ನಮ್ಮ ಕಾಲು" ಎಂಬ ಒಂದೇ ಒಂದು ಗ್ರಂಥ ಪ್ರಕಟವಾಗಿದೆ. ತೆಲುಗಿನ ನಂಬಿಕೆಗಳನ್ನು ಕುರಿತು ಒಂದು ಎಂ.ಫಿಲ್. ಡಿಗ್ರಿ ಹೊರಬಂದಿದೆ.

ನಂಬಿಕೆಗಳು ಜಾನಪದದ ಮನಸ್ಸತ್ವಕ್ಕೆ ಸಂಬಂಧಪಟ್ಟಂತಹವು. ಎಂದರೆ ಇವು ಜಾನಪದದ ಮಾನಸಿಕ ಅನುಭವಗಳೆಂದು ಹೇಳಬಹುದು. ಅನಾಗರಿಕರು. ಅವಿದ್ಯಾವಂತರಲ್ಲಿಯೇ ಅಲ್ಲದೇ ನಾಗರಿಕರು, ವಿದ್ಯಾವಂತರಲ್ಲಿಯೂ ನಂಬಿಕೆಗಳು ಮನೆ ಮಾಡಿಕೊಂಡಿವೆ. ಮನಸ್ಸಿನಲ್ಲಿ ಕೊರೆಯುವ ಮಾನಸಿಕ ಸಂಕ್ಷೋಭೆಗಳೇ ಇಂತಹ ನಂಬಿಕೆಗಳಿಗೆ, ಮೂಢನಂಬಿಕೆಗಳಿಗೆ ಮೂಲಕಾರಣ. ಜನಪದ ನಂಬಿಕೆಗಳಲ್ಲಿ ಆಚಾರವಿಚಾರಗಳು, ಶಕುನಗಳಿಗೆ ಸಂಬಂಧಪಟ್ಟ, ಹಲವಾರು ಅಂಶಗಳು ಕಂಡುಬರುತ್ತವೆ.

ಕೆಲವು ತೆಲುಗು ಮತ್ತು ಕನ್ನಡ ಜನಪದ ನಂಬಿಕೆಗಳು :

i. ಶುಭಕಾರ್ಯಕ್ಕೆಂದು ಹೊರಟಾಗ, ಯಾರಾದರೂ "ಎಲ್ಲಿಗೆ ?" ಎಂದು ಕೇಳಬಾರದು. ಹಾಗೆ ಕೇಳಿದಾಗ ಒಂದು ಕ್ಷಣ ಕುಳಿತಿದ್ದು ಹೋಗುವುದು ಒಳ್ಳೆಯದು. ಇಲ್ಲವಾದರೆ ಹೋದ ಕೆಲಸ ಆಗುವುದಿಲ್ಲ.

2. ಗರ್ಭಿಣಿ ಹೆಂಗಸು ಗ್ರಹಣ ನೋಡಬಾರದು.

3. ನಾಗಪ್ರತಿಷ್ಠೆ ಮಾಡಿದರೆ ಮಕ್ಕಳಾಗುತ್ತವೆ.

4. ತೆಂಗಿನಕಾಯನ್ನು ಒಡೆದ ಮೇಲೆ ಮತ್ತೆ ಕೂಡಿಸಬಾರದು.

ಹೀಗೆ ಬೆಕ್ಕು, ಹಲ್ಲಿಯ ಶಕುನಗಳು, ಹುಟ್ಟುಮಚ್ಚೆಗಳ ಶಕುನಗಳು, ದೇಹಾಂಗಗಳ ಅದುರುವುದರಿಂದ ಬರಬಹುದಾದ ಶುಭಾಶುಭ ಶಕುನಗಳು, ಕನಸುಗಳಿಂದ ಬರುವ ಶಕುನಗಳು ಇತ್ಯಾದಿಗಳು ಹೆಚ್ಚು ಕಡಿಮೆ ಆಂಧ್ರ ಕರ್ನಾಟಕಗಳಲ್ಲಿ ಸಮಾನವಾಗಿ ಕಂಡುಬರುತ್ತವೆ.

ಸಾಂಘಿಕ ಜಾನಪದ ಆಚಾರಗಳಲ್ಲಿ ಧರ್ಮಕ್ಕೆ ಹೆಚ್ಚು ಪ್ರಾಧಾನ್ಯವಿದೆ. ಗ್ರಾಮ ದೇವತಾರಾಧನೆ ಹಿಂದಿನ ಕಾಲದಿಂದಲೂ ನಡೆದುಕೊಂಡು ಬಂದ ಆಚಾರ. ಗ್ರಾಮ ದೇವತೆಗಳು ಸಾಧಾರಣವಾಗಿ ಒಂದು ಚಿಕ್ಕ ಕಲ್ಲಿನ ರೂಪದಲ್ಲಿ ಇರುವುದು ಕಂಡು ಬರುತ್ತದೆ. ವಿಗ್ರಹ ರೂಪದಲ್ಲಿ ಗ್ರಾಮದೇವತೆಗಳಿದ್ದರೂ, ಅಂತಹ ಗ್ರಾಮ ದೇವತೆಗಳು ತೀರಾ ವಿರಳ. ಗ್ರಾಮ ದೇವತೆಯ ಪೂಜಾವಿಧಾನಗಳಲ್ಲಿಯೂ ಪ್ರಾದೇಶಿಕ ಭೇದಗಳು ಕಂಡುಬರುತ್ತವೆ.

ಸಾಧಾರಣವಾಗಿ ಜಾನಪದರು ವಿಗ್ರಹಕ್ಕೆ ಬದಲಾಗಿ ಯಾವುದಾದರೂ ಒಂದು ಕಲ್ಲನ್ನು ದೇವತೆಯಾಗಿ ಭಾವಿಸಿ, ಆ ಕಲ್ಲನ್ನು ಪೂರ್ವಮುಖದಲ್ಲಿಟ್ಟು, ಸುತ್ತಲೂ ಮೂರುಕಡೆ ಕಲ್ಲು ಚಪ್ಪಡಿಗಳನ್ನು, ಬಂಡೆಗಳನ್ನು ನೆಟ್ಟು ಮೇಲೊಂದು ಚಪ್ಪಡಿಯನ್ನು ಮುಚ್ಚುತ್ತಾರೆ. ಇಂತಹ ಗುಡಿಗಳನ್ನೂ ಸಾಧಾರಣವಾಗಿ ಬೇವಿನ ಮರಗಳ ಕೆಳಗೆ ಕಟ್ಟುವುದುಂಟು. ಕೆಲವು ಗ್ರಾಮಗಳಲ್ಲಿ ದೊಡ್ಡ ಗುಡಿಗಳೂ ಮತ್ತು ಧ್ವಜ ಸ್ತಂಭಗಳೂ ಇರುತ್ತವೆ. ಈ ಗುಡಿಗಳಲ್ಲಿರುವ ದೇವತೆಗಳು ವಿಗ್ರಹ ರೂಪದಲ್ಲಿರುತ್ತವೆ. ಶಿಷ್ಟ ದೇವತೆಗಳಂತೆಯೇ ಇವುಗಳನ್ನು ವೇಷಭೂಷಣಗಳಿಂದ ಅಲಂಕರಿಸಿ, ಕೆಂಪು, ಹಸಿರು ಮತ್ತು ಅರಿಶಿನ ಬಣ್ಣಗಳಿರುವ ಸೀರೆಗಳನ್ನು ಉಡಿಸುತ್ತಾರೆ. ಕರ್ನಾಟಕ, ಆಂಧ್ರ ರಾಜ್ಯಗಳಲ್ಲಿ ಮೇಲೆ ಹೇಳಿರುವ ಸಮಾನಾಂಶಗಳು ಕಂಡುಬರುತ್ತವೆ. ಗ್ರಾಮ ದೇವತಾರಾಧನೆಯಲ್ಲಿ ಬಲಿ ಕೊಡುವುದು, ದೇವತೆ ಭಕ್ತನ ಮೈಮೇಲೆ ಬರುವುದು ಈ ಎರಡು ರಾಜ್ಯಗಳಲ್ಲಿಯೂ ಕಂಡುಬರುತ್ತದೆ. ಗ್ರಾಮ ದೇವತಾರಾಧನೆ ಸಂದರ್ಭಗಳಲ್ಲಿ ಜಾತ್ರೆ, ಉತ್ಸವ, ಪರಿಸೆ, ಹರಕೆ, ಹಾಡುಗಳು, ಕಥೆಗಳು, ಕಥನ ಗೀತೆಗಳು ಆಂಧ್ರ ಕರ್ನಾಟಕಗಳಲ್ಲಿ ಪ್ರಚಾರದಲ್ಲಿವೆ.

ಆಂಧ್ರದಲ್ಲಿ ಪೆದ್ದಮ್ಮ, ಚೌಡಮ್ಮ, ದುರ್ಗಮ್ಮ, ಮಾರಮ್ಮ, ಅಂಕಮ್ಮ, ಪೋ[illegible]ರಮ್ಮ, ಮುತ್ಯಾಲಮ್ಮ, ಗಂಗಮ್ಮ, ಪೋಚಮ್ಮ, ಪೋತುರಾಜು, ಸುಂಕಾಲಮ್ಮ, ಮೈಸಮ್ಮ, ಈದೆಮ್ಮ, ಎಲ್ಲಮ್ಮ, ಮುಂತಾದ ಗ್ರಾಮದೇವತೆಗಳೂ, ಕರ್ನಾಟಕದಲ್ಲಿ ಗಂಗಮ್ಮ, ಮಾರಮ್ಮ, ಎಲ್ಲಮ್ಮ, ದೊಡ್ಡಮ್ಮ, ಪೋತುರಾಜು, ರೇಣುಕಾಂಬ, ದ್ರೌಪದಿ ಮುಂತಾದ ಗ್ರಾಮ

ದೇವತೆಗಳೂ ಪ್ರಾಚುರ್ಯದಲ್ಲಿದ್ದಾರೆ. ಎಲ್ಲಮ್ಮ, ಮಾರಮ್ಮ, ದೊಡ್ಡಮ್ಮ, ಗಂಗಮ್ಮ, ಗ್ರಾಮದೇವತೆಗಳು, ಆಂಧ್ರ ಕರ್ನಾಟಕಗಳಲ್ಲಿ ವಿಶೇಷವಾಗಿ ಆರಾಧಿಸಲ್ಪಡುವರು. ಆ ಆರಾಧನಾ ಕಾಲದಲ್ಲಿ ಜಾತ್ರೆ, ಪರುಸೆ, ಉತ್ಸವ, ಮೆರವಣಿಗೆ, ಕರಗಗಳು ನಡೆಯುವುದರಲ್ಲಿ ಸರೂಪತೆ ಕಂಡುಬರುತ್ತದೆ. ತೆಲುಗಿನಲ್ಲಿ ಗ್ರಾಮದೇವತೆಗಳ ಬಗ್ಗೆ ಎರಡು ಪಿ.ಎಚ್.ಡಿ. ಮಹಾಪ್ರಬಂಧಗಳು ಹೊರಬಂದಿವೆ. ಕನ್ನಡದಲ್ಲಿಯೂ ಸಾಕಷ್ಟು ಕೆಲಸ ನಡೆದಿದೆ.

ಜನಪದ ವೈದ್ಯವಿಧಾನವೂ ತೆಲುಗು ಕನ್ನಡ ಜನಪದಗಳಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಜಾನಪದ ವೈದ್ಯವೇ 'ನಾಟೀ ವೈದ್ಯ'ವಾಗಿ ಆಂಧ್ರ ಕರ್ನಾಟಕಗಳಲ್ಲಿ ಪ್ರಚಾರದಲ್ಲಿದೆ. ಜಾನಪದ ವೈದ್ಯದಲ್ಲಿ ಪ್ರಧಾನವಾದದ್ದು ಪ್ರಕೃತಿ ಜಾನಪದ. ಇದರಲ್ಲಿ ಗಿಡದ ಮೂಲಿಕೆಗಳು, ಬೇರುಗಳು, ಖನಿಜಗಳು, ಪ್ರಾಣಿಗಳ ಅವಯುವಗಳು ಉಪಯೋಗಿಸಲ್ಪಡುತ್ತವೆ. ಮಂತ್ರ ತಂತ್ರಗಳು ಸಹ ಜಾನಪದ ವೈದ್ಯವಿಧಾನದಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಹಾವು, ಚೇಳು ಕಡಿತಗಳಿಗೆ ಮಂತ್ರ, ದೆವ್ವಗಳ ಬಾಧೆಗಳನ್ನು ತೊಲಗಿಸಲು ಮಂತ್ರಗಳು, ಸಂತಾನಕ್ಕಾಗಿ ಯಂತ್ರಗಳು, ತಾಯಿತಗಳು, ದೃಷ್ಟಿದೋಷವನ್ನು ತೊಲಗಿಸಲು ಪೊರಕೆಯಿಂದ ನಿವಾಳಿಸುವುದು ಅಥವಾ ಅನ್ನವನ್ನು ಇಳೆ ತೆಗಿಯುವುದು, ಮುಂತಾದವುಗಳು ಆಂಧ್ರ ಕರ್ನಾಟಕಗಳಲ್ಲಿ ಸಮಾನವಾಗಿ ಕಂಡುಬರುತ್ತವೆ. ಆಂಧ್ರದಲ್ಲಿ ಜಾನಪದ ವೈದ್ಯ ಅಧ್ಯಯನ ಸಾಕಷ್ಟು ನಡೆದಿಲ್ಲ. ಆದರೂ ಒಂದೆರಡು ಗ್ರಂಥಗಳು ಪ್ರಕಟವಾಗಿವೆ. ಕರ್ನಾಟಕದಲ್ಲಿ ಆಂಧ್ರಕ್ಕಿಂತಲೂ ಹೆಚ್ಚು ಕೆಲಸ ನಡೆದಿದೆ. ಇದರ ಬಗ್ಗೆ ಹಲವಾರು ಪ್ರಬಂಧಗಳು ಪ್ರಕಟವಾಗಿವೆ.

ಜನಪದ ಆಟಗಳ ಬಗ್ಗೆ ತೆಲುಗಿನಲ್ಲಿ ಕ್ರೀಡಾವಿನೋದಗಳಿಗೆ ಸಂಬಂಧಪಟ್ಟಂತೆ ಒಂದು ಪಿ.ಎಚ್.ಡಿ. ಮಹಾಪ್ರಬಂಧ ಹೊರಬಂದಿದೆ. ಕರ್ನಾಟಕದಲ್ಲಿ ಜನಪದ ಆಟಗಳ ಬಗ್ಗೆ ಹೆಚ್ಚು ಕೆಲಸ ನಡೆದಿದೆ. ಹಲವಾರು ಪ್ರಬಂಧಗಳು ಪ್ರಕಟವಾಗಿವೆ. ಹಲವಾರು ಕ್ರೀಡೆಗಳು ಆಂಧ್ರ ಕರ್ನಾಟಕಗಳಲ್ಲಿ ಸಮಾನವಾಗಿ ಕಂಡುಬರುತ್ತವೆ.

ಪ್ರದರ್ಶನಾತ್ಮಕ ಜನಪದ ಕಲೆಗಳಲ್ಲಿ ಮುಖ್ಯವಾದವುಗಳು ಜನಪದ ರೂಪಕ, ಜನಪದ ಸಂಗೀತ ಮತ್ತು ಜನಪದ ನೃತ್ಯ. ಜನಪದ ರೂಪಕಗಳಲ್ಲಿ ಪ್ರಧಾನವಾದವುಗಳು ಯಕ್ಷಗಾನ, ಬಯಲಾಟ, ಗೊಂಬೆಯಾಟ ಮುಂತಾದವುಗಳು. ಆಂಧ್ರದಲ್ಲಿ ಯಕ್ಷಗಾನ ಕೇವಲ ಸಾಹಿತ್ಯಪ್ರಕಾರವಾಗಿ ಮಾತ್ರ ಉಳಿದುಕೊಂಡಿದೆ. ಆದರೆ ಇದು ಕನ್ನಡ ನಾಡಿನಲ್ಲಿ ಒಂದು ಪ್ರಸಿದ್ಧ ಜನಪದಕಲೆಯಾಗಿ ವೃತ್ತಿ ಕಲಾಕಾರರಿಂದ ಪ್ರಯೋಗಿಸಲ್ಪಡುತ್ತಿರುವುದು ಹೆಮ್ಮೆಯ ವಿಷಯ. ಡಾ॥ ಎಸ್ವೀ ಜೋಗಾರಾವ್ ಅವರು ಯಕ್ಷಗಾನಗಳ ಬಗ್ಗೆ ವಿಶೇಷವಾದ ಸಂಶೋಧನೆ ನಡೆಸಿ ಪಿಎಚ್‌ಡಿ. ಪದವಿಯನ್ನು ಪಡೆದಿದ್ದಾರೆ. ಅಂತೆಯೇ ಕೆ.ಎಂ. ಕೃಷ್ಣರಾವ್

ಅವರು, ಡಾ|| ಶಿವರಾಮ ಕಾರಂತರು ಯಕ್ಷಗಾನಗಳ ಬಗ್ಗೆ ವಿಶೇಷವಾದ ಅಧ್ಯಯನ ಪ್ರಯೋಗಗಳನ್ನು ನಡೆಸಿದ್ದಾರೆ.

ತೆಲುಗು ಯಕ್ಷಗಾನಗಳಲ್ಲಿರುವ ದರುವುಲು, ಎಲಲು, ಸುವ್ವಾಲಲು, ಮಂಗ ಹಾರತುಲು ಮುಂತಾದ ದೇಶಿ ರಚನೆಗಳು ಕನ್ನಡದಲ್ಲೂ ಇವೆ. ರಾಮಾಯಣ, ಮಹಾಭಾರತ ಭಾಗವತಗಳಿಗೆ ಸಂಬಂಧಪಟ್ಟ ಯಕ್ಷಗಾನಗಳು, ಜೈಮಿನಿ ಭಾರತದಲ್ಲಿರುವ ಕಥೆಗಳು ಮೈರಾವಣ, ಹನುಮದ್ರಾಮ ಸಂಗ್ರಾಮ ಮುಂತಾದ ಕಥೆಗಳು ತೆಲುಗು ಕನ್ನಡಗಳಲ್ಲಿಯು ಪ್ರಚಾರದಲ್ಲಿವೆ.

ತೆಲುಗು ಯಕ್ಷಗಾನವು ಕೋಲಾರ ಜಿಲ್ಲೆಯಲ್ಲಿರುವ ಮೂಡಲಪಾಯಕ್ಕೆ ಸ ಹೋಲುವಂತಿದೆಯೆಂದು ಡಾ|| ತಂಗಿರಾಲ ವೆಂಕಟಸುಬ್ಬರಾವ್‌ರವರು ಅಭಿಪ್ರಾಯಪಟ್ಟಿ ಪಾಲ್ಕುರಿಕೆ ಸೋಮನಾಥನು ಹೆಸರಿಸಿದ 'ಕೇಳಿಕೆ' ಎಂಬ ತೆಲುಗು ಯಕ್ಷಗಾನವು ಇಂದಿಗ ಕೋಲಾರ ಜಿಲ್ಲೆಯಲ್ಲಿ ಪ್ರಾಚುರ್ಯದಲ್ಲಿರುವುದಾಗಿ ಡಾ|| ಆರ್.ವಿ. ಎಸ್. ಸುಂದರ ತಿಳಿಸಿದ್ದಾರೆ.

ತೆಲುಗು ಬಯಲಾಟಗಳಿಗೆ ಪ್ರಸಿದ್ಧವಾದುದು ರಾಯಲಸೀಮೆ. ಅಪ್ಪಟವಾ ಜನಪದ ನಾಟಕವೆಂದರೆ ಬಯಲಾಟ. ತೆಲುಗು ಬಯಲಾಟಗಳ ಮೇಲೆ ಕನ್ನಡ ಬಯ ಲಾಟಗಳ ಪ್ರಭಾವವು ಹೆಚ್ಚಾಗಿ ಕಂಡುಬರುತ್ತದೆ. ಅನಂತಪುರ ಜಿಲ್ಲೆಯಲ್ಲಿ ಹಲವಾ ಗ್ರಾಮಗಳಲ್ಲಿ ಮುಖ್ಯವಾಗಿ ದ್ವಿಭಾಷಾ ಪ್ರಾಂತ್ಯಗಳಲ್ಲಿ ತೆಲುಗಿನವರು ಕನ್ನಡ ಬಯಲಾ ಗಳನ್ನೇ ಪ್ರದರ್ಶಿಸುವುದು ಒಂದು ವಿಶೇಷ.

ಆಂಧ್ರ ಕರ್ನಾಟಕ ರಾಜ್ಯಗಳಲ್ಲಿ ಜನಪದ ಕಲಾರೂಪಗಳು ಹಲವಾರು ಸಮಾನವಾ ಕಂಡು ಬರುತ್ತವೆ. ಅವುಗಳಲ್ಲಿ ಕೋಲಾಟ, ಕರಗ, ಹುಲಿವೇಷ, ಗಂಗೆತ್ತಿನಾಟ, ಗೊರವನೃತ ಜೋಕುಮಾರ ಸಂಪ್ರದಾಯ, ಬುಡುಬುಡಿಕೆ, ಅಲಾವಿ ಕುಣಿತ, ಉರುಮೆ ವಾದ್ಯ, ಕೀ ಕುದುರೆ, ಗೊರವಯ್ಯ ಮುಂತಾದುವುಗಳು ವಿಶಿಷ್ಟವಾದವು. ಡಾ|| ಮಿಕ್ಕಿಲಿನೇನಿ ರಾಧಾಕೃ ಮೂರ್ತಿಯವರು ತೆಲುಗು ಜನಪದ ಕಲಾರೂಪಗಳ ಬಗ್ಗೆ ವಿಶೇಷವಾದ ಸಂಶೋಧ ನಡೆಸಿದ್ದಾರೆ. ಅಂತೆಯೇ ಗೊ.ರು. ಚನ್ನಬಸಪ್ಪ ಅವರ ಸಂಪಾದಕತ್ವದಲ್ಲಿ ಕನ್ನಡದ 'ಕರ್ನಾಟಕದಲ್ಲಿ ಜನಪದ ಕಲೆಗಳು' ಎಂಬ ಗ್ರಂಥವನ್ನು ಕನ್ನಡ ಸಾಹಿತ್ಯ ಪರಿಷತ್ತಿನವ ಪ್ರಕಟಿಸಿದ್ದಾರೆ. ತೆಲುಗಿನಲ್ಲಿ ಜನಪದ ಕಲೆಗಳ ಬಗ್ಗೆ ಪಿಎಚ್‌ಡಿ. ಮಹಾ ಪ್ರಬಂಧಗ ಮೂರು ಹೊರಬಂದಿವೆ.

ಇನ್ನು ಜನಪದ ಸಂಗೀತ. ಹಲವಾರು ತೆಲುಗು ಕನ್ನಡ ಜನಪದ ಗೀತ

ಮಹಾ ಪ್ರಬಂಧಗಳಲ್ಲಿ ಜನಪದ ಗೀತೆಗಳಲ್ಲಿರುವ ಸಂಗೀತವನ್ನು ಸಂಶೋಧಕರು ತೋರಿಸಿಕೊಟ್ಟಿದ್ದಾರೆ. ಡಾ|| ವಿಂಜಮೂರಿ ಸೀತಾದೇವಿಯವರು ತೆಲುಗು ಜನಪದ ಸಂಗೀತದ ಬಗೆಗೆ ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಎಂ.ಲಿಟ್. ಪದವಿಯನ್ನು ಪಡೆದಿದ್ದಾರೆ. ಇದು ತೆಲುಗು ಜನಪದದಲ್ಲಿ ಮೊದಲನೆಯದಾದ ಎಂ.ಲಿಟ್. ಡಿಗ್ರೀಯಾಗಿರುತ್ತದೆ.

ಜನಪದ ಭಾಷೆಯ ಬಗೆಗೂ ತೆಲುಗು ಕನ್ನಡ ಭಾಷೆಗಳಲ್ಲಿ ಅಧ್ಯಯನಗಳು ನಡೆದಿವೆ. ಹಲವಾರು ಪ್ರಬಂಧಗಳು ಪ್ರಕಟವಾಗಿವೆ. ಕನ್ನಡದಲ್ಲಿ ಬಯ್ಗುಳಗಳ ಬಗ್ಗೆ ಕೆಲವು ಪುಸ್ತಕಗಳು ಪ್ರಕಟವಾಗಿವೆ. ತೆಲುಗಿನಲ್ಲಿ ಬಯ್ಗುಳಗಳ ಬಗೆಗೆ ನಾನೊಂದು ಕಿರುಪುಸ್ತಕ ವನ್ನು ಪ್ರಕಟಿಸಿದ್ದೇನೆ.

ವಸ್ತು ಸಂಸ್ಕೃತಿಯ ಬಗ್ಗೆ ಆಂಧ್ರ ಕರ್ನಾಟಕಗಳಲ್ಲಿ ಇನ್ನೂ ಅಧ್ಯಯನಗಳು ನಡೆಯ ಬೇಕಾಗಿವೆ.

ಇನ್ನು ಬುಡಕಟ್ಟುಗಳ ಅಧ್ಯಯನಗಳ ಬಗೆಗೆ ತೆಲುಗಿನಲ್ಲಿ ಸಾಕಷ್ಟು ಕೆಲಸ ನಡೆದಿಲ್ಲ. ತೆಲುಗು ಗಿರಿಜನ ಗೀತೆಗಳ ಬಗ್ಗೆ ಎರಡು, ಮೂರು ಪಿ.ಎಚ್.ಡಿ., ಮಹಾ ಪ್ರಬಂಧಗಳು ಹೊರಬಂದಿವೆ. ಕನ್ನಡದಲ್ಲಿ ಬುಡಕಟ್ಟುಗಳ ಅಧ್ಯಯನದ ಬಗ್ಗೆ ಹೆಚ್ಚು ಕೆಲಸ ನಡೆದಿದೆ. ಈ ದಿಶೆಯಲ್ಲಿ ತೀ.ನಂ. ಶಂಕರನಾರಾಯಣ ಅವರ "ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು", "ಒಂದು ಬುಡಕಟ್ಟಿನ ಸಾಂಸ್ಕೃತಿಕ ಅಧ್ಯಯನ," ಪಿ.ಕೆ. ಖಂಡೋಬಾ ಅವರ "ಕರ್ನಾಟಕ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಮಹಾ ಪ್ರಬಂಧ - ಬುಡಕಟ್ಟುಗಳನ್ನು ಕುರಿತು ನಡೆಸಿದ ಅಧ್ಯಯನಗಳಲ್ಲಿ ಗಮನಾರ್ಹವಾದುವುಗಳು. ಅಂತೆಯೇ ಕಾಳೇಗೌಡ ನಾಗವಾರರವರ ಪಿ.ಎಚ್.ಡಿ. ಪ್ರಬಂಧ 'ಕಾಡುಗೊಲ್ಲರ ಒಂದು ಹಟ್ಟಿಯ ಅಧ್ಯಯನ'.

ಇದೊಂದು ಪಕ್ಷಿನೋಟವಷ್ಟೇ. ಸಮಯಾಭಾವದಿಂದ ಹಲವಾರು ವಿಷಯಗಳನ್ನು ಕೈಬಿಟ್ಟಿದ್ದೇನೆ.

ಇನ್ನು ತೆಲುಗು ಜಾನಪದ ಕ್ಷೇತ್ರವನ್ನು ಕನ್ನಡ ಜಾನಪದ ಕ್ಷೇತ್ರಕ್ಕೆ ಹೋಲಿಸಿದರೆ ತುಂಬಾ ಹಿಂದೆ ಬಿದ್ದಿರುವುದು ವಿಷಾದಕರವಾದ ವಿಷಯ. ಕನ್ನಡ ರಾಜ್ಯದಲ್ಲಿ ಜಾನಪದ ವಿದ್ವಾಂಸರಿಗೆ ದೊರೆಯುವ ಪ್ರೋತ್ಸಾಹ ತೆಲುಗು ನಾಡಿನಲ್ಲಿ ಅತಿವಿರಳವಾಗಿದೆ. ಹೀಗಾಗಿ ಇನ್ನೂ ಹಲವಾರು ಜನಪದ ಪ್ರಕಾರಗಳ ಬಗೆಗೆ ಅಧ್ಯಯನಗಳು ನಡೆಯ ಬೇಕಾಗಿದೆ. ದ್ವಿಭಾಷಾ ಪ್ರಾಂತ್ಯಗಳ ತೆಲುಗು ಕನ್ನಡ ಜಾನಪದದ ಬಗ್ಗೆ ತೌಲನಿಕ ಅಧ್ಯಯನ ನಡೆಯಬೇಕಾದ ಆವಶ್ಯಕತೆಯಿದೆ. ಬೆಂಗಳೂರು ಮತ್ತು ಮೈಸೂರು ವಿಶ್ವ

ವಿದ್ಯಾನಿಲಯಗಳ ತೆಲುಗು ವಿಭಾಗದ ಪ್ರಾಧ್ಯಾಪಕರು ತೆಲುಗು ಕನ್ನಡ ಜಾನಪದದ ಬಗೆಗೆ ತೌಲನಿಕ ಅಧ್ಯಯನಗಳನ್ನು ನಡೆಸುತ್ತಿರುವುದು ಗಮನಾರ್ಹವಾದ ವಿಷಯ.

ಕರ್ನಾಟಕದಲ್ಲಿ ಸರ್ಕಾರ, ಸರ್ಕಾರೇತರ ಸಂಸ್ಥೆಗಳು, ವ್ಯಕ್ತಿಗಳು ಜಾನಪದದ ಬಗ್ಗೆ ಆಸಕ್ತಿ ತೋರಿದ್ದಾರೆ. ಜಾನಪದ ಅಂಶಗಳನ್ನು ಸಂಗ್ರಹಿಸಲು,ಪ್ರಕಟಿಸಲು ಅಕಾಡೆಮಿಗಳು, ವಿಶ್ವವಿದ್ಯಾನಿಲಯಗಳು, ಕರ್ನಾಟಕ ಸರ್ಕಾರ ಮುಂದೆ ಬಂದಿವೆ. ಮೈಸೂರು, ಕರ್ನಾಟಕ, ಮಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಪ್ರತ್ಯೇಕವಾಗಿ ಜಾನಪದ ವಿಭಾಗಗಳಿವೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ನಾಟಕ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಮತ್ತು ಸಂಸ್ಕೃತಿ ವಿಭಾಗ, ಶ್ರೀ ಎಚ್.ಎಲ್. ನಾಗೇ ಗೌಡರವರ ಕರ್ನಾಟಕ ಜಾನಪದ ಟ್ರಸ್ಟ್ ಜಾನಪದದ ಬಗ್ಗೆ ವಿಶೇಷವಾದ ಪಾತ್ರವನ್ನು ವಹಿಸುತ್ತಿವೆ. ಇವುಗಳು ಜಾನಪದ ವಿಷಯಗಳನ್ನು ಸಂಗ್ರಹಿಸಿ ಭದ್ರಪಡಿಸುವುದರೊಂದಿಗೆ, ವೃತ್ತಿಗಾಯಕರನ್ನು, ಕಲಾಕಾರರನ್ನು, ಸಂಶೋಧಕರನ್ನು, ವಿದ್ವಾಂಸರನ್ನು ಪ್ರೋತ್ಸಾಹಿಸುತ್ತಾ ಪ್ರತಿ ವರ್ಷವೂ ಅವಾರ್ಡುಗಳನ್ನು ಕೊಡುತ್ತಿವೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 'ಜಾನಪದ ಗಂಗೋತ್ರಿ' ಎಂಬ ಪತ್ರಿಕೆಯನ್ನು, ಕರ್ನಾಟಕ ಜಾನಪದ ಟ್ರಸ್ಟು 'ಜಾನಪದ ಜಗತ್ತು' ಎಂಬ ಪತ್ರಿಕೆಯನ್ನು ಜಾನಪದಕ್ಕಾಗಿ ಮೀಸಲಿಟ್ಟಿವೆ. ಅಂತೆಯೇ ಹಲವಾರು ಜಾನಪದ ಗ್ರಂಥಗಳನ್ನು ಪ್ರಕಟಿಸಿವೆ. ಜಾನಪದ ಗ್ರಂಥಗಳನ್ನು ಪ್ರಕಟಿಸಲು ಸರ್ಕಾರ, ಸರ್ಕಾರೇತರ ಸಂಸ್ಥೆಗಳು ಹಣ ಸಹಾಯ ಒದಗಿಸುತ್ತಿವೆ.

ಆಂಧ್ರದಲ್ಲಿ ಸರ್ಕಾರ, ಸರ್ಕಾರೇತರ ಸಂಸ್ಥೆಗಳು ಜಾನಪದ ಕ್ಷೇತ್ರಕ್ಕೆ ಪ್ರೋತ್ಸಾಹ ಕೊಡದೇಯಿರುವುದು ಶೋಚನೀಯವಾದ ಸಂಗತಿ. ಆದರೂ ತೆಲುಗು ವಿಶ್ವವಿದ್ಯಾನಿಲಯ ಗ್ರಂಥಪ್ರಕಟನೆಗಳಿಗೆ ಹಣ ಸಹಾಯ ಮಾಡುವುದನ್ನು ನೆನೆಯಬೇಕು.

'ಆಂಧ್ರ ಪ್ರದೇಶ ಜಾನಪದ ಸಾಹಿತ್ಯ ಪರಿಷತ್ತು' 1972ರಲ್ಲಿ ಹೈದರಾಬಾದ್‌ನಲ್ಲಿ ಸ್ಥಾಪಿಸಲ್ಪಟ್ಟಿತು. 'ಜಾನಪದ ವಿಜ್ಞಾನಭಾರತಿ' 1980ರಲ್ಲಿ ಮೈಸೂರಿನಲ್ಲಿ ಸ್ಥಾಪಿಸಲ್ಪಟ್ಟಿತು. 'ಜಾನಪದ ಸರಸ್ವತಿ' ಎಂಬ ಪತ್ರಿಕೆಯನ್ನು ಜಾನಪದ ಸಾಹಿತ್ಯ ಪರಿಷತ್ತಿನವರೂ, 'ಜಾನಪದ' ಎಂಬ ಪತ್ರಿಕೆಯನ್ನು ಜಾನಪದ ವಿಜ್ಞಾನ ಭಾರತಿಯವರೂ ಕೆಲವು ವರ್ಷಗಳು ಪ್ರಕಟಿಸಿದರು. ಆಂಧ್ರ ಸರ್ಕಾರದಿಂದ ಯಾವ ಆದರಣೆ, ಪ್ರೋತ್ಸಾಹವು ಸಿಗದೇ ಇರುವುದರಿಂದ ಇವು ತಮ್ಮ ಕಾರ್ಯ ಕಲಾಪಗಳನ್ನು ಸ್ಥಗಿತಗೊಳಿಸಿವೆ. ಇತ್ತೀಚಿಗೆ ನಾನು, ಡಾ|| ಆರ್.ವಿ.ಯಸ್. ಸುಂದರಂ ಕೆಲವರು ಮಿತ್ರರೊಂದಿಗೆ 'ಜಾನಪದ ಸಂಸ್ಕೃತಿ ಟ್ರಸ್ಟ್' ಅನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದ್ದೇವೆ (1997). ಇದು ನೋಂದಾಯಿಸಲ್ಪಟ್ಟಿದೆ. ಅಂತೆಯೇ ಮೈಸೂರ್‌ನಲ್ಲಿ

'ದೇಶಿ ಟ್ರಸ್ಟ್' (1998) ಸ್ಥಾಪಿಸಲ್ಪಟ್ಟಿದೆ. ಈ ಎರಡೂ ಟ್ರಸ್ಟ್‌ಗಳು ತೆಲುಗು ಕನ್ನಡ ಜಾನಪದಗಳ ಅಧ್ಯಯನದ ಬಗ್ಗೆ ಹಲವಾರು ಕಾರ್ಯಕ್ರಮಗಳನ್ನು ನಡೆಸುತ್ತಿವೆ. ಜಾನಪದಕ್ಕೆ ಸಂಬಂಧಿಸಿದಂತೆ 1973ರಲ್ಲಿ ಪ್ರಕಟವಾದ ಡಾ|| ಹಾ.ಮಾ. ನಾಯಕರ ಗ್ರಂಥಸೂಚಿ 500ಕ್ಕೂ ಹೆಚ್ಚು ಕನ್ನಡ ಜಾನಪದ ಕೃತಿಗಳನ್ನು ದಾಖಲು ಪಡಿಸಿದೆ. 'ತೆಲುಗು ಜಾನಪದ ವಿಜ್ಞಾನಸೂಚಿ' ಎಂಬ ಹೆಸರಿನಲ್ಲಿ 1981ರಲ್ಲಿ ನಾನು ಹಲವಾರು ತೆಲುಗು ಜಾನಪದ ಕೃತಿಗಳನ್ನು ದಾಖಲು ಪಡಿಸಿದ್ದೇನೆ. ಡಾ|| ಸುಂದರಂ ಅವರು 'ಆಂಧ್ರುಲ ಜಾನಪದುಲ ವಿಜ್ಞಾನಂ' ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಹಲವಾರು ತೆಲುಗು ಜಾನಪದ ಪ್ರಕಾರಗಳ ವಿವರಣೆ ಈ ಗ್ರಂಥದ ವೈಶಿಷ್ಟ್ಯ. ಇದು ಅವರಿಗೆ ಮೈಸೂರು ವಿಶ್ವವಿದ್ಯಾನಿಲಯದಿಂದ ಡಿ.ಲಿಟ್ ಪದವಿಯನ್ನು ತಂದುಕೊಟ್ಟಿದೆ. ತೆಲುಗು ಜಾನಪದ ಕ್ಷೇತ್ರ ಇನ್ನೂ ಬೆಳೆಯಬೇಕಾಗಿದೆ. ನನಗೆ ಸ್ಫೂರ್ತಿ ಮತ್ತು ಪ್ರೇರಣೆ ನೀಡಿದ ಕನ್ನಡ ಜಾನಪದ ಕ್ಷೇತ್ರಕ್ಕೆ ಚಿರಋಣಿಯಾಗಿದ್ದೇನೆ ; ಮತ್ತು ಹೆಮ್ಮೆ ಪಡುತ್ತಿದ್ದೇನೆ.

ಶಿವಮೊಗ್ಗ ಜಿಲ್ಲೆಯ ಪ್ರಾಚೀನ ಅವಶೇಷಗಳು

ಕೆಳದಿ ಗುಂಡಾಜೋಯಿಸ್

ಪುರಾಣ ಯುಗದಿಂದ ಕೆಳದಿ ಇತಿಹಾಸೋತ್ತರ ಸ್ವಾಂತಂತ್ರ್ಯಪೂರ್ವದ ಅಂತ್ಯದವರೆಗೆ ಜಿಲ್ಲೆಯ ಇತಿಹಾಸ ಕುರಿತಂತೆ ಪ್ರಾಚೀನ ಅವಶೇಷಗಳು ಶಿವಮೊಗ್ಗ ಜಿಲ್ಲೆಯಲ್ಲಿ ವಿಪುಲ ವಾಗಿವೆ. ಬೌದ್ಧರಿಂದ ಆರಂಭಗೊಂಡು ಕದಂಬ, ಗಂಗ, ಬಾದಾಮಿಯ ಚಾಲುಕ್ಯ, ಕಲಚೂರಿ, ಹೊಯ್ಸಳ - ಸೇವುಣ, ಸೇಂದ್ರಕ, ಸಾಂತಾರ, ಸೇನವ, ಸಿಂದರು, ನೊಳಂಬ, ಪಾಂಡ್ಯ, ಸೇತುನಾಡು, ವಿಜಯನಗರ, ಕೆಳದಿ, ಸಾಳುವ, ಬೆಳಗುತ್ತಿ, ಬಸವಾಪಟ್ಟಣ, ಬಿಜಾಪುರದ ಆದಿಲ್‌ಶಾಹಿ, ಹೊನ್ನಾಳಿ ನವಾಬರು, ಹೈದರಾಲಿ, ಟೀಪು, ಬ್ರಿಟಿಷರು, ಮೈಸೂರು ಮುಂತಾದ ರಾಜಪರಂಪರೆಗಳು ರಾಜ್ಯವಾಳಿ ಬಿಟ್ಟುಹೋದ ಅವಶೇಷಗಳು* ಅಧ್ಯಯನ ಶೀಲರಿಗೆ ಮೂಲ ಸಾಮಗ್ರಿಗಳನ್ನು ಒದಗಿಸುತ್ತಿವೆ. ಇನ್ನೊಂದೆಡೆ ಕೆಳದಿ ಇತಿಹಾಸೋತ್ತರ ಚರಿತ್ರೆಯಲ್ಲಿ ಬ್ರಿಟಿಷರ ವಿರುದ್ಧವಾಗಿ ಹೋರಾಡಿದ ಧೋಂಡೇವಾಘ್, ನಗರ ಖಾವಿಂದ ಬೂದಿ ಬಸಪ್ಪನಾಯಕ, ಈಸೂರು ಕ್ವಿಟ್ ಇಂಡಿಯಾ ಚಳುವಳಿ ಭೂಮಾಲೀಕರು, ರೈತರ ಕಾಗೋಡು ಸತ್ಯಾಗ್ರಹ ಮಹಾತ್ಮಾ ಗಾಂಧೀಜಿ ಸಾಗರದ ಭೇಟಿಯವರೆಗೆ ಜಿಲ್ಲೆಯು ಐತಿಹಾಸಿಕ ಪ್ರಾಮುಖ್ಯತೆ ಪಡೆದಿದೆ.

ಶಿವಮೊಗ್ಗ ಜಿಲ್ಲೆಯ ಪುರಾತನ ಅವಶೇಷಗಳನ್ನು ಈ ಕೆಳಕಂಡಂತೆ ವಿಭಾಗಿಸಬಹುದು.

೧ ಪುರಾಣಯುಗದ ಕ್ಷೇತ್ರಗಳು

೨ ಪ್ರಾಗೈತಿಹಾಸಿಕ ಸಂಸ್ಕೃತಿಗಳು
- (ಅ) ಉತ್ಖನನಗಳು
- (ಆ) ನಿವೇಶನಗಳು

೩. ಸ್ಮಾರಕಗಳು

ದೇವಾಲಯ, ಕೋಟೆ, ಮಠ, ಅಗ್ರಹಾರ, ಅರಮನೆ ಹಾಗೂ ಸೌಧಗಳು, ಮರಹಮ್ಮತ್ ಅವಶೇಷಗಳು.

೪. ಜಿಲ್ಲೆಯಲ್ಲಿರುವ ಪ್ರಾಚ್ಯ ವಸ್ತುಗಳು.

೫. ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದ ನೆರೆ ಪ್ರಾಂತದಲ್ಲಿರುವ ಪ್ರಾಚ್ಯ ವಸ್ತುಗಳು.

---

* ಅನುಬಂಧ (Appendix ನೋಡಿರಿ).

ಶಾಸನ, ಶಿಲ್ಪ, ಪುರಾತತ್ತ್ವ ವಸ್ತು, ಮರಗೆತ್ತನೆ, ನಾಣ್ಯ ಹಾಗೂ ವರ್ಣಚಿತ್ರಗಳು ಇತ್ಯಾದಿ.

೬. ಪ್ರಾಚೀನ ಹಸ್ತಪ್ರತಿಗಳು - ಜಾನಪದ ವಸ್ತುಗಳು, ಕಡತಗಳು, ಚಾರಿತ್ರಿಕ ದಾಖಿಲೆಗಳು, ತಾಳೆಯೋಲೆ ಹಾಗೂ ಕಾಗದದ ಹಸ್ತಪ್ರತಿಗಳು.

ಪುರಾಣಯುಗದ ಕ್ಷೇತ್ರಗಳು

ಪುರಾಣಯುಗದ ಕ್ಷೇತ್ರಗಳಲ್ಲಿ ಜಮದಗ್ನಿ, ಪರಶುರಾಮ, ದೂರ್ವಾಸ, ಹರದ , ಅಗಸ್ತ್ಯ, ವೇದವ್ಯಾಸ, ಮುಂತಾದ ರಾಮಾಯಣ - ಮಹಾಭಾರತದ ತಾಣಗಳು ಈ ಜಿಲ್ಲೆಯ), ಕಂಡು ಬರುತ್ತವೆ. ದಂಡಾವತಿಯ ಉಗಮಸ್ಥಾನ ಕುಪ್ಪೆ, ಮಾರೀಚ ಮೃಗವಧೆ, ಏಕಚ , ನಗರವೆಂದು ಹೇಳಲಾದ ಶಿಕಾರಿಪುರದ ಬಿಸ್ಲಹಳ್ಳಿ, ಕಾಮ್ಯಕವನದ ಕಾಲೇದುರ್ಗ, ಭೀಮನಕಟ್ಟೆ ಕ್ಷೇತ್ರಗಳು ರಾಮಾಯಣ ಮಹಾಭಾರತ ಕುರಿತು ಹೇಳುತ್ತವೆ. ಕುಂತಳನಗರವೆಂಬ ಕುಬಟೂರು ಚಂದ್ರಹಾಸನ ಕಥೆಯನ್ನು ಉದ್ಗರಿಸುತ್ತದೆ. ಲ್ಯೂಯಿ ರೈಸರ ಪ್ರಕಾರ ಕೂಡ್ಲಿಮಠದ 97ನೇ ಶಾಸನ, ರಾಮಾಯಣದ ಅಯೋಧ್ಯೆ[೧] ಶಿಕಾರಿಪುರ ತಾಲ್ಲೂಕಿನ 12, 86, 45[೨], ಸೊರಬ ತಾ. 83, ತೀರ್ಥಹಳ್ಳಿ ತಾ. 157ನೇ ಶಾಸನಗಳು ರಾಮಾಯಣ ಹಾಗೂ ಮಹಾಭಾರತ ಕಾಲದ ಜನಮೇಜಯನ ಸಂಗತಿಯನ್ನು ನಿರೂಪಿಸುತ್ತಿವೆ. ಶಿಕಾರಿಪುರದ ಬಳ್ಳಿಗಾವೆ ಮಹಾದಾನಿ ಬಲಿಚಕ್ರವರ್ತಿಗೆ ಸಂಬಂಧಿಸಿದೆ. ಇದಕ್ಕೆ "ದಕ್ಷಿಣ ಕೇದಾರ"ವೆಂಬ ಹೆಸರೂ ಇದೆ. ತೀರ್ಥಹಳ್ಳಿಯ ಬಸವಾನಿ ಭಾರದ್ವಾಜ ಋಷಿಗಳ ಆಶ್ರಮ, ಭದ್ರಾವತಿ ಮಂಕಿ ಋಷಿಗಳ ತಪೋಭೂಮಿ. ಚಂದ್ರಗುತ್ತಿ, ಗೌಜ, ಕುಂದ, ಮಂಡಗದ್ದೆ, ಕ್ರಮವಾಗಿ ಮಂಕಿ, ಜಮದಗ್ನಿ, ಗೌತಮ, ಮುಚುಕುಂದ ಮತ್ತು ಮಾಂಡವ್ಯ ಮಹರ್ಷಿಗಳು ತಪವನ್ನಾಚರಿಸಿದ ಕ್ಷೇತ್ರಗಳು. ಶಿವಮೊಗ್ಗದ ತುಂಗಾನದಿಯ ದಂಡೆಯ ಮೇಲೆ ದೂರ್ವಾಸ ಋಷಿಗಳ ಆಶ್ರಮವಿತ್ತಂತೆ.

ಪ್ರಾಗೈತಿಹಾಸಿಕ ಸಂಸ್ಕೃತಿಗಳು

ಹೊನ್ನಾಳಿ ತಾಲ್ಲೂಕಿನ ನ್ಯಾಮತಿಯ ಸಮೀಪ ತುಂಗಭದ್ರಾತೀರದಲ್ಲಿ 1881ರಂದು ರಾಬರ್ಟ್ ಬ್ರೂಸ್‌ಫುಟ್‌ರವರಿಂದ ಆದಿ ಶಿಲಾಯುಗದ ಅವಶೇಷಗಳು ಪರಿಶೋಧಿಸಲ್ಪಟ್ಟಿತು. ಎಂ.ಎಚ್. ಕೃಷ್ಣ ಕುಂಸಿಯಲ್ಲಿ ಇತಿಹಾಸ ಆರಂಭಕಾಲದ ನೆಲೆಯನ್ನು ಕಂಡುಹಿಡಿದರು.

---

೧. ಇದು ಭೂಮಿಯಲ್ಲಿ ಗೋಚರಿಸಿದ್ದೆಂದು ರೈಸರ ಅಭಿಪ್ರಾಯ.

೨. ಕೆಳದಿ ಸಂಶೋಧನಾಲಯದಲ್ಲಿ ಇದರ ಮೂಲ ಸಾಮಗ್ರಿಯಿದೆ.

1966ರಲ್ಲಿ ಡಾ|| ಸುಂದರರವರ ಸಂಶೋಧನೆಯಿಂದ ತುಂಗಾ ನದಿಯ ಗುಡ್ಡೆ ಮರಡಿಯಲ್ಲಿ 3000 ವರ್ಷದ ಬೃಹತ್ ಶಿಲಾಯುಗದ ಅವಶೇಷಗಳು ಕಂಡು ಬಂದುವು. ಹಳೇನಗರ, ಯಡಗುಡ್ಡೆ (ತೀರ್ಥಹಳ್ಳಿ ಹತ್ತಿರ), ಅರೇಹಳ್ಳಿ, ಬಂಡೀಗಣೆ, ಅಶೋಕನಗರ, ಆನವೇರಿ ಮತ್ತು ನಾಗಸಮುದ್ರ (ಭದ್ರಾವತಿ ತಾ.), ಹರೀಶಿ, ತಾಳಗುಂದ, ಮಳವಳ್ಳಿ, ಬಳ್ಳಿಗಾವೆ, ತೊರ್ಗರ್ಸಿಗಳಲ್ಲಿ ಇತಿಹಾಸ ಪ್ರಾರಂಭ ಕಾಲದ ನೆಲೆಗಳು ಶೋಧಗೊಂಡಿವೆ. 1965ರಲ್ಲಿ ಜರುಗಿದ ಹಳ್ಳೂರು ಉತ್ಖನನದಲ್ಲಿ ಕ್ರಿ.ಪೂ. 1800-1500 ಮತ್ತು 1500-1100 ಹಾಗೂ ಕಬ್ಬಿಣಯುಗ ಸಂಸ್ಕೃತಿಯ ಪಳೆಯುಳಿಕೆಗಳು ಇಂಗಾಲ ೧೪ ಎಂಬ ವೈಜ್ಞಾನಿಕ ವಿಧಾನದಲ್ಲಿ ಗೋಚರಿಸಿವೆ. ಈಚೆಗೆ ಶಿವಮೊಗ್ಗ ಸಮೀಪ ಹೊಳಲೂರಿನಲ್ಲಿ ಸು. 3000 ವರ್ಷಕ್ಕೂ ಹಿಂದಿನ ಪುರಾತನ ಶಿಲಾಲೇಖಗಳು ಪತ್ತೆಯಾಗಿದ್ದು ಹರಪ್ಪ - ಮೊಹೆಂಜೋದಾರೋದೊಂದಿಗೆ ಹೋಲಿಕೆ ಕಂಡುಬರುವುದಾಗಿ ಡಾ|| ಸುಂದರ ತಿಳಿಸಿದ್ದಾರೆ. ಪ್ರಾಕೃತ ಭಾಷೆ ಹಾಗೂ ಬ್ರಾಹ್ಮೀ ಲಿಪಿಯನ್ನೊಳಗೊಂಡ ಮಳವಳ್ಳಿ ಸ್ತಂಭ ಈ ಜಿಲ್ಲೆಯ ಪ್ರಾಚೀನ ಅವಶೇಷಗಳಲ್ಲೊಂದು. ಬಿ.ಎಲ್. ರೈಸ್‌ರವರು ಈ ಜಿಲ್ಲೆಯ ಮೂಲೆ ಮೂಲೆಗೂ ಸಂಚರಿಸಿ ಸುಮಾರು ೨೦೦೦ ಪುರಾತನ ಶಾಸನಗಳನ್ನು ಶೋಧಿಸಿ ಪ್ರಕಟಿಸಿದರು. ಶ್ರೀಲಂಕಾದ್ವೀಪದ ಪ್ರಾಚೀನ ಸಾಹಿತ್ಯದಲ್ಲಿ (ಸು. ಕ್ರಿ.ಶ. 5ನೇ ಶತಮಾನ) ಮಹಾವಂಶವೆಂಬ ಪಾಳೀ ಗ್ರಂಥದಲ್ಲಿ ಅಶೋಕನು ಬೌದ್ಧ ಧರ್ಮದ ಪ್ರಚಾರಕ್ಕೆ ರಕ್ಷಿತನೆಂಬ ಬೌದ್ಧ ಭಿಕ್ಷುವನ್ನು ಬನವಾಸಿಗೆ ಕಳುಹಿಸಿದನೆಂದು ಹೇಳಿದೆ. ಬಳ್ಳಿಗಾವೆಯಲ್ಲಿ ಜಯಂತಿ ವಿಹಾರವಿತ್ತು. ಅದೃಷ್ಟವಶಾತ್ ರಾಜ್ಯದಲ್ಲಿಯೇ ಮೊಟ್ಟ ಮೊದಲನೆಯದಾದ 'ತಾರಾಭಗವತಿ' ಶಿಲ್ಪವೊಂದು ಇಲ್ಲಿಯ ವಸ್ತು ಸಂಗ್ರಹಾಲಯದಲ್ಲಿದೆ.

ದೇಶದಲ್ಲಿಯೇ ಅಪೂರ್ವವಾದ ಕದಂಬರ ಮೂಲವನ್ನು ತಿಳಿಸುವ ಕ್ರಿ.ಶ. ೫ನೆಯ ಶತಮಾನದ ಶಾಸನ ತಾಳಗುಂದದಲ್ಲಿದೆ(SK 176). ಕ್ರಿಸ್ತಾಬ್ದ ೪೫೦ಕ್ಕೂ ಹಿಂದಿನ ಪ್ರಣವೇಶ್ವರ ದೇವಾಲಯ ಹಾಗೂ ಕಾಕುತ್ಥ್ಸವರ್ಮ ನಿರ್ಮಿತ ಕೆರೆ ಈಗಲೂ ಇದೆ.* ಇದು ಕರ್ನಾಟಕ ವಾಸ್ತುಶಿಲ್ಪಕ್ಕೆ ಬುನಾದಿ. ಕರ್ನಾಟಕದಲ್ಲಿ ಸುವರ್ಣನಾಣ್ಯ ಟಂಕಿಸಿ ಮೊದಲಬಾರಿ ಜಾರಿಗೆ ತಂದವರು ಕದಂಬರು. ಮುಕ್ಕಣ್ಣ ಕದಂಬರ "ಸ್ಥಾನಕುಂದೂರು" ಅಗ್ರಹಾರ ಪ್ರಮುಖವಾದುದು (SK 186). ಶಿಕಾರಿಪುರ ತಾಲ್ಲೂಕು ಮಲ್ಲೇನ ಹಳ್ಳಿಯ ಶಿವಾಲಿ ಹಕ್ಕಲಿನಲ್ಲಿ

---

* ಈ ಸಂಬಂಧದ ಮೂಲ ಶಾಸನ ಧಾರವಾಡದಲ್ಲಿರುವುದಾಗಿ ಪ್ರೊ. ಜಿ.ಎಸ್. ದೀಕ್ಷಿತರು ತಿಳಿಸಿದ್ದಾರೆ. ಪ್ರಾಚೀನ ಅವಶೇಷಗಳಾದ ಇಂತಹ ಕೆರೆಗಳ ಜೀರ್ಣೋದ್ಧಾರವು ವ್ಯವಸಾಯಕ್ಕೆ ಹಾಗೂ ಮುಂದಿನ ಪೀಳಿಗೆಯ ಇತಿಹಾಸ ಅಧ್ಯಯನಕ್ಕೆ ಹೇಗೆ ಪೂರಕವಾಗುವುದೆಂಬುದನ್ನು "Tank Irrigation in Karnataka, A Historical Survey" ಕೃತಿಯಲ್ಲಿ ಪ್ರೊ. ದೀಕ್ಷಿತ್, ಶ್ರೀ ಜಿ.ಆರ್. ಕುಪ್ಪುಸ್ವಾಮಿ ಹಾಗೂ ಶ್ರೀ ಎಸ್.ಕೆ. ಮೋಹನ್‌ರವರು ಪ್ರತಿಪಾದಿಸಿರುವುದನ್ನು ಅವಲೋಕಿಸಬಹುದು.

ಶಾಸನ ಲಿಪಿಗಳನ್ನೊಳಗೊಂಡ ಮೂವತ್ತು ಗೋಸಾಸನಗಳ ಸಮುದಾಯ ರಕ್ಷಣಾಯೋಗ್ಯ ಅವಶೇಷ ಗಳು. ಇವುಗಳು ಬಾದಾಮಿ ಚಾಲುಕ್ಯ ಚಕ್ರವರ್ತಿ ಇಮ್ಮಡಿ ಕೀರ್ತಿವರ್ಮನ ಕಾಲದ್ದು. ವೈದಿಕ-ಜೈನ ಸಂಸ್ಕೃತಿಗೆ ಸಮ್ಮಿಳಿತವಾಗಿರುವ ಈ ಅವಶೇಷಗಳು ಗಮನಾರ್ಹ ವಾಗಿವೆ.[೧] ಕ್ರಿ.ಶ. ೨ನೇ ಶತಮಾನದಲ್ಲಿ ಪೊಟ್ಟಿ ಪೊಂಬುಚ್ಚಪುರ(ಹುಂಚ)ದಲ್ಲಿ ಶಾಂತ ರಸರೆಂಬ ರಾಜವಂಶದವರು ಕಾಣಸಿಕೊಳ್ಳುತ್ತಾರೆ. ನಗರ, ತೀರ್ಥಹಳ್ಳಿ, ಸಾಗರಗಳ 1077, 1103 ಮತ್ತು 1159ರ ಶಾಸನಗಳಲ್ಲಿ ಇವರ ವಂಶಾವಳಿಯ ಉಲ್ಲೇಖಗಳಿವೆ. ಈ ಕುಲದ ವರಾಹನು ಆಗ್ರಾದ ಸಮೀಪ ಮಥುರೆಯನ್ನು ಆಳುತ್ತಿದ್ದು ಕುರುಕ್ಷೇತ್ರದಲ್ಲಿ ಜರುಗಿದ ಮಹಾ ಭಾರತ ಯುದ್ಧದಲ್ಲಿ ಭಾಗವಹಿಸಿದ್ದನಂತೆ. ೨ನೇ ಶತಮಾನದ ಜಿನದತ್ತನು ದಕ್ಷಿಣಕ್ಕೆ ಬಂದು ಪೊಂಬುಚ್ಚದಲ್ಲಿ ನೆಲೆಸಿ ಅದನ್ನು ತನ್ನ ರಾಜಧಾನಿಯನ್ನಾಗಿಸಿಕೊಂಡನು.[೨] ಬರುವಾಗ ತನ್ನ ಆರಾಧ್ಯದೇವಿ ಶ್ರೀ ಪದ್ಮಾವತಿಯನ್ನು ತಂದು ಇಲ್ಲಿಯೇ ಸ್ಥಾಪಿಸಿದನು. ಇವನು ತನ್ನ ಮನೆತನಕ್ಕೆ ಸಾಂತರವೆಂದು ಹೆಸರಿಟ್ಟು ಸಿಂಹ ಮತ್ತು ಹನುಮಂತನನ್ನು ರಾಜಲಾಂಛನ ವಾಗಿರಿಸಿಕೊಂಡನು. ಚಾಲುಕ್ಯ ಶೈಲಿಯ ಅವಶೇಷಗಳು ಬಳ್ಳಿಗಾವೆ, ಬಂದಲಿಕೆ ಮತ್ತು ದೇವಸ್ಥಾನದ ಹಕ್ಕಲು (ಕುಬಟೂರು)ಗಳಲ್ಲಿವೆ, ಹೊಯ್ಸಳೇಶ್ವರ ಶಿಖರವೊಂದು ಕೇದಾರೇಶ್ವರ ದೇವಾಲಯದಲ್ಲಿದ್ದು ರೈಸರ ಅಭಿಪ್ರಾಯದಂತೆ ಹಳೇಬೀಡಿನ ದೇವಾಲಯ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸಿದೆ. ನಳಂದ ತಕ್ಷಶಿಲೆಯಂತೆ ತಾಳಗುಂದದಲ್ಲಿಯೂ ಪ್ರಾಚೀನ ವಿಶ್ವವಿದ್ಯಾಲಯಗಳಿದ್ದುದು ಗಮನಾರ್ಹವಾದುದು. ಭರತನ ನಾಟ್ಯಶಾಸ್ತ್ರ ಕೃತಿಯ ಓಲೆಗರಿ ಹಸ್ತಪ್ರತಿಯೊಂದು ನನಗೆ ಈ ಪ್ರಾಂತಗಳಿಂದಲೇ ಲಭಿಸಿದೆ.[೩]

ಸ್ಮಾರಕಗಳು

ಬಂದಲಿಕೆಯ ಸೋಮೇಶ್ವರ ದೇವಾಲಯ, ತ್ರಿಮೂರ್ತಿ, ಸಿಂಹ ಲಲಾಟ, ಆನ ವಟ್ಟಿಯ ಕೈಟಭೇಶ್ವರ ದೇವಾಲಯಗಳ ಕಲಾರಚನೆಗಳು ಚಾಲುಕ್ಯ-ಹೊಯ್ಸಳ ಶೈಲಿಯ ಸಂಕ್ರ ಮಣವನ್ನು ಸೂಚಿಸುತ್ತವೆ. ಹುಂಚದ ಜೈನ ಮಂದಿರಗಳು ವಿಶೇಷವಾಗಿ 'ಉರ್ವಿತಿಲಕಂ'ನ ಪಂಚಬಸದಿ ಅಪೂರ್ವ ಶಿಲ್ಪಗಳು, ಚಾಲುಕ್ಯದಿಂದ ಹೊಯ್ಸಳದೆಡೆಗೆ ಪಯಣಿಸುವ

---

೧. ನಾಗರಖಂಡ ೭೦ ಒಂದು ಅಧ್ಯಯನ -ಪಿ. ಎಚ್. ಡಿ . ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ (ನೋಡಿ).

೨. ಕೆಳದಿ ಸಂಶೋಧನಾಲಯದಲ್ಲಿ 'ಜಿನದತ್ತರಾಯನ ಚರಿತೆ'ಯ ಓಲೆಗರಿ ಹಸ್ತ ಪ್ರತಿಯೊಂದಿದೆ.

೩. ಕರ್ನಾಟಕ ಕಲಾತಿಲಕ, ಬೆಂಗಳೂರು ಕೆ. ವೆಂಕಟರಾಮ್ ಅಭಿನಂದನಾ ಗ್ರಂಥದ ನನ್ನ ಲೇಖನ ನೋಡಿರಿ, (ಭರತಶಾಸ್ತ್ರ ಸಂಗ್ರಹದಲ್ಲಿ ತಾಳೋತ್ಪತ್ತಿ ಓಲೆಗರಿ ಹಸ್ತಪ್ರತಿ).

ವಿಷ್ಣುವರ್ಧನನ ಕಲಾಚತುರತೆಯನ್ನು ಬಳ್ಳಿಗಾವೆಯ ದಾಸೋಜದಂತೆ ಬೇಲೂರಿನಲ್ಲಿ ಕಾಣಬಹುದು.

ಅಪೂರ್ವ ಸಂಶೋಧನೆಯಲ್ಲಿ ಗೋಚರಿಸುವ ನಾಡಕಲರೆ, ಹೊಸಗುಂದ ಸ್ಮಾರಕಗಳು ಈಚೆಗೆ ಅಧ್ಯಯನ ಶೀಲರ ಗಮನ ಸೆಳೆಯುತ್ತಿವೆ.

ತಾಳಗುಂದದಲ್ಲಿರುವ ಇತಿಹಾಸ ಆರಂಭ ಕಾಲದ ಪ್ರಣವೇಶ್ವರ ದೇವಾಲಯ, ನಂದ ಹಾಗೂ ಮೌರ್ಯರ ಕಾಲಕ್ಕೆ ಕುಂತಳ ದೇಶವು ಆಡಳಿತಕ್ಕೊಳಪಟ್ಟ, ಅಂಶವನ್ನೊಳಗೊಂಡ ೧೨ನೆಯ ಶತಮಾನದ ಹೊಯ್ಸಳರ ಶಾಸನಗಳು (Sk225)[೧] ಪ್ರಮುಖ ಅವಶೇಷಗಳು. ಅಲಹಾಬಾದಿನ ಸಮುದ್ರಗುಪ್ತನ ಶಾಸನದಲ್ಲಿ ಸೊರಬದ ಉಟ್ಟೂರು ಕುರಿತು ಪ್ರಸ್ತಾಪವಿದ್ದು ಗುಪ್ತರಾಜನು ಕಾಕುತ್ಸ್ಥವರ್ಮನ ಕುಮಾರಿಯನ್ನು ವಿವಾಹವಾಗಿದ್ದ ವಿವರವಿದೆ. ಕುಬಟೂರಿನ ಶಾಸನವೊಂದರಲ್ಲಿ ನಾಗರಖಂಡ ಚಂದ್ರಗುಪ್ತನಿಂದ ರಕ್ಷಿಸಲ್ಪಟ್ಟ ಸಂಗತಿಯಿದೆ. ಲೇಖನ ವಿಸ್ತಾರ ಭಯದಿಂದ ಪ್ರಸ್ತುತ ಸಂಕ್ಷಿಪ್ತವಾಗಿ ಈ ಜಿಲ್ಲೆಯ ಪ್ರಾಚೀನ ಅವಶೇಷಗಳನ್ನು ಮಾತ್ರ ಪರಿಚಯಿಸಲಾಗಿದೆ.

ಶಾಸನ ಅವಶೇಷಗಳು

ಶಾತವಾಹನರ ನಾಣ್ಯಗಳು ನೆರೆ ಜಿಲ್ಲೆಗಳಾದ ಉತ್ತರ ಕನ್ನಡ ಮತ್ತು ಚಿತ್ರದುರ್ಗಗಳಲ್ಲಿ ಲಭಿಸಿವೆ.[೨] ಬಳ್ಳಾರಿ ಜಿಲ್ಲೆಯ ಹಿರೇಹಡಗಲಿ ಶಾಸನವೊಂದು ಕದಂಬರ ಮಯೂರಶರ್ಮನು ಪಲ್ಲವರನ್ನು ಸೋಲಿಸಿದ ಕುರಿತು ಪ್ರಸ್ತಾಪಿಸಿದೆ. ಅಹಚ್ಛತ್ರ ಮಾಹಿತಿಯನ್ನೊಳಗೊಂಡ ಓಲೆಗರಿ ಹಸ್ತಪ್ರತಿಯೊಂದು ತಿಗಳಾರಿ ಲಿಪಿಯಲ್ಲಿ ಕೆಳದಿ ವಸ್ತು ಸಂಗ್ರಹಾಲಯದಲ್ಲಿ ಲಭಿಸಿದೆ.[೩] ಸೊರಬ ೨೬೨ ನೇ ಶಾಸನದಲ್ಲಿ ಕ್ರಿ. ಶ. 1258-1307 ರಂದು ಹಾನಗಲ್ಲು ಮತ್ತು ಗೋವಾ ಪ್ರಾಂತದಲ್ಲಿ ಕದಂಬರು ಇಲ್ಲಿಂದಲೇ ಆಳಿದ ಉಲ್ಲೇಖಗಳಿವೆ. ರೈಸ್‌ರ ಪ್ರಕಾರ ಕ್ರಿ. ಶ. 357 ರಲ್ಲಿ ಗಂಗರ ತಡಂಗಾಲ ಮಾಧವನ ಮೊಟ್ಟ ಮೊದಲ ಶಾಸನವೊಂದು ಈ ಜಿಲ್ಲೆಯಲ್ಲಿ ಗುರುತಿಸಲ್ಪಟ್ಟಿದೆ. ಹಲವು ಗಂಗರ ಶಾಸನಗಳು ಗಂಗವಾಡಿಯ ಮೂಲ

---

೧ ಹೋಯ್ಸಳರ ಶಾಸನ ಹಾಗೂ ಅವಶೇಷಸೂಚಿ ಬಗ್ಗೆ ಅಪೆಂಡಿಕ್ಸ್ ನೋಡಿರಿ,

೨ ಶಾತವಾಹನ ಕಾಲದ ನಾಣ್ಯವೊಂದನ್ನು ಕನ್ನಡ ವಿಶ್ವವಿದ್ಯಾಲಯದ ಶ್ರೀ ಲಕ್ಷ್ಮಣ ತೆಲಗಾವಿ ಕೆಳದಿ ಮ್ಯೂಜಿಯಂಗೆ ನೀಡಿದ್ದಾರೆ.

೩ "ಹವ್ಯಕ"ಸುವರ್ಣಮಹೋತ್ಸವ ಸ್ಮರಣ ಸಂಚಿಕೆಯಲ್ಲಿರುವ ನನ್ನ ಲೇಖನ ನೋಡಿರಿ,

ಹಾಗೂ ಉತ್ತರ ಭಾರತದ ಭಾಗಗಳು ಜೈನ ಆಚಾರ್ಯ ಸಿಂಹನಂದಿಯಿಂದ ಪ್ರಭಾವಿತವಾದುದು ವ್ಯಕ್ತಪಡುತ್ತದೆ.[೧] 1162ರಲ್ಲಿ ಆಳಿದ ಕಲಚೂರಿ ಮನೆತನದಲ್ಲಿ ಬಳ್ಳಿಗಾವೆ ಕೋಡಿ ಮಠದ ರಾಜಗುರು ವಾಮಶಕ್ತಿಯ ಪ್ರಭಾವ ಕಂಡುಬಂದಿದೆ. ಇಲ್ಲಿರುವ ದಕ್ಷಿಣ ಕೇದಾರೇಶ್ವರ ದೇವಾಲಯ ಕಾಳಾಮುಖ ಪಂಥದ ಪ್ರಮುಖ ಕೇಂದ್ರವಾಗಿತ್ತು.[೨] ಇವರ ಸಾಮಾಜಿಕ ಕಾರ್ಯವು ಯೂರೋಪಿನಲ್ಲಿ ಆ ಕಾಲದಲ್ಲಿಯೇ ಪ್ರಭಾವ ಬೀರಿತು. ಬೆಂಗಳೂರು ವಸ್ತು ಸಂಗ್ರಹಾಲಯದಲ್ಲಿರುವ ಚಾಲುಕ್ಯರ ಕಾಲದ ಎರಡು ದ್ವಾರಪಾಲಕರ ಸುಂದರ ಶಿಲ್ಪಗಳು ಇಲ್ಲಿಂದಲೇ ಕೊಂಡೊಯ್ದದ್ದು. ಬಳ್ಳಿಗಾವೆ ಈಗ ಒಂದು ಚಿಕ್ಕಗ್ರಾಮವಾಗಿದೆ. ಷಿಕಾರಿಪುರದ 151ನೇ ಶಾಸನದ ಮೇರೆಗೆ 1047ರಲ್ಲಿ ಚಾವುಂಡರಾಯನು ಇಲ್ಲಿನ ಭೇರುಂಡೇಶ್ವರ ವಾಸ್ತು ಪ್ರಮಾಣವನ್ನು ತನ್ನ ಯೋಜನೆಗೆ ಅಳವಡಿಸಿರುವುದು ವ್ಯಕ್ತಪಡುತ್ತದೆ. 12-13ನೇ ಶತಮಾನದಲ್ಲಿ ವೀರಶೈವ ಸಿದ್ಧಾಂತದ ಬಸವೇಶ್ವರ, ಬಿಜ್ಜಳ, ಪ್ರಭುದೇವ, ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾದ ಧರ್ಮಸುಧಾರಕರ ಅವಶೇಷಗಳನ್ನು ಈ ಜಿಲ್ಲೆಯು ಹೊಂದಿದೆ.[೩] 1291-1342ರಲ್ಲಿ ಹೊಯ್ಸಳ ಮೂರನೆಯ ಬಲ್ಲಾಳ ಹಾಗೂ ದೆಹಲಿಯ ಮಲ್ಲಿಕ್‌ಕಾಫೂರನ ಸಂಗತಿಯನ್ನು ಶಿವಮೊಗ್ಗದ 68ನೇ ಶಾಸನ ಉಲ್ಲೇಖಿಸಿದೆ. ಮಲ್ಲಿಕ್‌ಕಾಫೂರನು ಈತನ ಮಗನನ್ನು ಗೌರವ ಅತಿಥಿಯಾಗಿ ಆಹ್ವಾನಿಸಿದುದೂ ವ್ಯಕ್ತಪಡುತ್ತದೆ. ಹೊಯಿಸಳ ದೊರೆ ವಿಷ್ಣುವರ್ಧನನ ಪಟ್ಟಮಹಿಷಿ ನಾಟ್ಯ ಸರಸ್ವತಿ ಶಾಂತಲೆಯ ತೌರೂರು ಬಲಿಪುರ (ಬಳ್ಳಿಗಾವೆ). ಶಿಕಾರಿಪುರದ 281ನೇ ಶಾಸನ ವಿಜಯನಗರದ ಮಾಧವ ಮಂತ್ರಿ ಅಗ್ರಹಾರ ನಿರ್ಮಿಸಿದ ಕುರಿತು ಆಸಕ್ತಿಯುಂಟು ಮಾಡುತ್ತದೆ. ವಿಜಯನಗರದ ೨ನೇ ಹರಿಹರನ ಅಂತ್ಯವನ್ನು ಸೂಚಿಸುವ (ದಿ. 31-8-1404) ತೀರ್ಥಹಳ್ಳಿ 59ನೇ ಶಾಸನ ಚಾರಿತ್ರ ಮಹತ್ವವುಳ್ಳುದು. ಗಜಶಾಸ್ತ್ರ ಕೃತಿಕಾರ ಶ್ರೀ ಪುರುಷನ ಶಾಸನ ಶಿವಮೊಗ್ಗದಲ್ಲಿದೆ (Sh 64 & 4). 1417 ರಲ್ಲಿ ಚಂದ್ರಗುತ್ತಿಯನ್ನು ಗೋವೆಯೊಂದಿಗೆ ಆಳಿದುದು, ಬಣಿಕ್ಕಪುರ (ವಂಕಿಪುರಿ) > ಬೆಂಕಿಪುರ > ಭದ್ರಾವತಿ ವಿಜಯ ನಗರದ ಕೊಡುಗೆಗಳು. ೧೫೧೦ ರಲ್ಲಿ ಕೃಷ್ಣದೇವರಾಯನು ಗುರು ಮಾಧವಾರಾಧ್ಯನಿಗೆ ಭಂಡಾರಿಪಲ್ಲಿ ಗ್ರಾಮ ನೀಡಿದ ಉಲ್ಲೇಖವಿದೆ. ಪುರಂದರದಾಸರು ಸಾಗರ ತಾಲ್ಲೂಕಿನ ವರದಾಮೂಲದವರೆಂಬ ವಾದವೊಂದಿದೆ.[೪]

---

೧. ಪ್ರಾಚ್ಯವಸ್ತು ಸಂಗ್ರಹಾಲಯದ ನಿರ್ದೇಶಕ ಡಾ. ದೇವರಾಜ್ ತಲಕಾಡಿನಲ್ಲಿ ಈಚೆಗೆ ಕೈಗೊಂಡ ಉತ್ಖನನದಲ್ಲಿ ಹಲವಷ್ಟು ಬೆಳಕು ಕಂಡಿವೆ.

೨. ಕಾಳಾಮುಖ ಶಿಲ್ಪಗಳು ಕೆಳದಿ ವಸ್ತುಸಂಗ್ರಹಾಲಯದಲ್ಲಿವೆ.

೩. ಬಿಜ್ಜಳ ವಧಾಕಥನ ಕುರಿತ ಓಲೆಗರಿ ಹಸ್ತಪ್ರತಿಯೊಂದು ಕೆಳದಿ ವಸ್ತು ಸಂಗ್ರಹಾಲಯದಲ್ಲಿದೆ (ಕೆಳದಿ ಮ್ಯೂಜಿಯಂ ಹಸ್ತಪ್ರತಿಸೂಚಿ. ಪು.75).

೪. ಖ್ಯಾತ ವಿದ್ವಾಂಸ ಶ್ರೀ ಆದ್ಯರಾಮಾಚಾರ್ಯರು ಈ ವಾದವನ್ನು ಮಂಡಿಸಿದ್ದಾರೆ. ಕೆಳದಿ ಮ್ಯೂಜಿಯಂನಲ್ಲಿ ಪುರಂದರದಾಸರ ಓಲೆಗರಿ ಹಸ್ತಪ್ರತಿಯಿದೆ.

ಕೆಳದಿ ಐತಿಹಾಸಿಕ ಅವಶೇಷಗಳು

ವಿಜಯನಗರೋತ್ತರ ಚರಿತ್ರೆಯಲ್ಲಿ ಕೆಳದಿ ಅರಸರ ಆಡಳಿತಕ್ಕೊಳಪಟ್ಟ ಇಡೀ ಜಿಲ್ಲೆಯು ಈ ಆಳರಸರ ಪ್ರಾಚೀನ ಅವಶೇಷಗಳನ್ನು ವಿಪುಲವಾಗಿ ಹೊಂದಿದೆ. ಕ್ರಿ.ಶ. 1499 ರಿಂದ 1763ರವರೆಗಿನ ಮೂಲ ಸಂಸ್ಥಾನ ಕೆಳದಿಯಿಂದ ಆರಂಭಿಸಿ ಇಕ್ಕೇರಿ, ಬಿದನೂರು (ನಗರ) ಹಾಗೂ ಕಾಲೇದುರ್ಗದವರೆಗೆ ಇರುವ ಸ್ಮಾರಕ ಹಾಗೂ ಅವಶೇಷಗಳು ಸ್ವಾಭಾವಿಕ ವಾಗಿಯೇ ಕೆಳದಿ ನೈಸರ್ಗಿಕ ವಸ್ತುಸಂಗ್ರಹಾಲಯದೋಪಾದಿಯಲ್ಲಿ ಸಂಪತ್ತಿನ ಗಣಿಗಳಾಗಿ ಈ ಜಿಲ್ಲೆಯಾದ್ಯಂತ ಹರಡಿವೆ. ಕೆಳದಿ ನಾಯಕರ ಕುರಿತು ಸಾರಿ ಹೇಳುವಂತೆ ಪಳೆಯುಳಿಕೆಗಳು[೧], ಕಲಾದೇಗುಲಗಳು, ಕೋಟೆಗಳು, ಕೆರೆಗಳು, ಸೇತುವೆ, ಸಾಲುಮರ, ಅರಮನೆ, ಕಟ್ಟಡ, ಮರಗೆತ್ತನೆಗಳು[೨], ಶಾಸನಗಳು, ಪ್ರಾಚ್ಯವಸ್ತುಗಳು, ಹಸ್ತಪ್ರತಿಗಳು, ಜಾನಪದಗಳು, ದೇಶವಿದೇಶಗಳಲ್ಲಿ ಚದುರಿ ಹೋಗಿದ್ದು ಇತಿಹಾಸ ವಿದ್ವಾಂಸರ ಗಮನ ಸೆಳೆಯುತ್ತಿವೆ. ಆನಂದಪುರ, ಚಂಪಕಸರಸ್ಸು, ಹಳೇನಗರದ ದೇವಗಂಗೆ, ಅಮೃತಸರದಲ್ಲಿರುವ ಸಿಕ್ಕರ ಸುವರ್ಣ ಮಂದಿರದಂತೆ ಕಂಗೊಳಿಸಿದೆ. ಇದರ ರಕ್ಷಣೆ ಅಗತ್ಯ. ಮುಂದುವರಿದ ಅಮೇರಿಕಾ, ಜಪಾನ್ ಮುಂತಾದ ದೇಶಗಳಲ್ಲಿ ಇವುಗಳು ಕಂಗೊಳಿಸಿದ್ದಲ್ಲಿ ಇತಿಹಾಸವೇ ಕಣ್ಣಿಗೆ ಕಟ್ಟುವಂತೆ ಇಂತಹ ಸಾಂಸ್ಕೃತಿಕ ಪರಂಪರೆಗಳನ್ನು ಅವರು ರಕ್ಷಿಸಿ ಅಭಿವೃದ್ಧಿಪಡಿಸುತ್ತಿದ್ದರು. ಇದು ನಮ್ಮ ದುರಾದೃಷ್ಟ ! ವಿಜಯನಗರ (ಹಂಪೆ) ಪ್ರತಿಷ್ಠಾನದಂತೆ ಕೆಳದಿ ಸಂಸ್ಥಾನದ ಇತಿಹಾಸದ ಅವಶೇಷಗಳನ್ನು ಮುಂದಿನ ಪೀಳಿಗೆಗೆ ರಕ್ಷಿಸಿ ಕಾಪಾಡಲು ಕೆಳದಿ ರಾಜಧಾನಿಯಲ್ಲಿ ಸಂಶೋಧನ ಪ್ರತಿಷ್ಠಾನ ಸ್ಥಾಪಿಸಿದಲ್ಲಿ, ಅಧ್ಯಯನ ಶೀಲರಾದಿಯಾಗಿ ದೇಶವಿದೇಶಗಳ ಪ್ರವಾಸಿಗಳಿಗೆ ಹಾಗೂ ರಾಷ್ಟ್ರೀಯ ಏಕತಾ ಧಾರ್ಮಿಕ ನೀತಿಗೆ ಈ ಜಿಲ್ಲೆ ವಿವಿಧ ರೀತಿಯಲ್ಲಿ ಕೊಡುಗೆ ನೀಡಬಲ್ಲುದು. ಕೆಳದಿ ಇತಿಹಾಸದ ಬಹಳಷ್ಟು ಅವಶೇಷಗಳು ಜಲಾವೃತವಾಗಿವೆ. ವೈವಿಧ್ಯಮಯ ಆಕರಗಳು ಬೆನಾರಸ್, ಬೊಂಬಾಯಿ, ಮದರಾಸ್, ಪೂನಾ, ಕಲ್ಕತ್ತಾ ಹಾಗೂ

---

೧ ಬಹಳಷ್ಟು ಅವಶೇಷಗಳು ಶರಾವತಿ ಹಾಗೂ ವಾರಾಹಿ ಯೋಜನೆ ಅಂಗವಾಗಿ ಜಲಾವೃತ ವಾಗಿದ್ದು ಅಳಿದುಳಿದ ಅವಶೇಷಗಳ ಪಟ್ಟಿಯೊಂದನ್ನು ಮದರಾಸಿನ ಪುರಾತತ್ವ ನಿರ್ದೇಶಕ ಡಾ|| ನರಸಿಂಹಯ್ಯ ಹಾಗೂ ಕರ್ನಾಟಕ ಪುರಾತತ್ವ ನಿರ್ದೇಶಕ ಡಾ|| ದೇವರಾಜ್ ಸಿದ್ಧಪಡಿಸಿ ಸರಕಾರಕ್ಕೆ ವರದಿ ಸಲ್ಲಿಸಿದ್ದಾರೆ. ಇವುಗಳ ಪ್ರಕಟಣೆ ಅಗತ್ಯ.

೨ ಸಾಗರ ಸೊರಬ ಗುಡಿಗಾರರ ಕೆತ್ತನೆಗಳಿಗೆ (ಕಲಾಕೃತಿಗಳಿಗೆ) ಕೆಳದಿ ಅರಸರೇ ಪ್ರೋತ್ಸಾಹ ನೀಡಿದರೆಂಬುದನ್ನು ಈಗಲೂ ಇರುವ ಮರಗೆತ್ತನೆಗಳು ಸಾಕ್ಷೀಭೂತವಾಗಿವೆ ಎಂಬುದಾಗಿ ಡಚ್‌ನ ವಿದ್ವಾಂಸರೊಬ್ಬರು ತಮ್ಮ ಮಹಾ ಪ್ರಬಂಧದಲ್ಲಿ ನಿರೂಪಿಸಿದ್ದಾರೆ.

ಲಂಡನ್, ಹಾಲೆಂಡ್ (ನೆದರ್‌ಲ್ಯಾಂಡ್ಸ್), ಸ್ಪೆಯಿನ್, ಪೋರ್ಚುಗಲ್, ಇಟಲಿ[೧] ಫ್ರಾನ್ಸ್ ಮುಂತಾದೆಡೆಗಳಲ್ಲಿ ಚದುರಿ ಹೋಗಿವೆ.[೨]

ಇಕ್ಕೇರಿ ದೇವಾಲಯದ ಚಿನ್ನದ ಕಳಸ ಭಟಕಳದಲ್ಲಿದೆ. ಕೆಳದಿ ಶಾಸನ ಬೆನಾರಸ್‌ನಲ್ಲಿದೆ. ಇಟಲಿಯ ಪಿಯತ್ರೋ ದೆಲ್ಲಾವಾಲ್ಲೆಯ ಕಥನದಲ್ಲಿ ಪ್ರಸ್ತಾಪಿಸಿದ ಇಕ್ಕೇರಿಯ ಅಘೋರೇಶ್ವರ ಕಂಚಿನ ಮೂರ್ತಿ ಗಮನಾರ್ಹವಾದುದು. ಕೇರಳದ ಕಣ್ಣಾನೂರು ಜಿಲ್ಲೆ ಕೆಳದಿಯ ಅಧೀನಕ್ಕೊಳಪಟ್ಟ ಅಪೂರ್ವ ಚಾರಿತ್ರಿಕ ದಾಖಲೆಯೊಂದು ಲಂಡನ್ ಹಾಗೂ ತಲಚೇರಿಯಲ್ಲಿದೆ. ಈ ದಾಖಲೆಯಲ್ಲಿರುವ ಕೊಲತ್ತಿರಿ ಅರಸರ, ಕೆಳದಿ ಸೈನ್ಯದ ಅಧಿಪತಿ ಹಾಗೂ ಬ್ರಿಟಿಷ್ ಅಧಿಕಾರಿಯ ಸಹಿಗಳು ಗಮನಾರ್ಹವಾದುದು. ಬೋಡ್ಲೀನ್ ಭಂಡಾಗಾರದಲ್ಲಿರುವ ಕೆಳದಿ ವೀರಭದ್ರನಾಯಕನ ಶಾಸನ ದಾಖಲೆ, ಮದರಾಸಿನಲ್ಲಿರುವ ಕೆಳದಿ ಶಿವಪ್ಪನಾಯಕನ ಕಾಲದ ರಥ, ಮೈಸೂರಿನ ಜಗನ್ಮೋಹಿನಿ ಅರಮನೆಯಲ್ಲಿರುವ ಕೆಳದಿ ರಾಣಿಯ ಮಂಚ, ಪದ್ಮಳ್ಳಿಯಲ್ಲಿನ ಪೋರ್ಚುಗೀಸರ ಮರಗೆತ್ತನೆಯ ಫಲಕ, ಪೋಲೀಸ್ ಸ್ಟೇಷನ್‌ನಲ್ಲಿರುವ ಕೆಳದಿ ಅರಸರ ಬೃಹತ್ ಫಿರಂಗಿಗಳು[೩], ಜಿಲ್ಲೆಯಲ್ಲಿರುವ ವಿಪುಲ ಮಾಸ್ತಿ, ಸಮಾಧಿ, ವೀರಗಲ್ಲುಗಳು, ಅರಮನೆ, ಟಂಕಸಾಲೆ ಮುಂತಾದ ಅವಶೇಷಗಳು ಅಧ್ಯಯನಶೀಲರಿಗೆ ಆಕರಗಳಾಗಿದ್ದು ಗಮನ ಸೆಳೆಯುತ್ತಿವೆ. ಇಂತಹ ಸಂಶೋಧನೆಗಳನ್ನು ಕೈಗೊಳ್ಳಲೆಂದೇ ಗ್ರಾಮಾಂತರ ಕ್ಷೇತ್ರದಲ್ಲಿ ಅಪೂರ್ವವೆನಿಸಿದ ಕೆಳದಿ ಇತಿಹಾಸ ಸಂಶೋಧನಾಲಯ ರೂಪುಗೊಂಡಿದೆ.

ಕ್ರಿ.ಶ. 17-18ನೇ ಶತಮಾನದಲ್ಲಿ ಕೆಳದಿ ರಾಜ್ಯದಲ್ಲಿ ಸಂಚರಿಸಿ ಕಣ್ಣಾರೆ ಕಂಡು ದಾಖಲಿಸಿದ ವಿದೇಶೀ ಪ್ರವಾಸಿ ಅಲೆಗ್ಝಾಂಡರ್ ಹ್ಯಾಮಿಲ್‌ಟನ್ ಹಾಗೂ ಬ್ರಿಟೀಷ್ ವೈಸ್‌ರಾಯಿ ಸ್ಟೋಕ್ಸ್‌ನ ಈ ಕೆಳಗಿನ ಸಂಗತಿಗಳು ಮುಂದಿನ ಪೀಳಿಗೆಗೆ ಈ ಜಿಲ್ಲೆಯ ಅವಶೇಷಗಳೋಪಾದಿಯಲ್ಲಿವೆ. ಮಾದರಿಯೊಂದನ್ನು ಇಲ್ಲಿ ನೀಡಲಾಗಿದೆ :

---

೧ ಇಟಲಿಯ ತ್ರಿಯೇಸ್ಟೆ ವಸ್ತುಸಂಗ್ರಹಾಲಯದಿಂದ ನಾನು ಹಾಗೂ ಡಾ|| ವೆಂಕಟೇಶ್ ಸಂಗ್ರಹಿಸಿದ ಪಿಯತ್ರೋ ಡೆಲ್ಲಾವಾಲ್ಲೆಯ ದಾಖಲೆಯ ಜೆರಾಕ್ಸ್ ಪ್ರತಿಯ ಪ್ರದರ್ಶನವನ್ನು ಕೆಳದಿ ಮ್ಯೂಜಿಯಂನಲ್ಲಿ ನೋಡಿರಿ.

೨ ಇವುಗಳ ಸಂಶೋಧನೆಗೆ ಪ್ರಯತ್ನ ಸಾಗಿದೆ.

೩ ಇವುಗಳನ್ನು ಕೆಳದಿ ಮ್ಯೂಜಿಯಂನಲ್ಲಿ ಪ್ರದರ್ಶನ ಯೋಗ್ಯವನ್ನಾಗಿಸಲು ನಡೆಸಿದ ನನ್ನ ಪ್ರಯತ್ನ ದುರಾದೃಷ್ಟದಿಂದ ವಿಫಲವಾಯಿತು ! ವಿವಿಧ ಪ್ರಯತ್ನಗಳಿಂದ ಕೆಳದಿ ಅರಸರ ಕಾಲದ ಅವಶೇಷ ವಸ್ತುಗಳನ್ನು ನಾನೇ ಶಿವಮೊಗ್ಗ ಮ್ಯೂಜಿಯಂಗೆ ಒವಗಿಸಿ, ಇದನ್ನು ಸ್ಥಾಪಿಸುವಲ್ಲಿ ತುಂಬ ಹೋರಾಡುವಂತಾಯಿತು ! ಕೆಳದಿ ಅರಸರ ಕಾಲದ ಅವಶೇಷಗಳೆಲ್ಲವನ್ನು ದಾಖಲಿಸಿ ಕ್ಯಾಟಲಾಗ್ ಸಿದ್ಧಪಡಿಸಲು ಡಾ|| ವೆಂಕಟೇಶ್ ಕರ್ನಾಟಕ ಇತಿಹಾಸ ಅಕಾಡೆಮಿಯಲ್ಲಿ ಪ್ರಬಂಧ ಸಾದರಪಡಿಸಿದ್ದಾರೆ.

Alexander Hamilton.

"The subjects of this country observe the laws so well that robbery or murder are hardly heard of among then and a stranger may pass through the country without being asked where he is going or what business he has."

Viceroy Stokes

"I have nowhere in India seen so much honesty and veracity as among the country people of Nagara (KELADI). The ryots of Nagara have always prided themselves on their nationality."

ಶಿವಮೊಗ್ಗ ಜಿಲ್ಲೆಯ ಕೆಳದಿಯಿಂದ ಉದ್ಭೂತವಾದ ಈ ಆದರ್ಶಗಳು ಈಗಿನ ಹಾಗೂ ಮುಂದಿನ ಪೀಳಿಗೆಗೆ ಎಷ್ಟು ಆವಶ್ಯಕವೆಂಬುದನ್ನು ಒತ್ತಿ ಹೇಳಬೇಕಾಗಿಲ್ಲವಷ್ಟೇ ? ಈಗಿನ ರಾಜಕೀಯ ತಜ್ಞರು ಈ ಪಾಠವನ್ನು ಕಲಿಯುವರೇ ?

ಸ್ವಾತಂತ್ರ್ಯಪೂರ್ವ ಸಂಗತಿ ಹಾಗೂ ಅವಶೇಷಗಳು

ಕೆಳದಿ ಇತಿಹಾಸೋತ್ತರ ಕಾಲದ ಅವಶೇಷಗಳಲ್ಲಿಯೂ ಈ ಜಿಲ್ಲೆಗೆ ಗಣನೀಯ ಸ್ಥಾನವಿದೆ. ಬ್ರಿಟೀಷರ ವಿರುದ್ಧ ಹೋರಾಟ ನಡೆಸಿದ ಚೆನ್ನಗಿರಿಯ ದೋಂಡೇವಾಘನ ಕರವಾಲ ಶಿಕಾರಿಪುರ ಶ್ರೀ ಹುಚ್ಚುರಾಯಸ್ವಾಮಿ ದೇವಾಲಯದಲ್ಲಿದೆ. ನಗರ ಖಾವಿಂದ ಬೂದಿಬಸಪ್ಪನಾಯಕನ (1830) ಸಂಗತಿಯ ಪತ್ರಗಳು ಸರಕಾರದ ಪತ್ರಾಗಾರದಲ್ಲಿದೆ. ಕೆಳದಿ ಮ್ಯೂಜಿಯಂನಲ್ಲಿ ನವಾಬ್ ಹೈದರಾಲಿಯ ಪತ್ರವೊಂದಿದೆ. ಶಿವಮೊಗ್ಗ ಜಿಲ್ಲೆಗೆ ಕರ್ನಾಟಕದಲ್ಲಿಯೇ ಗಂಡುಭೂಮಿಯೆಂಬ ಪ್ರತೀತಿಯಿದ್ದು ಇದಕ್ಕನುಗುಣವಾಗಿ ಈಸೂರಿನ ಕ್ವಿಟ್ ಇಂಡಿಯಾ ಚಳುವಳಿ, ಭೂಮಾಲೀಕ ರೈತರ ಕಾಗೋಡು ಸತ್ಯಾಗ್ರಹ ಪ್ರಮುಖ ಅಂಶಗಳು. ದಂತಚೋರ ವೀರಪ್ಪನ್‌ನಂತೆ ಕನ್ನೇಶ್ವರ ರಾಮ, ಜುಂಜ ಮುಂತಾದವರ ವೀರಗಾಥೆಗಳೂ ಅವಶೇಷ ಸಂಗತಿಗಳಾಗಿವೆ.

ಒಂದು ಕಾಲದಲ್ಲಿ ಯಾರಿಗೂ ಗೋಚರಿಸದೇ ಇದ್ದ ಜೋಗ ಜಲಪಾತವನ್ನು ದನ ಕಾಯುವ ಹುಡುಗನೊಬ್ಬನು ಆಗಿನ ಇಂಜಿನಿಯರಿಗೆ ಮಾರ್ಗದರ್ಶಿಯಾಗಿದ್ದು ತೋರಿಸಿದ ಸಂಗತಿ ರೋಮಾಂಚಕಾರಿಯಾದುದು. ದಿವಾನ್ ವಿಶ್ವೇಶ್ವರಯ್ಯನವರು ಈ ಜಲಪಾತವನ್ನು ವೀಕ್ಷಿಸಿ "What a Waste of Energy" ಎಂದು ಉದ್ಗರಿಸಿದ ಅಭಿಪ್ರಾಯ ಪುಸ್ತಕದಲ್ಲಿ ಉಲ್ಲೇಖಿಸಿರುವುದೂ ಮುಂದಿನ ಪೀಳಿಗೆಗೆ ಸಂಗ್ರಹ ಯೋಗ್ಯವಾದುದಲ್ಲವೇ ?

ಉಪಸಂಹಾರ

ಸುಮಾರು ೧೨ ರಾಜಧಾನಿ ಕೇಂದ್ರಗಳು, ೨೧ ಕೋಟೆಗಳು[೧] ಸ್ಮಾರಕಗಳು, ಕಲಾ ಸೌಧಗಳು, ಕೆಳದಿ ಅರಸರು ನಿರ್ಮಿಸಿದ ಮಸೀದಿ, ಶಿವಾಜಿ ತಂದೆಯ ಷಾಜಿ ಸಮಾಧಿ, ಶಿವಾಜಿ ಮಗ ರಾಜಾರಾಮ ನಿರ್ಮಿತ (ಕೆಳದಿ ರಾಜಧಾನಿ ನಗರದಲ್ಲಿ) ಪಾರ್ವತಾಂಬಾ ದೇವಾಲಯ, ಜನಮೇಜಯನ ಕಾಲದಿಂದ ಮೈಸೂರು ಒಡೆಯರು ಹಾಗೂ ಬ್ರಿಟೀಷ್ ಸೇನಾನಿಗಳವರೆಗೆ ಶಾಸನಗಳು, ಶಿವಪ್ಪನಾಯಕನ ಅರಮನೆ, ಕೆಳದಿ ಅರಸರು ನಿರ್ಮಿಸಿದ ಮಸೀದಿ, ಕಾಸರವಳ್ಳಿಯ ಭವ್ಯ ಸೌಧ[೨], ಮಾಸೂರು, ಮದಗದ ಕೆರೆಯಲ್ಲಿರುವ ಪರ್ಷಿಯ ಮತ್ತು ಅರಬ್ಬಿ ಲಿಪಿಯಿಂದ ಕೂಡಿದ ಬಿಜಾಪುರ ಸುಲ್ತಾನನ ಶಾಸನ ಅವಶೇಷಗಳು, ರಣದುಲ್ಲೆಖಾನ ನಿರ್ಮಿತ ಸಂತೇಬೆನ್ನೂರಿನ ದರ್ಗಾ, ಹಿಂದಿನ ಕಾಲೇದುರ್ಗದ ತಾಲ್ಲೂಕು ಕಚೇರಿ, 1713ರಲ್ಲಿ ಹಾಲೆಂಡ್‌ನಲ್ಲಿ ತಯಾರಾದ ಆಂಸ್ಟರ್‌ಡ್ಯಾಂನ ಬೃಹತ್‌ಗಂಟೆ, ಕೆಳದಿ ದೇವಾಲಯದಲ್ಲಿರುವ ರಾಣಿ ಚೆನ್ನಮ್ಮಾಜಿಯ ಶಿಲ್ಪ, ಶಿವಪ್ಪ ನಾಯಕನ ಭೂಸುಧಾರಣೆಯ ಅಳತೆಯ ಪರಿಮಾಣಗಳು, ಅಪಾರ ವೀರಕಲ್ಲು ಹಾಗೂ ಮಾಸ್ತಿಕಲ್ಲುಗಳು, ಪುರಾತತ್ವ ಹಾಗೂ ಜಾನಪದ ಸಂಗ್ರಹಗಳು, ಪುರಾತನ ಹಸ್ತಪ್ರತಿಗಳು ಮುಂತಾದ ಜಿಲ್ಲೆಯ ಅವಶೇಷ ಗಳಳ್ಳು ವೈಜ್ಞಾನಿಕ ರೀತಿಯಲ್ಲಿ ಮುಂದಿನ ಪೀಳಿಗೆಗೆ ರಕ್ಷಿಸಿ ಕಾಪಾಡುವುದು ಸರಕಾರದ ಹಾಗೂ ಸಮಾಜದ ಆದ್ಯ ಕರ್ತವ್ಯ. ಇವುಗಳ ಸಂರಕ್ಷಣೆಗಾಗಿಯೇ ಕೆಳದಿ ಸಂಶೋಧನಾಲಯ ವೈವಿಧ್ಯ ಸಂಶೋಧನಾ ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯಪ್ರವೃತ್ತವಾಗಿದೆ. ಸಹಸ್ರಾರು ಶಾಸನ ಹಾಗೂ ಶಿಲ್ಪಗಳು ಮಳೆಗಾಳಿಬಿಸಿಲುಗಳಿಗೂ, ಹಳ್ಳಿಗರ ಅಜ್ಞಾನ ಹಾಗೂ ಸುಶಿಕ್ಷಿತರ ನಿರ್ಲಕ್ಷ ಹಾಗೂ ಸುತ್ತಾಡಿ ನಾಶ ಹೊಂದುತ್ತಲಿವೆ. ನಿರ್ಗತಿಕವಾಗಿರುವ ಇಂತಹ ಪ್ರಾಚ್ಯಸಂಪತ್ತುಗಳನ್ನು ಸಮೀಪದ ವಸ್ತುಸಂಗ್ರಹಾಲಯಗಳಲ್ಲಿ ಸುಶಿಕ್ಷಿತವಾಗಿ ಕಾಯ್ದಿಡ ಬೇಕು. ಹಳ್ಳಿ, ಹಳ್ಳಿಗಳಲ್ಲಿ ಇವುಗಳ ಮಹತ್ವದ ಅರಿವಾಗುವಂತೆ ಇಂತಹ ಸಾಂಸ್ಕೃತಿಕ ಉತ್ಸವಗಳಲ್ಲಿ ಘೋಷಿಸಬೇಕು. ಈ ಕಾರಣ ಗ್ರಾಮಾಂತರ ಕೆಳದಿ ಮ್ಯೂಜಿಯಂ ಸಹಕಾರ ಪಡೆದು ಇವನ್ನು ಬಲಪಡಿಸುವುದು ಆದ್ಯ ಕರ್ತವ್ಯ.

ಶಿವಮೊಗ್ಗ ಜಿಲ್ಲೆ ದೇಶದ ವೈವಿಧ್ಯತೆಯಲ್ಲಿ ಅಂತರ ರಾಷ್ಟ್ರೀಯ ಪ್ರಾಮುಖ್ಯತೆ ಪಡೆದಿದ್ದು, ಉಜ್ವಲ ಭವಿಷ್ಯವನ್ನು ಹೊಂದಿದೆ. ಪ್ರಾಮುಖ್ಯವಾಗಿ ಕೇರಳದ ಕಣ್ಣಾನೂರು ಜಿಲ್ಲೆಯನ್ನು ಒಳಗೊಂಡು ಒಂಭತ್ತು ಜಿಲ್ಲೆಯ ಅಧಿಪತ್ಯವನ್ನು ನಡೆಸುತ್ತಿದ್ದ

---

೧ ಅನುಬಂಧ ನೋಡಿರಿ

೨ ಇಂತಹದೇ ಸೌಧವೊಂದು ಶೀರ್ನಾಳಿಯಲ್ಲಿದ್ದುದು ಜಲಾವೃತವಾಗಿದೆ.

ಕೆಳದಿ ಅರಸರ ಕೇಂದ್ರಸ್ಥಾನ ಶಿವಮೊಗ್ಗ ಜಿಲ್ಲೆಯಲ್ಲಿದೆ. ದೆಹಲಿಯ ಔರಂಗಜೇಬನನ್ನು ಸೋಲಿಸಿ ಶಿವಾಜಿಯ ಮಗ ರಾಜಾರಾಮನನ್ನು ರಕ್ಷಿಸಿ ಮಹಾರಾಷ್ಟ್ರವನ್ನು ಉಳಿಸಿದ್ದು ಕೆಳದಿ ಚೆನ್ನಮ್ಮಾಜಿಯ ಶಿವಮೊಗ್ಗ ಜಿಲ್ಲೆ. ವಿಜಯನಗರ ಪತನ ಕಾಲದಲ್ಲಿ ಅದನ್ನು ಜೀರ್ಣೋದ್ಧಾರಿಸಿ ಶ್ರೀರಂಗರಾಯನನ್ನು ರಕ್ಷಿಸಿದ ಕೆಳದಿ ಶಿವಪ್ಪನಾಯಕನು ಶಿವಮೊಗ್ಗ ಜಿಲ್ಲೆಯವನು. ದೆಹಲಿಯ ಮೊಗಲ್‌ವಂಶವನ್ನು ಜೀರ್ಣೋದ್ಧಾರಿಸಿದವನು, ಕೆಳದಿಯ IIನೆ ಸೋಮಶೇಖರನಾಯಕನು ಈ ಜಿಲ್ಲೆಯವನು. ದೆಹಲಿಯ ಅಕ್ಬರನ ಆಡಳಿತಕ್ಕೊಳಪಟ್ಟಿದ್ದ ಕಾಶಿಯಲ್ಲಿ ದೇವಾಲಯ ಜೀರ್ಣೋದ್ಧಾರಿಸಿ ಕನ್ನಡದ ಶಾಸನವನ್ನು ಸ್ಥಾಪಿಸಿದವನು ಶಿವಮೊಗ್ಗ ಜಿಲ್ಲೆಯ ಕೆಳದಿಯ ದೊಡ್ಡ ಸಂಕಣ್ಣನಾಯಕ. ಹಾಲೆಂಡ್ ಸರಕಾರವನ್ನು ತರಾಟೆಗೆ ತೆಗೆದುಕೊಂಡು ವಿದೇಶೀಯರಾದ ಪೋರ್ಚ್‌ಗೀಸ್ - ಡಚ್ಚರನ್ನು ಸೋಲಿಸಿದವನು ಕೆಳದಿಯ ಶಿವಪ್ಪನಾಯಕ. ಹೆಚ್ಚೇನು ಹೇಳಲಿ ? ಸಧ್ಯಕ್ಕೆ ಇಷ್ಟು ಸಾಕು. ಇಂತಹ ಕೆಳದಿ ದೇಶ ವಿದೇಶಗಳಲ್ಲಿ ಪ್ರಖ್ಯಾತ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಖ್ಯಾತಿ ಪಡೆದಿದ್ದು ಶಿವಮೊಗ್ಗ ಜಿಲ್ಲೆಯ ಸಾಸ್ಕೃತಿಕ ಕೇಂದ್ರ ಬಿಂದು ; ಚಾಲುಕ್ಯೋತ್ಸವ, ಹೊಯ್ಸಳೋತ್ಸವ, ವಿಜಯನಗರೋತ್ಸವದಂತೆ "ಸಹ್ಯಾದ್ರಿಯ ಕೆಳದಿ ಉತ್ಸವ" ಅಥವಾ "ಮಲೆನಾಡಿನ ಕೆಳದಿ ಉತ್ಸವ" ಎಂಬ ನಾಮಾಂಕಿತವ ಇಡುವುದು ಸೂಕ್ತವಾದುದು. ಇದರಿಂದ ಶಿವಮೊಗ್ಗ ಜಿಲ್ಲೆಯ ಉತ್ಸವದ ವ್ಯಾಪ್ತಿ ಹಾಗೂ ಪ್ರಾಮುಖ್ಯತೆ ವಿಸ್ತಾರವಾಗಿ ವೃದ್ಧಿಗೊಳ್ಳುತ್ತದೆ.

Appendix I

ಶಿವಮೊಗ್ಗ ಜಿಲ್ಲೆಯಲ್ಲಿ ಆಳಿದ ಅರಸುಗಳು (ಶಾಸನಾಧಾರದಿಂದ)

EC Vol. VII (Part I)			EC Vol. VIII (Part II)		
ನಂ.	ಅರಸರುಗಳು	ಕಾಲ (ಕ್ರಿ.ಶ.)	ನಂ.	ಅರಸರುಗಳು	ಕಾಲ (ಕ್ರಿ.ಶ.)
1.	ಅಯೋಧ್ಯ*				
2.	ಪಾಂಡವ*				
3.	ಶಾತವಾಹನ	150			
4.	ಕದಂಬ	250-1235	4.	ಕದಂಬರು	400 - 1307
5.	ಸೇಂದ್ರಕ	685			
6.	ಸೇನವರ	700	6.	ಸೇನವರು	1010
7.	ಗಂಗರು	357-1245	7.	ಗಂಗರು	1077 - 1198
8.	ರಾಷ್ಟ್ರಕೂಟರು	830-963	8.	ರಾಷ್ಟ್ರಕೂಟರು	797-991
9.	ಸಾಂತಾರರು	830 - 1287	9.	ಸಾಂತಾರರು	897 - 1290
10.	ಚಾಲುಕ್ಯರು	640 - 1189	10.	ಚಾಲುಕ್ಯರು	680 - 1212
11.	ನೊಳಂಬ-ಪಲ್ಲವರು	1048 - 1054			
12.	ಪಾಂಡ್ಯರು	1083 - 1180			
13.	ಕಲಚೂರರು	1158 - 1208	13.	ಕಲಚೂರರು	1158 - 1182
14.	ಹೊಯ್ಸಳರು	1111 - 1340	14.	ಹೊಯ್ಸಳರು	1090 - 1334
15.	ಸಿಂದರು	1061 - 1247	15.	ಸಿಂದರು	1180 - 1316
16.	ಸೇವುಣರು (ಯಾದವ)	1215 - 1295	16.	ಸೇವುಣರು(ಯಾದವ)	1212 - 1300
17.	ವಿಜಯನಗರ	1368 - 1621	17.	ವಿಜಯನಗರ(ಸಾಳುವ)	1342 - 1666
18.	ಕೂಡಲಿ	1154 - 1683			1488 - 1560
19.	ಕೆಳದಿ	1544 - 1758	19.	ಕೆಳದಿ	1524 - 1763 (1499)
20.	ಸಂತೆಬೆನ್ನೂರು	1558 - 1667			
21.	ಬಿಜಾಪುರ	1632 - 1758			
22.	ಚಿತ್ರದುರ್ಗ	1675 - 1689			
23.	ಬ್ರಿಟೀಷರು	1863			
24.	ಮೈಸೂರು	1947	24.	ಮೈಸೂರು	1768 - 1947
			25.	ವಾಣೆ	1211 - 1249
			26.	ಸೇತು	1278 - 1320

*ಶಾಸನಗಳು ಗೋಚರಿಸಿವೆ.

Appendix II

I. ಶಿವಮೊಗ್ಗ ಜಿಲ್ಲೆಯಲ್ಲಿರುವ ಪುರಾತನ ರಾಜಧಾನಿಗಳು.

1) ಆರಗ (ಮಲೆರಾಜ್ಯ) ತೀರ್ಥಹಳ್ಳಿ ತಾ.
2) ಬಳ್ಳಿಗಾವೆ (Royal City) ಶಿಕಾರಿಪುರ ತಾ.
3) ಬಂದಲಿಕೆ (ಬಂದನಿಕೆ - ಸಾಗರಖಂಡ ೨೦).
4) ಉದ್ರಿ ಸೊರಬ ತಾ.
5) ಹೊಸಗುಂದ (ಸಾಗರ ತಾ.)
6) ಹುಂಚ - ತೀರ್ಥಹಳ್ಳಿ ತಾ.
7) ಕೆಳದಿ, ಸಾಗರ ತಾ.
8) ಇಕ್ಕೇರಿ, ಸಾಗರ ತಾ.
9) ನಗರ (ಬಿದನೂರು), ಹೊಸನಗರ ತಾ.
10) ಕಾಲೇದುರ್ಗ ತೀರ್ಥಹಳ್ಳಿ ತಾ. (ರಕ್ಷಣಾ ರಾಜಧಾನಿ)
11) ಓಟೂರು ಸೊರಬ ತಾ.
12) ಬೆಳಗುತ್ತಿ ? ಚೆನ್ನಗಿರಿ ತಾ.

II. ಕೋಟೆಗಳು

1. ಆನಂದಪುರ
2. ಆನವಟ್ಟಿ
3. ಆವಿನಹಳ್ಳಿ
4. ಇಕ್ಕೇರಿ
5. ಉಡುಗಣಿ
6. ನಗರ
7. ಕಾಲೇದುರ್ಗ
8. ಶಿವಮೊಗ್ಗ
9. ಚಂದ್ರಗುತ್ತಿ
10. ಕೆಳದಿ
11. ಬಳ್ಳಿಗಾವೆ ?
12. ತಾಳಗುಂದ ?

13. ಮದಗದ ಕೆರೆ
14. ಉದ್ರಿ
15. ಆಯನೂರು
16. ಗುಡ್ಡದ ಬೆನಕನ ಹಳ್ಳಿ
17. ಹೋದಿಗ್ಗೆರೆ
18. ಚೆನ್ನಗಿರಿ
19. ಕುಂಸಿ ?
20. ಗಾಜನೂರು
21. ಸಾಸುವೆ ಹಳ್ಳಿ (ಹೊನ್ನಾಳಿ ತಾ.)
21. ಗೋವರ್ಧನಗಿರಿ (ಗಿರಿದುರ್ಗ SA 55)

ಈ ಪಟ್ಟಿ ಅಪೂರ್ಣ. ಸ್ಮಾರಕಗಳ ಪಟ್ಟಿಯೊಂದನ್ನು ನೀಡುವ ಉದ್ದೇಶವಿತ್ತು. ಕಾಲಾವಕಾಶ ಹಾಗೂ ಇತರೆ ಕಾರಣಗಳಿಂದ ಇದು ಸಾಧ್ಯವಾಗಲಿಲ್ಲ. ಅನೇಕ ಕೋಟೆಗಳ ಕುರುಹುಗಳೂ ಈಗ ಕಣ್ಮರೆಯಾಗಿವೆ. ಅಳಿದುಳಿದವುಗಳನ್ನು ಮುಂದಿನ ಇತಿಹಾಸಕ್ಕೆ ಲಭಿಸುವಂತೆ ರಕ್ಷಿಸುವುದು ಅಗತ್ಯ.

Appendix III

Important monuments in Shimoga Distrist.

1. Doorway of Tripurantaka Temple, Balgami.
2. Sula Brahma Stone, Balgami.
3. Bhirandeswara Pillar.
4. Virakal at Bandalike (SK 249)
5. Uma Maheswara Panchalinga Temple, Belgami.
6. Tara Bhagavati, Buddhist Vihara.
7. Simhalatata Trimurthy Temple, Bandalike.
8. Sculptural Screens, Tripurantaka Temple, Balgami.
9. Kallurgudda Stone (Sh 4)
10. Kudhi Matha Plate 1st Side (Sh 79)
11. Ganj Agrahara Plates (SK 45)x
12. Ganja Plates at Tagarty. (SK 52)
13. Panchalinga Stone, Balgami (SK 126)
14. Stone at Badagi Honda (SK 136)
15. Tadagami Stone (SK 66)
16. Vanke Honda Stone, Balgami (SK 154)
17. Talagunda Pillar Inscription (SK 176)
18. Malvalli (SK 263)
19. Arelaic and Persian Inscription - Masur Nadag Tank (SK 324)
20. Kedareswara Temple, Belgami.
21. Doorway at Sita Honda.
22. Doorway of Someswara Temple, Bandalike.
23. Gandabherunda Ceiling, Keladi.
24. Nandi Pacrilian Ikkeri.
25. Virakal at Mavali Toman Text (Soral Tk)
26. Hireshakuna Plates.
27. Kumsi Stone Inscription.
28. Kupatur Stone Inscription.
29. Humavalli Stone Inscription.
30. Govardhanagiri Pillar Inscription.
31. Humcha Stone Inscription.
32. Pillars at Keladi and Ikkeri.
33. Rumied Kort of Keladi at Ikkeri.

34. Rare Bronze Images of Aghoreswara and Broken Stone Sculpture.
35. Mavali Virakal Inscription.
36. Baradavalli Virakal Inscription.
37. Kavadi Stone Inscription.
38. Bhimanakatte Matha Plates.
39. Ruins of Keladi Rulers Palace and Tankasala, Halenagar.
40. Keladi Shivappa Nayaks Fort at Nagar and Kouledurga.
41. Raja Rama's (Shivaji's Son - Temple at Halenagar and Shaliji's Tomg.
42. Keladi Shivappa Nayakas Palace.
43. A rare Wooden Carrings at Keladi and Kasaravalli.
44. Wooden Panel (Portuguese) Voddhalli.
45. The Bell Containing Inscription of Amsterdam.
46. Basavana Byana at Nagar.
47. Ancient Bridge at Nagar.

X Models displayed in West Germany by Mrs. Gertrand Sorice Wiesbaden (W.G.).

X The original copper plate is displayed in the Keladi Museum and Historical Research at KELADI.

X All photographs of these carrings are utilised for Ph.D. by Dr. David T. Sanford, U.S.A. - Keladi Style of Architecture is under print by Dr. Michael, London.

ಅಪೆಂಡಿಕ್ಸ್ IV

ಶಿವಮೊಗ್ಗ ಜಿಲ್ಲೆಯಲ್ಲಿರುವ ಹೊಯ್ಸಳರ ಕಾಲದ ಅವಶೇಷಗಳ

- ಸಮೀಕ್ಷಾ ಸೂಚಿ -

ಹೆಸರು Name	ಆಕರ Reference	ಕಾಲ Date	ನಿವೇಶನ ಊರು Site	ಅವಶೇಷಗಳು Ancient remains & Temples
ಆದಿತ್ಯಾಚಾರಿ	ECVIII Sa 83	1164	ಆವಿನಹಳ್ಳಿ	ವೀರಗಲ್ಲು
ಬಾಚೋಜ	EC VII Sk294	1108	ತುಂಬ್ರ	
			ಹೊಸೂರು	ರಾಮೇಶ್ವರ ದೇವಾಲಯ
ಬಾಮ್ಮೋಜ	EC VIII Sb 287	1163	ಕಲ್ಲೂರು	ರಾಮೇಶ್ವರ ದೇವಾಲಯ ಸಮೀಪ ವೀರಗಲ್ಲು
ಬೀರೋಜ	EC VIII Sb299	1074	ತೊರೆವಂದ	ಬಯಲ ಬಸವ ದೇವಾಲಯ ಸಮೀಪ
ಬೀರೋಜ	EC VIII Sb223	1152	ಗೆಂಡ್ಲ	ಕೆರೆ ಏರಿಯಲ್ಲಿರುವ ವೀರಗಲ್ಲು
ಬೀರೋಜ	EC VIII Sb4	1211	ಮಾವಲಿ	ಕಲ್ಲೇಶ್ವರ ದೇವಾಲಯ ಸಮೀಪ
ಬೀರೋಜ	(ASMAR, 1931 No.73)	1218	ನಗರ ತಾ.	ಸರಸ್ವತಿ ನದಿ ಸೇತುವೆ ಸಮೀಪ
ಬೀರೋಜ	(ASMAR, 1931 No.73)	1218		ವೀರಗಲ್ಲು ಸಮೀಪ
ಬೀರೋಜ	EC VIII Sa97	1292		ನಾಡಮಡುವ ವೀರಗಲ್ಲು
ಬೀರೋಜ	EC VIII Nr27	1302	ಮಳಲಿ	ಬಯಲಿನ ಕಲ್ಲಿನಲ್ಲಿ
ಬಿಸಡೋಜ	EC VII Sk 97	1186	ಬಳ್ಳಿಗಾವೆ	ಕೇದಾರೇಶ್ವರ ದೇವಸ್ಥಾನ
ಕೆಟ್ಟಯ	EC VII SK 105	1195	ಬಳ್ಳಿಗಾವೆ	ಕೇದಾರೇಶ್ವರ ದೇವಸ್ಥಾನ
ಕೆಟ್ಟೋಜ	EC VII 77	1110	ಹಿರೋಜಂಬೂರು	ವೀರಭದ್ರ ದೇವಾಲಯ
ಕೆಟ್ಟೋಜ	EC VII Sh 43	1172	ಹಿರಿಯೂರು	-
ಕಾವೋಜ	EC VII Sk97	1186	ಬಳ್ಳಿಗಾವೆ	ಕೇದಾರೇಶ್ವರ ದೇವಸ್ಥಾನ
ಕಿಕ್ಕ	EC VIII Sa108		ಅನಂತಪುರ	ಉತ್ತರದಿಕ್ಕಿನ ರಸ್ತೆಯ ಶಿಲೆ
ಕಿಟೋಜ	EC VIII Nr 19	1320	ಹೊಸಕೋಟೆ	ವೀರಗಲ್ಲು
ದಾಸೋಜ	EC VII Sk 136	1068	ಬಳ್ಳಿಗಾವೆ	ಪಟ್ಟಣದಲ್ಲಿರುವ ಶಿಲಾಶಾಸನ
ದಾಸೋಜ	Unpublished	12th Cent.	ಬಳ್ಳಿಗಾವೆ	ಅಚ್ಯುತನ ಭಗ್ನಶಿಲ್ಪದಲ್ಲಿ Inscription
ಏಕೋಜ	EC VII Ng 109	13&14Cent.	ಚುಂಚನಹಳ್ಳಿ	ನಶಿಸಿದ ಶಿಲೆ
ಕಾಡೋಜ	EC VII Sk 298	1089	ತುಂಬ್ರಹೊಸೂರು	ವೀರಗಲ್ಲು
ಕಾಟೋಜ	EC VIII Sb299	1074	ತೊರವಂದ	ಬಯಲ ಬಸವ ದೇವಾಲಯ

ಕಾಟೋಜ	EC VII Sk 97	1113	ಆಲಹಳ್ಳಿ ಬಯಲ ಕಲ್ಲಿನಲ್ಲಿ	
ಕೇಟೋಜ	EC VII Sk 77	1110	ಹಿರೇಜಂಬೂರು ವೀರಭದ್ರ ದೇವಾಲಯ	
ಮಧುಕೋಜ	EC VIII Sa 96	1299	ನಾಡ ಮಡುವ	ವೀರಗಲ್ಲು
ಮಧುಕೋಜ	EC VIII Sa 45	1300	ಬರದವಳ್ಳಿ	ವೀರಗಲ್ಲು
ಮಲ್ಲೋಜ	EC VII Sb55	1167	ಬಿದರೆ	ಸಾತೇಶ್ವರ ದೇವಸ್ಥಾನ
ಮಲ್ಲೋಜ	EC VII Sb 43	1172	ಹಿರಿಯೂರು	
ಮಲ್ಲೋಜ	EC VIII Sb 3	1130	ಮಾವಲಿ	ಕಲ್ಲೇಶ್ವರ ದೇವಾಲಯದ ಕಲ್ಲಿನಲ್ಲಿ
ಮಾರಗವೋಜ	EC VII Sk 211	1294	ಹರಿಗೆ	ಮಲ್ಲಿಕಾರ್ಜುನ ದೇವಾಲಯದ ಉತ್ತರದ ,
ನಾಟೋಜ	EC VII Sk298	1089	ತುಂಬ್ರ	ವೀರಗಲ್ಲು
			ಹೊಸೂರು	
ಪದ್ಮೋಜ	EC VII Sk 293	1080	ತುಂಬ್ರ	ರಾಮೇಶ್ವರ ದೇವಾಲಯ
			ಹೊಸೂರು	
ಪದ್ಮಾಚಾರಿ	EC VIII Sa 83	1164	ಆವಿನಹಳ್ಳಿ	ವೀರಗಲ್ಲು
ರಾಮೋಜ	EC VII Sk 209	1141	ಕಡಿಹಳ್ಳಿ	ಮಲ್ಲೇಶ್ವರ ದೇವಾಲಯ
ರಾಮೋಜ	EC VIII Sb 4	1211	ಮಾವಲಿ	ಕಲ್ಲೇಶ್ವರ ದೇವಾಲಯ ಸಮೀಪ
ರಾಮೋಜ	EC VIII Sa 45	1300	ಬರದವಳ್ಳಿ	ವೀರಗಲ್ಲು
ರಾಮಾ	EC VIII Sk 112	1139	ಬಳ್ಳಿಗಾವೆ	ಕೆರೆಯ ಬದಿಯ ಕಲ್ಲು
ಸಂಕೋಜ	EC VIII Sa 101	1303	ಬೆಸೂರು	ಬಸವಣ್ಣ ದೇವಸ್ಥಾನ
ಸಂತೋಜ	EC VIII Sa 108		ಅನಂತಪುರ	ಉತ್ತರ ದಿಕ್ಕಿನ ಭಾಗದ ಕಲ್ಲಿನಲ್ಲಿ
ಸಾವಿವೋಜ	EC VIII TC177	1254	ಕೋಡೂರು	ಮಲ್ಲಿಕಾರ್ಜುನ ದೇವಾಲಯ
ಸಿಂಗೋಜ	EC VII Sk 97	1186	ಬಳ್ಳಿಗಾವೆ	ಕೇದಾರೇಶ್ವರ ದೇವಸ್ಥಾನ
ಸಿಂಗೋಜ	ASNAR 1931 No.73	1218	ಶಿವಮೊಗ್ಗ	ಸರಸ್ವತಿ ನದಿಯ ಸೇತುವೆ
			ನಗರ ತಾ.	ಸಮೀಪದ ವೀರಗಲ್ಲು
ಸಿಂಗೋಜ	ASNAR 1931 No.71	1297	ಕೋಟೆ ಶಿವಮೊಗ್ಗ	ವೀರಗಲ್ಲು
ಸಿಂಗೋಜ	EC VIII Nr 27	1302	ಮಳಲಿ	ಬಯಲ ಕಲ್ಲಿನಲ್ಲಿ
ವೀರೋಜ	ASMAR 1931 No.71	1296	ಕೋಟೆ, ಶಿವಮೊಗ್ಗ ಹಾದಿನಲ್ಲಿರುವ ವೀರಗಲ್ಲು	
ಯದುಕೋಜ	EC VIII Nr 26	1275	ಹೊಸಕೊಪ್ಪ	ವೀರಗಲ್ಲು
ಯಮಿಯಣ್ಣ	EC VII Sk 18	1158	ಗ್ರಾಮ	ಮಲ್ಲಿಕಾರ್ಜುನ ದೇವಾಲಯ

ವಿಶೇಷ ವಿಷಯ : The Hoysala Artists, Their identity and shyles, Kelleson Collyer. Director of Archacology and Mseums - 1990. ಈ ರೀತಿಯಲ್ಲಿ ಇತರೆ ರಾಜವಂಶಗಳ ಅವಶೇಷ ಸೂಚಿ ಶಿವಮೊಗ್ಗ ಜಿಲ್ಲೆಯಲ್ಲಿರುವುದನ್ನು ಸಿದ್ಧಪಡಿಸಿ, ರಕ್ಷಿಸುವುದು ಆದ್ಯ ಕರ್ತವ್ಯ.

ಆರ್. ನರಸಿಂಹಾಚಾರ್ಯರ ಅನಂತರದ ಕವಿ ಚರಿತೆಯ ದಾಖಲೆಗಳು*

- ಎಸ್. ಶಿವಣ್ಣ

ರಾವ್‌ಬಹದ್ದೂರ್ ಆರ್. ನರಸಿಂಹಾಚಾರ್ಯರ 'ಕರ್ಣಾಟಕ ಕವಿಚರಿತೆ'ಯ ಮೂರು ಸಂಪುಟಗಳ ಪ್ರಕಟಿತ ವರ್ಷಗಳು ಈ ಮುಂದಿನಂತಿವೆ.

ಪ್ರಥಮ ಸಂಪುಟ (೧) ಎಸ್.ಜಿ. ನರಸಿಂಹಾಚಾರ್ಯರೊಡನೆ ೧೯೦೭ರಲ್ಲೂ ಇದೇ ಸಂಪುಟದ ಪರಿಷ್ಕೃತ ಆವೃತ್ತಿ ಆರ್. ನರಸಿಂಹಾಚಾರ್ಯರ ಹೆಸರಿನಲ್ಲಿ ೧೯೨೪ರಲ್ಲೂ ದ್ವಿತೀಯ ಸಂಪುಟ ೧೯೧೯ರಲ್ಲೂ, ತೃತೀಯ ಸಂಪುಟ ೧೯೨೯ ರಲ್ಲೂ ಪ್ರಕಟವಾಗಿವೆ. ಕವಿಚರಿತೆಕಾರರೇ ಸ್ವತಃ ಪ್ರಥಮ ಸಂಪುಟದ ಪರಿಷ್ಕಾರವನ್ನು ದ್ವಿತೀಯ ಸಂಪುಟದಲ್ಲೂ, ಪ್ರಥಮ ಹಾಗೂ ದ್ವಿತೀಯ ಸಂಪುಟಗಳ ಪರಿಷ್ಕರಣವನ್ನು ತೃತೀಯ ಸಂಪುಟದಲ್ಲೂ ಮಾಡಿದ್ದಾರೆ. ಈ ಪರಿಷ್ಕರಣಗಳು ಆರ್. ನರಸಿಂಹಾಚಾರ್ಯರ ಸಂಶೋಧನಾ ಖಚಿತತೆಯ ಮನೋಧರ್ಮಕ್ಕೆ ಸಾಕ್ಷಿಯಾಗಿವೆ. ಅವರು ತಮ್ಮ ಸಂಪುಟಗಳಲ್ಲಿ ವಿಷಯ ಸಾಮಗ್ರಿಯ ನಿರ್ಧಿಷ್ಟತೆಯ ಬಗೆಗೆ ಶ್ರಮ ಪಟ್ಟಿದ್ದಾರೆ ಎನ್ನುವುದರಲ್ಲಿ ಎರಡನೆಯ ಮಾತಿಲ್ಲ.

'ಕವಿಚರಿತೆ'ಯ ಸಂಪುಟಗಳು ಕಾಲಕ್ರಮೇಣ ಅದರ ಅಭ್ಯಾಸಿಗಳಿಗೆ ದೊರಕದಂತಾಯಿತು. ಈ ಪರಿಸ್ಥಿತಿಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಆಸ್ಥಾನ ವಿದ್ವಾನ್, ಪದ್ಮಶ್ರೀ ಶ್ರೀ ಬ. ಶಿವಮೂರ್ತಿ ಶಾಸ್ತ್ರಿಗಳು ಗಮನಿಸಿ, ಪರಿಷತ್ತಿನ ಮೂಲಕವಾಗಿ ಅವುಗಳನ್ನು ಪುನಃ ಮುದ್ರಿಸಲು ತೊಡಗಿದರು. ಜೊತೆಗೆ ಪ್ರಸ್ತುತ ಕಾಲದವರೆಗಿನ 'ಶೋಧನೆ'ಗಳನ್ನು ಕ್ರೋಢೀಕರಣಗೊಳಿಸಿ 'ಅನುಬಂಧ' ರೂಪದಲ್ಲಿ ಸೂಚಿಸಲು ಸಮಿತಿಯೊಂದನ್ನು ರಚಿಸಿದರು.

ಇದರಂತೆ ಪ್ರಥಮ ಸಂಪುಟದ ಕ.ಸಾ.ಪ. ಆವೃತ್ತಿ ೧೯೬೧ರಲ್ಲಿ ಹೊರಬಂದಿತು. ಶಾಸನ ಕೃತಿಗಳಿಗೆ ಸಂಬಂಧಿಸಿದ ಶೋಧಗಳು ಅನುಬಂಧ ೧.೨ ರಲ್ಲಿ ಉಲ್ಲೇಖಗೊಂಡವು. ೨ನೆಯ ಸಂಪುಟದಲ್ಲಿ ಈ ಅನುಬಂಧವಿಲ್ಲ. ಮೂರರಲ್ಲಿ ೨-೩ ಸಂಪುಟಗಳಿಗೆ ಸಂಬಂಧಿಸಿದ ಅನುಬಂಧವಿದೆ.

---

* ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದಲ್ಲಿ ಆರ್. ನರಸಿಂಹಾಚಾರ್ಯರ ವಿಚಾರಸಂಕಿರಣದಲ್ಲಿ ಓದಿದ ಪ್ರಬಂಧ.

ಪ್ರಸ್ತುತ ಲೇಖನದ ಕಾಲಾವಧಿ ಕ್ರಿ.ಶ. ೧೯೦೦ರವರೆಗೆ. ಲೇಖನವನ್ನು ಸಾಮಗ್ರಿ ವಿಶ್ಲೇಷಣೆಗೆ ಸರಿಹೊಂದಿದಂತೆ ೫ ಶೀರ್ಷಿಕೆಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಅವುಗಳ ವಿವರ ಇಂತಿದೆ.

I) ಕೃತಿಕಾರರ ಕಾಲ ಬದಲಾವಣೆಗಳು, ಕತೃ - ಸಂಪುಟ / ಪುಟ - ಕವಿಚರಿತೆ, ಕಾಲ - ಬದಲಾದ ಕಾಲ, ಈ ಕ್ರಮದಲ್ಲಿದೆ.

II) (೧) ಕೃತಿಕಾರರ ಕಾಲಾನುಸಾರಿ ಅಕಾರಾದಿ ಹಾಗೂ ಹೆಚ್ಚಿನ ಕೃತಿಗಳು ಕತೃ - ಕಾಲ - ಕೃತಿಗಳ ಉಲ್ಲೇಖವಿದೆ.

(೨) ಕೃತಿಕಾರರ ಹೆಸರಿನ ಅಕಾರಾದಿ ಕತೃ - ಕವಿಚರಿತೆ ಸಂಪುಟ / ಪುಟ - ಕೃತಿಗಳು, ಈ ರೂಪದಲ್ಲಿದೆ.

III) (೧) ಲೇಖಕರ ಹೆಸರಿಗೆ ಸಂಬಂಧಿಸಿದ ತಿದ್ದುಪಡಿಗಳು ಕವಿಚರಿತೆ ನಮೂದು - ಸಂಪುಟ/ಪುಟ, ಪೂರ್ಣ ಹೆಸರು, ಈ ಕ್ರಮದಲ್ಲಿದೆ.

(೨) ಕೃತಿಯ ಹೆಸರಿಗೆ ಸಂಬಂಧಿಸಿದ ತಿದ್ದುಪಡಿ, ಕವಿಚರಿತೆಯ ಉಲ್ಲೇಖ - ಸಂಪುಟ/ಸಂಚಿಕೆ, ಕೃತಿಯ ಹೆಸರು.

IV) ಅಜ್ಞಾತ ಕೃತಿಗಳ ಕರ್ತೃ ನಿರ್ದೇಶ.

V) ಸಂಕೀರ್ಣ

೧) ಒಬ್ಬನೇ ಕವಿಯ ಕೃತಿಗಳ ಬೇರೆ ಬೇರೆ ಎಡೆಗಳಲ್ಲಿನ ಉಲ್ಲೇಖ.

೨) ಒಬ್ಬನೇ ಕರ್ತೃವಿನ ಭಿನ್ನ ಭಿನ್ನ ನಾಮಧೇಯ.

೩) ತಪ್ಪಾದ ಲೇಖಕರ ಹೆಸರುಗಳ ತಿದ್ದುಪಡಿ.

೪) ಕೆಲವು ಕೃತಿ / ಕರ್ತೃಗಳ ಬಗೆಗೆ ಪೂರಕ ಮಾಹಿತಿ.

ಕೃತಿಕಾರರ ಕಾಲಬದಲಾವಣೆಗಳು

ಕರ್ತೃ	ಸಂಪುಟ/ಪುಟ	ಕವಿಚರಿತೆ ಕಾಲ	ಬದಲಾದ ಕಾಲ
೧	೨	೩	೪
ಮಾದಿರಾಜಮುನಿ	I-೭೬	೧೦೨೫	೧೦೩೧
ದುರ್ಗಸಿಂಹ	I-೭೭	೧೧೦೦	೧೦೪೨
ಶಂಖವರ್ಮ	I-೧೦೯	೧೧೦೦	೧೦೪೨
ಹರಿಪಾಲ	I-೧೪೮-೪೯	೧೧೪೦	೧೦೪೨
ಹಂಸರಾಜ	I-೧೪೯	೧೧೪೦	೧೦೪೨
ನಾಗವರ್ಮII	I-೧೫೪	೧೧೪೫	೧೦೪೨
ಮೇಘಚಂದ್ರ	I-೧೬೪	೧೧೪೮	೧೧೦೦
ಕೊಂಡಗುಳಿ ಕೇಶಿರಾಜ	I-೧೮೬	೧೧೬೦	೧೧೦೭-೩೨
ಕವಿವಿಠ್ಠಲ	II-೩೩೧	೧೬೦೦	೧೧೩೦
ಎಚ್ಚರಿಕೆ ಮುಕ್ತಣ್ಣ	III-೧೦೨	೧೭೫೦	೧೧೬೦
ಬ್ರಹ್ಮಶಿವ	I-೧೨೮	೧೧೦೦	೧೧೮೯
ಉದಯಾದಿತ್ಯ	I-೧೭೯	೧೧೫೦	೧೨೦೦
ಹಂಪೆಯ ಹರಿಹರ	I-೨೫೩	೧೧೬೫	೧೨೦೦
ಕೆರೆಯ ಪದ್ಮರಸ	I-೨೭೪	೧೧೬೫	೧೨೦೦
ರಾಘವಾಂಕ	I-೨೪೬-೨೮೦	೧೧೬೫	೧೨೦೦
ತ್ರಿಭುವನ ತಾತ	I-೨೮೩	೧೧೬೫	೧೨೦೦
ಅತಿರಸಿಕ ಕರ್ಣಾಭರಣ ಬುಧವರ	I-೨೮೦	೧೧೬೫	೧೨೦೦
ಜಗದಾರಾಧ್ಯ ನಾಗಿದೇವ	I-೨೮೧	೧೧೬೫	೧೨೦೦
ದಾವರಸ	I-೨೮೨	೧೧೬೫	೧೨೦೦
ದೇವರಸ ಪಂಡಿತ	I-೨೮೧	೧೧೬೫	೧೨೦೦
ದೋರಾಂಬುಧಿಯ ರಾಮಣ್ಣ	I-೨೮೦	೧೧೬೫	೧೨೦೦
ಶರಣಕವಿ	I೨೮೨	೧೧೬೫	೧೨೦೦
ಶಿವದಾಸ	I-೨೮೨	೧೧೬೫	೧೨೦೦

ಹಂಪೆಯ ರಾಮಣ್ಣ	I-೨೮೧	೧೧೬೫	೧೨೦೦
ಹುಲಿಗೆರೆಯ ಮಾಯಿದೇವ ಪುರಾಣಭಟ್ಟ	I-೨೮೦	೧೧೬೫	೧೨೦೦
ಮುನಿಚಂದ್ರ	I-೪೦೧	೧೨೨೬	೧೨೧೫
ಕುಮಾರ ಪದ್ಮರಸ	I-೩೦೭	೧೧೮೦	೧೨೨೦
ಅರಿವಿನ ಮಾರಿತಂದೆ	I-೨೧೧	೧೧೬೦	೧೩೦೦
ಗಣದಾಸಿ ವೀರಣ್ಣ	I-೨೧೯	೧೧೬೦	೧೩೦೦
ವಾದಿಕುಮುದ ಚಂದ್ರ	I-೧೨೫	೧೧೦೦	೧೩೦೦
ಪಾಲ್ಕುರಿಕೆ ಸೋಮನಾಥ	I-೩೩೮	೧೧೯೫	೧೩೦೫
ಚಕ್ರಪಾಣಿ ರಂಗನಾಥ	I-೩೪೪	೧೧೯೫	೧೩೦೫
ಕೋಡೀಶ್ವರ	II-೧೪೫	೧೫೦೦	೧೪೪೫
ಪಾಯಣ್ಣ	III-೫೫	೧೭೪೮	೧೪೪೭
ಗುಬ್ಬಿಯಮಲ್ಲಣ್ಣ	II-೧೦೧	೧೪೭೫	೧೪೫೦
ಲಕ್ಕಣ್ಣದಂಡೇಶ	II-೫೩	೧೪೨೮	೧೪೫೦
ಉಜ್ಜೇನೀಶ	II-೨೫೯	೧೫೫೦	೧೪೬೦
ಶ್ರೀಧರಾಂಕ	II-೨೫೯	೧೫೫೦	೧೪೫೦
ವಾದಿರಾಜ	II-೩೦೧	೧೫೭೦	೧೪೮೧-೧೬೦೧
ಸಾಳ್ವ	II-೨೪೩	೧೫೫೦	೧೪೯೦
ಚಾಟುವಿಠಲನಾಥ	II-೨೨೨	೧೫೩೦	೧೫೦೦
ವಿರಕ್ತ ಷಡಕ್ಷರಯ್ಯ	III-೮೭	೧೭೫೦	೧೫೦೦
ವೀರಣಾರಾಧ್ಯ	II-೪೨೯	೧೬೫೦	೧೫೦೦
ಸರ್ವಜ್ಞ	II-೫೩೨	೧೭೦೦	೧೫೦೦
ಲಿಂಗಮಂತ್ರಿ	II-೨೧೫	೧೫೩೦	೧೫೦೫-೧೫
ಸೋಮರಾಜ	I-೩೯೩	೧೨೨೨	೧೫೨೨
ಕಾರುಗಹಳ್ಳಿ ಶಾಂತಯ್ಯ	II-೫೩೨	೧೭೦೦	೧೫೩೩
ವರ್ಧಮಾನ	II-೩೧೬	೧೬೦೦	೧೫೪೨
ಪಾಯಣ್ಣವ್ರತಿ	II-೩೩೨	೧೬೦೦	೧೫೫೦

ಪೆಮ್ಮಿಶೆಟ್ಟಿ	II-೩೩೨	೧೬೦೦	೧೫೫೦
ತೋಂಟದ ಸಿದ್ಧಲಿಂಗ	II-೪೨೭	೧೪೫೦	೧೫೬೧
ಕುಮಾರ ಚೆನ್ನಬಸವ	II-೨೫೪	೧೫೫೦	೧೫೬೯
ದೇವೋತ್ತಮ	II-೩೩೦	೧೬೦೦	೧೫೭೦
ಲಕ್ಷ್ಮೀಶ	II-೫೨೨	೧೭೦೦	೧೫೭೦
ಶಂಕರದೇವ	II-೩೬೧	೧೬೨೦	೧೫೭೦
ಶಿಶುಮಾಯಣ	I-೪೦೫	೧೨೩೨	೧೫೩೨
ಗುಮ್ಮಳಾಪುರದ ಸಿದ್ಧಲಿಂಗ	II-೧೨೭	೧೪೮೦	೧೫೮೦
ಇಮ್ಮಡಿ ತೋಂಟದಯ್ಯ	II-೨೨೬	೧೫೩೦	೧೫೮೦
ಸಂಪಾದನೆ ಚೆನ್ನಂಜೇದೇವ	II-೨೧೪	೧೫೩೦	೧೫೮೦
ಎಳಮಲೆ ಗುರುಶಾಂತದೇವ	II-೨೯೮	೧೫೬೫	೧೫೮೦
ನಂಜಣಾರ್ಯ	II-೪೩೮	೧೫೬೦	೧೫೮೦
ಗೋವಿಂದ	II-೩೯೪	೧೬೫೦	೧೫೮೦-೮೨
ರಾಘವೇಂದ್ರಸ್ವಾಮಿ	III-೩೮೫	೧೬೫೦	೧೫೮೨-೧೬೭೧
ಗುರುದೇವ	I-೪೬೭	೧೩೫೦	೧೫೯೨
ಮುಖಿಚೋಳು ಸಿದ್ದರಾಮ	III-೪೫೦	೧೬೫೬	೧೫೯೬
ಆನಂದಬಸವಲಿಂಗ ಶಿವಯೋಗಿ	II-೧೪೬	೧೫೦೦	೧೬೦೦
ಕವಿ ಮಾದಣ್ಣ	II-೪೩೩	೧೬೫೦	೧೬೦೦
ನಂದೀಶ ಕವಿ	II-೩೮೮	೧೬೫೦	೧೬೦೦
ಸಿದ್ಧ ನಂಜೇಶ	II-೩೭೯	೧೬೫೦	೧೬೦೦
ಮಹೀಪತಿ ಸ್ವಾಮಿ	III-೨೪೬	೧೬೫೦	೧೬೧೧-೮೧
ವಿರಕ್ತ ತೋಂಟದಾರ್ಯ	II-೨೮೧	೧೫೬೦	೧೬೧೬
ಸಚ್ಚೆ ಸಿದ್ಧಲಿಂಗಯ್ಯ	III-೪೫೨	೧೬೬೫	೧೭೦೪
ದೊಡ್ಡಯ್ಯ	II-೨೫೪	೧೫೫೦	೧೬೨೫
ಕಾಶೀಕಾಂಡ ಚೆನ್ನವೀರ	II-೧೬೯	೧೫೦೦	೧೬೫೦
ಅವಧೂತ ಶಿವಯೋಗಿ	III-೯೭	೧೭೫೦	೧೬೬೦

ಅಂಬುಲಿಗೆ ಚೆನ್ನಮಲ್ಲೇಶ	II-೬೪೩	೧೭೦೦	೧೬೭೦
ಉತ್ತರದೇಶದ ಬಸವಲಿಂಗ	II-೫೨೧	೧೭೦೦	೧೬೩೯-೮೦
ಕಂಪಿನಂಜಯ್ಯ	II-೨೯೪	೧೫೬೦	೧೭೦೦
ಚೆನ್ನಪ್ಪ	III-೮೫	೧೭೫೦	೧೭೦೦
ಪರ್ವತ ಶಿವಯೋಗಿ	IIU-೩೯೭	೧೬೫೦	೧೭೦೦
ವೀರಣಾರ್ಯ	II-೪೩೩	೧೬೫೦	೧೭೦೦
ಮುರಿಗೆ ಶಾಂತವೀರ	II-೨೧೨-೨೯೦	೧೫೩೦-೬೦	೧೭೦೩
ಮಹಾಂತಸ್ವಾಮಿ	II-೨೯೩	೧೫೬೦	೧೭೧೪
ಇಮ್ಮಡಿ ಗುರುಸಿದ್ಧ	III-೨೫೧	೧೭೨೦	೧೭೨೯
ಸಿದ್ಧಲಿಂಗ ಶಿವಯೋಗಿ	II-೩೨೨	೧೬೦೦	೧೭೩೦
ಶಾಂತಕೀರ್ತಿಮುನಿ	II-೨೦೦	೧೫೧೯	೧೭೩೧
ಬೆಂಗಳೂರು ಮುದ್ದುವೀರಸ್ವಾಮಿ	II-೫೩೧	೧೭೦೦	೧೭೩೮
ಶಾಂತಮಲ್ಲ	II-೩೯೦	೧೬೫೦	೧೭೪೦
ಪ. ಸಿದ್ಧಲಿಂಗಸ್ವಾಮಿ	II-೫೩೨	೧೭೦೦	೧೭೪೧
ವೆಂಕಟಶರ್ಮ	II-೩೬೪	೧೬೨೨	೧೭೪೨
ಕಸ್ತೂರಿಸಿದ್ಧ	III-೧೫೭	೧೮೦೦	೧೭೫೦
ರುದ್ರಮುನಿ	III-೨೪೫	೧೬೦೦	೧೫೫೦-೧೮೦೮
ರಾಯಣ್ಣ	III-೪೫೫	೧೭೨೦	೧೭೫೫
ಸಾನಂದ ಶಿವಯೋಗಿ	II-೧೨೮	೧೪೮೦	೧೭೯೦
ಹಟ್ಟಿಂಗಡಿ ರಾಮಭಟ್ಟ	III-೩೯೨	೧೯.ಶ.	೧೭೯೪-೧೮೫೮
ಸರ್ಪಣ್ಣ	II-೫೬೦	೧೭೬೦	೧೭೯೫-೧೮೩೯
ಜಿ.ಎಚ್. ವೈಗಲ್	III-೨೪೦	೧೯.ಶ.	೧೮೦೦-೧೮೯೦
ಚೆನ್ನಪ್ಪ	II-೪೪೦	೧೬೫೦	೧೮೦೫
ಮೂಲಿಕೆ ವೆಂಕಣ್ಣ	III-೩೯೨	೧೯ ಶ.	೧೮೦೫-೬೫
ಹ. ಮೋಗ್ಲಿಂಗ್	III-೨೪೦	೧೯ ಶ.	೧೮೧೦-೧೮೮೧
ಶಿಶುನಾಳ ಶರೀಫ್	III-೪೬೧	೧೯ ಶ.	೧೮೧೯-೧೮೮೯

ವರ್ತ್	III-೨೪೦	೧೯.ಶ.	೧೮೨೦-೧೮೬೯
ಬಾಲಲೀಲಾ ಮಹಾಂತ ಶಿವಯೋಗಿ	III-೮೫೭	೧೮೨೦	೧೮೨೩-೫೩
ಘನಮಠದಾರ್ಯ	III-೨೫೯	೧೮೩೦	೧೮೨೬/೨೯-೧೮೮೪
ನರೇಗಲ್ಲು ಶಿವಬಸಪ್ಪ ಶಾಸ್ತ್ರಿ	III-೪೬೧	೧೮೪೦	೧೮೨೯/೩೦-೧೯೦೯
ಮೂಲಿಕೆ ರಾಮಕೃಷ್ಣಕವಿ	III-೩೯೫	೧೯.ಶ.	೧೮೩೦-೧೯೦೯
ಶಿವರಾಮ	III-೧೧೯	೧೭೬೫	೧೮೩೦-೪೦
ಫೆ. ಝೀಗ್ಲರ್	III-೨೪೦	೧೯.ಶ.	೧೮೨೩-೧೯೦೬
ಚನ್ನಬಸಪ್ಪ ಬಸವಲಿಂಗಪ್ಪ	III - ೨೩೩	೧೯.ಶ.	೧೮೩೩
ವೆಂಕಟರಂಗೋಕಟ್ಟಿ	III - ೨೨೪	೧೯.ಶ.	೧೮೩೩ -೧೯೦೯
ಶಂಕರಾನಂದಯೋಗಿ	III - ೨೫೮	೧೮೦೦	೧೮೩೩ - ೧೯೧೩
ನಂಜನಗೂಡು ಸುಬ್ಬಾಶಾಸ್ತ್ರಿ	III - ೨೨೦	೧೯.ಶ.	೧೮೩೪ - ೧೯೦೬
ಚಂದ್ರಸಾಗರ ವರ್ಣಿ	III - ೧೬೪	೧೮೦೦	೧೮೩೫
ಬೇಗೂರು ಮಲ್ಲಪ್ಪ	III-೪೬೩	೧೯.ಶ.	೧೮೩೫-೧೯೦೭
ಬಿ.ಎಲ್. ರೈಸ್	III-೪೭೦	೧೯.ಶ.	೧೮೩೭-೧೯೨೭
ಶಾಮರಾವ್ ವಿಠಲ ಕಾಯಕಿಣಿ	III-೨೩೨	೧೯.ಶ.	೧೮೪೧-೧೯೦೫
ಸಜೀಪ ರಾಮಕೃಷ್ಣರಾಯ	III-೨೩೩	೧೯.ಶ.	೧೮೪೩-೧೯೧೫
ಭಾರಧ್ವಾಜ ಶಿವರಾವ	III-೩೯೫	೧೯.ಶ.	೧೮೪೩-೧೯೨೩
ಗುಲವಾಡಿ ವೆಂಕಟರಾವ್	III-೩೯೫	೧೯.ಶ.	೧೮೪೪-೧೯೧೩
ಬಿ. ವೆಂಕಟಾಚಾರ್ಯ	III-೨೨೩	೧೯.ಶ.	೧೮೫೪-೧೯೧೪
ಡಿ. ಶ್ರೀನಿವಾಸ ರಾಮಚಂದ್ರ ಸನದಿ	III-೪೬೬	೧೯.ಶ.	೧೮೪೬-೧೯೦೦
ನಂಜಯ್ಯ	III-೨೦೬	೧೯.ಶ.	೧೮೪೭-೧೯೦೬
ಎಂ.ಎಲ್. ಶ್ರೀಕಂಠೇಗೌಡ	III- ೪೬೬	೧೯.ಶ.	೧೮೫೦-೧೯೨೬
ಬಿ. ಸೋಮನಾಥಯ್ಯ	III-೨೨೪	೧೯.ಶ.	೧೮೫೪-೧೯೧೪
ಶಾಂತಕವಿ	III-೨೨೧	೧೯.ಶ.	೧೮೫೬-೧೯೨೦
ಗರಣಿ ಕೃಷ್ಣಾಚಾರ್ಯ	III-೨೨೧	೧೯.ಶ.	೧೮೫೭-೧೯೧೮
ಶಾಲಿ ಚೆನ್ನಬಸವ	III-೧೬೩	೧೮೦೦	೧೮೫೮

ಎಸ್.ಜಿ. ನರಸಿಂಹಾಚಾರ್ಯ	III-೨೧೮	೧೯.ಶ.	೧೮೬೨-೧೯೦೭
ಮಹಾದೇವ	III-೨೧೦	೧೮೭೦	೧೮೬೩
ಕುಂಡಲ ಗಿರಿಯಾಚಾರ್ಯ	III-೨೨೪	೧೯.ಶ.	೧೮೬೫-೧೯೦೪
ಗಿರಿಭಟ್ಟರ ತಮ್ಮಯ್ಯ	III-೪೬೮	೧೯.ಶ.	೧೮೬೫-೧೯೨೦
ಕೆರೂರು ವಾಸುದೇವಾಚಾರ್ಯ	III-೨೨೧	೧೯.ಶ.	೧೮೬೬-೧೯೨೧
ಮೋಟಗಾನಹಳ್ಳಿ ರಾಮಶೇಷಶಾಸ್ತ್ರೀ	III-೪೬೪	೧೯.ಶ.	೧೮೬೭-೧೯೩೪
ಪದ್ಮನಾಭ ಮಹಾರಾಜ	III-೨೧೩	೧೮೮೦	೧೮೬೮-೧೯೧೦
ಪಾರ್ವತಿಯ ಹಸೆಗೆ ಕರೆದ ಸೋಬಾನೆ ಕರ್ತೃ	III-೩೨೪	೧೮೨೫	೧೮೬೯
ಮುದ್ದಣ್ಣ (ನಂ. ಲಕ್ಷ್ಮೀನಾರಾಯಣಯ್ಯ)	III-೮೪	೧೭೫೦	೧೮೬೯-೧೯೦೧
ಎನ್.ಆರ್. ಕರಿಬಸವಶಾಸ್ತ್ರೀ	III-೨೩೫	೧೯.ಶ.	೧೮೭೨-೧೯೨೩
ಕಿತ್ತೂರ ಬಸವಾರ್ಯ	III-೪೬೯	೧೯.ಶ.	೧೮೩೬-೧೯೨೧
ಪಂಡಿತ ಪ್ರಭುವಪ್ಪ	III-೪೬೯	೧೯.ಶ.	೧೮೮೪-೧೯೨೦
ಬೂದಿಹಾಳ್ ಬಸವಾರ್ಯ	III-೪೬೯	೧೯.ಶ.	೧೮೮೮- ?
ಶ್ರೀಶ ಪ್ರಾಣೇಶ ವಿಠಲ	III-೪೬೨	೧೮೯೦	೧೮೯೨
ಹನುಮಾನ್ ದಾಸ	III-೩೯೪	೧೯.ಶ.	೧೮೯೩-೧೯೨೧
ತುಳಸೀಬಾಯಿ	III-೩೯೩	೧೯.ಶ.	೧೮೯೮-೧೯೧೮
ಇಡಗೂರು ರುದ್ರಕವಿ	III-೨೨೬	೧೯.ಶ.	೧೮೮೭
ಪಿ. ವೇದಮಿತ್ರ	III-೪೬೪	೧೯.ಶ.	೧೯೦೯
ಬಿ. ಕೃಷ್ಣಪ್ಪ	III-೪೭೦	೧೯.ಶ.	೧೯೨೭
ಕೆರೋಡೆ ಸುಬ್ಬರಾಯ	III-೪೭೦	೧೯.ಶ.	೧೯೨೮

II

೧) ಕೃತಿಕಾರರ ಕಾಲಾನುಸಾರಿ ಅಕಾರಾದಿ ಹಾಗೂ ಹೆಚ್ಚಿನ ಕೃತಿಗಳು

- ಅಸಗ (೮೫೩) : ಕರ್ಣಾಟ ಕುಮಾರ ಸಂಭವ.
- ನಾಗವರ್ಮ II (೧೦೪೨) : ಅಭಿಧಾನ ರತ್ನಮಾಲಾ ಟೀಕೆ, ವರ್ಧಮಾನ ಪುರಾಣ (ಚಂ).
- ನಾಗಚಂದ್ರ (೧೧೦೦) : ಕಾಮನ ಕಾಳಗ (ಭಾ.ಷ).
- ಕೊಂಡಗುಳಿ ಕೇಶಿರಾಜ (೧೧೦೭ - ೧೦೩೨) : ಅಳಲಾಷ್ಟಕ (ಕಂ.) ಕೇಶಿರಾಜ ಡಣಾಯಕರ ಕಂದ, ನವರತ್ನಮಾಲೆ (ವೃ), ಲಿಂಗಸ್ತೋತ್ರದ ಕಂದಗಳು.
- ಚೆನ್ನಬಸವ (೧೧೬೦) : ವಚನೈಕೋತ್ತರ ಶತಸ್ಥಲ.
- ಲಿಂಗಮ್ಮ (೧೧೬೦) : ಮಂತ್ರಗೋಪ್ಯ, ಸ್ವರವಚನ.
- ಸಿದ್ಧರಾಮ (೧೧೬೦) : ಶಿವಯೋಗ ಷಟ್ಸ್ಥಲಾಭರಣ.
- ಬಾಲಚಂದ್ರ (೧೧೭೦) : ಅಮೃತಾಶೀತಿ (ಟೀ), ಮೋಕ್ಷಸಾಹುಡ (ಟೀ), ಸಮಯಸಾರ (ಟೀ).
- ಬಂಧುವರ್ಮ (೧೨೦೦) : ಸತೀಧರ್ಮಸಾರ (ಕಂ).
- ಹಂಪೆಯ ಹರಿಹರ (೧೨೦೦) : ಅಕ್ಷರಾಂಕ ಗದ್ಯ, ಆನತ ಕಲ್ಪಭೂಜನಂ ಅಷ್ಟಕ (ವೃ), ವಿರೂಪಾಕ್ಷಾಷ್ಟಕ (ವೃ), ಶಿವಕೀರ್ತನೆ ರಗಳೆ, ಹರೀಶ್ವರ ದೇವರ ಕಂದ.
- ತ್ರಿಭುವನತಾತ (೧೨೦೦) : ಅಮ್ಮವ್ವೆಯ ರಗಳೆ, ಚೋಳಿಯಕ್ಕನ ರಗಳೆ, ಜೇಡರ ದಾಸಿಮಯ್ಯನ ರಗಳೆ, ಪಗಲ್ವೊಳನ ರಗಳೆ, ಸಿರಿಯಾಳ ಸೆಟ್ಟಿಯ ರಗಳೆ.
- ಬಾಳಚಂದ್ರ ಕವಿ ಕಂದರ್ಪ (೧೨೦೪) : ಅಧ್ಯಾತ್ಮ ಪದಾಷ್ಟಕ - [(ವೃ)].
- ಪಾಲ್ಕುರಿಕೆ ಸೋಮನಾಥ (೧೩೦೫) : ವೀರಶೈವಾಚಾರ ಶಿಖಾಮಣಿ (ಟೀ).
- ಚಕ್ರಪಾಣಿ ರಂಗನಾಥ (೧೩೦೫) : *ಪಂಚರತ್ನ.

---

* ಈ ಚಿನ್ಹೆಯ ಕೃತಿಗಳು ಸಂಸ್ಕೃತದಲ್ಲಿವೆ.

ಬಾಹುಬಲಿ ಪಂಡಿತ (೧೩೫೨) : *ಗುಮ್ಮಟನಾಥ ಚರಿತ್ರೆ.

ಕಲ್ಯಾಣ ಕೀರ್ತಿ (೧೪೩೯) : ಚಿನ್ಮಯ ಚಿಂತಾಮಣಿ ; ಫಣಿಕುಮಾರ ಚರಿತೆ (ಭಾ.ಷ) *ಜಿನಯಜ್ಞ ಫಲೋದಯ, *ಯಶೋಧರ ಚರಿತೆ.

ಕರಸ್ಥಲದ ನಾಗಿದೇವ (೧೪೩೦) : ಅಕ್ಷರದ ಚೌಪದ, ಪರಮ ವಿರಕ್ತನ ಐಕ್ಯಸ್ಥಲ, ಲಿಂಗ ನಿಜಸ್ಥಲದ ತ್ರಿವಿಧಿ, ಲಿಂಗ ನಿಜಸ್ಥಲದ ವಚನ (ತ್ರಿ), ಶಾಂತಶತಕ (ಕಂ), ಶಿವಜ್ಞಾನಾಂಜನ ರತ್ನಮಾಲೆ (ತ್ರಿ).

ಜಕ್ಕಣಾರ್ಯ (೧೪೩೦) : *ಏಕೋತ್ತರ ಶತಸ್ಥಲ.

ಕುಮಾರವ್ಯಾಸ (೧೪೩೦) ; ಭವನ ಭಿಕ್ಷಾಟಣ (ವಾ.ಷ) ಸೂತಭಾರತ (=ಸ್ವರ್ಗಾರೋಹಣ ಪರ್ವ) (ಭಾ.ಷ).

ವಿಜಯಣ್ಣ (೧೪೪೮) ; ಸಮವಸರಣದ ವಿಸ್ತೀರ್ಣ ವರ್ಣನೆ (ಭಾ.ಷ.).

ಗುಬ್ಬಿಯ ಮಲ್ಲಣ್ಣ (೧೪೫೦) ; ಏಕಾಕ್ಷರ ನಿಘಂಟು (ವರರುಚಿ) ವೃತ್ತಿ, ಕಾಲಜ್ಞಾನ ತಂತ್ರ ಟೀಕೆ, ದಿವ್ಯಾಗಮಸಾರದಲ್ಲಿನ ಪಂಚಮ ಪಟಲದ ಟೀಕೆ, ಯೋಗ ಷಟ್ಸ್ಥಲ ಟೀಕೆ.

ಉಜ್ಜೇನೀಶ (೧೪೬೦) ; ಅನುಭವ ಸೂತ್ರ ಟೀಕೆ.

ಆದಿಯಪ್ಪ (೧೪೬೫) ; ಅನಂತವ್ರತ ಚರಿತೆ.

ತೆರಕಣಾಂಬಿ ಬೊಮ್ಮರಸ (೧೪೮೫) ; ರತ್ನಕರಂಡಕ ಲಿಪಿಕಾರ.

ಕವಿಲಿಂಗ (೧೪೯೦) ; ನಂಜುಂಡೇಶ್ವರನ ಜಾತ್ರೆಯ ತಾರಾವಳಿ, ಲಿಂಗಾಂಗ ಸಮರಸದ ಪಾರಿಜಾತ.

ಸಾಳ್ವ (೧೪೯೦) ; ಅಷ್ಟಮಹಾಪ್ರಾತಿಹಾರ್ಯಾಷ್ಟಕ, ಬೆಳ್ಗೊಳೇಶ್ವರಾಷ್ಟಕ.

ನಿಜಗುಣ ಶಿವಯೋಗಿ (೧೫೦೦) ; ಅನುಭವ ಮುಕುರಕ್ಕೆ ಸ್ವರೂಪ ಸಿದ್ಧ ಟೀಕೆ, ತರ್ಕ ಚಿಂತಾಮಣಿ, ದರ್ಶನ ಸಾರಥಿ.

ವರ್ಧಮಾನ (೧೫೪೭) : ದಶಭಕ್ತ್ಯಾದಿ ಶಾಸ್ತ್ರ.

---

* ಈ ಚಿನ್ಹೆಯ ಕೃತಿಗಳು ಸಂಸ್ಕೃತದಲ್ಲಿವೆ.

- ಲಿಂಗ (೧೫೫೦) ; ತ್ರಿಪುರ ದಹನ ಸಾಂಗತ್ಯ.
- ರತ್ನಾಕರವರ್ಣಿ (೧೫೫೭) ; ಗುರುವಚನಸಾರ.
- ಶ್ರುತಕೀರ್ತಿ (೧೫೬೭) : ಯಶೋಧರ ಚರಿತೆ (ಸಾಂ).
- ಲಕ್ಷ್ಮೀಶ (೧೫೭೦) : ಕೀರ್ತನೆಗಳು, ಪುರುಷಾಮೃಗ ಪ್ರಸಂಗ (ಭಾ.ಷ).
- ವಾದಿರಾಜ (೧೫೭೦) ; ತತ್ವಸಾರಾಮೃತ.
- ಶಂಕರದೇವ (೧೫೭೦) : ಶಂಕರ ಗದ್ಯ, ಶಂಕರ ಶತಕ (ವೃ), ಶಂಕರೇಶ ಶತಕ (ವೃ), ಸ್ವರ ವಚನಗಳು, ರಗಳೆಗಳು [ವಿವರಗಳಿಗೆ ಕವಿ ಶಂಕರದೇವ ಕೃತ ಪ್ರಸನ್ನ ಶಂಕರಲಿಂಗ ರಗಳೆಗಳು (ಸಂ) ಎಂ.ಎಸ್. ಸುಂಕಾಪುರ, ೧೯೭೬, ಧಾರವಾಡ, ನೋಡಿ].
- ಅದೃಶ್ಯ (೧೫೮೦) : ಮಳೆಯ ಮಲ್ಲೇಶನ ಪುರಾಣ (ಅಲಭ್ಯ), ಮುಗ್ಧ ಸಂಗಾರ್ಯರ ಪುರಾಣ (ಅಲಭ್ಯ).
- ಇಮ್ಮಡಿ ತೋಂಟದಾರ್ಯ (೧೫೮೦) : ಕನ್ನಡ ವಿಕ್ರಮಾರ್ಕ ಚರಿತೆ (ಭಾ.ಷ).
- ಸಂಪಾದನೆ ಚೆನ್ನಂಜೇದೇವ (೧೫೮೦) : ಬವಸ್ತೋತ್ರದ ವೃತ್ತ (ಸಂಕ), ಶಂಕರ ದೇವರ ಕಂದ (ಸಂಕ).
- ಎಳಮಲೆ ಗುರು ಶಾಂತದೇವ (೧೫೮೦) : ಮುಕುಳದೇವರ ಕಂದ (ಸಂಕ), ಶಂಕರದೇವರ ಕಂದ (ಸಂಕ).
- ಗುಮ್ಮಳಾಪುರದ ಸಿದ್ಧಲಿಂಗ (೧೫೮೦) : ಶೂನ್ಯ ಸಂಪಾದನೆ (ಸಂಕ).
- ನಂಜಣಾರ್ಯ (ಹರದನ ಹಳ್ಳಿ) (೧೫೮೦) : ಏಕೋರಾಮೇಶ್ವರ ಪುರಾಣ (ವಾ.ಷ.), ನೀತಿರತ್ನಾಭರಣ (ವಾ.ಷ.), ಶಾಂತಿರತ್ನಾಭರಣ (ವಾ.ಷ.), ಶ್ರೀಧರಾಂಕನ ವೀರ ಮಾಹೇಶ್ವರಾಚಾರ ಸಂಗ್ರಹ ಟೀಕಾ ಲಿಪಿಕಾರ.
- ಮಲ್ಲಿಕಾರ್ಜುನ (೧೫೯೩), ಅಕ್ಷರಾಂಕನ ಗದ್ಯ (ಪಾ.ಸೋಮ) ವ್ಯಾಖ್ಯಾನ, ಅಮೃತೇಶ್ವರ ಭಾಷ್ಯ (ಸಪ್ಪೆಯಾರ್ಯ) ಟೀಕೆ, ಆದಿತ್ಯ ಸ್ತೋತ್ರದ ವ್ಯಾಖ್ಯಾನ, ತೋಂಟದ ರಾಯನ ಸಾಂಗತ್ಯ, ಪಂಚಶ್ಲೋಕ ವ್ಯಾಖ್ಯಾನ, ಬ್ರಹ್ಮತಕ್ಯ, ಸ್ತವ ವ್ಯಾಖ್ಯಾನ, ಭಾರತ ಸಾರ ವ್ಯಾಖ್ಯಾನ, ರಾಮಾಯಣಸಾರ ವ್ಯಾಖ್ಯಾನ, ಶಿವಕರ್ಣಾಮೃತ ವ್ಯಾಖ್ಯಾನ,* ಶಿವತತ್ವ ವಿವೇಕ.

ಮುಖಬೋಳು ಸಿದ್ಧರಾಮ (೧... ...ಪ್ಪನ ಕಂದ.

ಪದ್ಮರಸ (೧೫೯೯) : ಭವ್ಯಾಬ್ಜ... ...ಪ್ರತಿಷ್ಠಾತಿಲಕ' (ಶ. ೧೫೧೫) ಲಿಪಿಕಾರ.

ಸಿದ್ಧನಂಜೇಶ (೧೬೦೦) : ಅದ್ಭುತ ಕಾಲಜ್ಞಾನವು (ತ್ರಿ), ದೇವಿಯ ಸ್ತೋತ್ರದ ತಾರಾವಳಿ, ನೀಲಾಂಬಿಕೆಯ ತತ್ವ ಮಾಲಾಸ್ತೋತ್ರ (ವಾ.ಷ), ಮುತ್ತಿನ ಕಂತೆ ದೇವರ ವಚನ (ಭಾ.ಷ.)*, ಶಿವ ಸಿದ್ಧಾಂತ ಚಂದ್ರಿಕೆ , ಶ್ರೀ ಜಗದ್ಗುರು ವಿಶ್ವಕರ್ಣ ವಿಜಯ ನಕ್ಷತ್ರಮಾಲಿಕಾ.

ಸಂಪಾದನೆ ಸಿದ್ಧ ವೀರಣ್ಣೊಡೆಯ (೧೬೦೦), ಅಷ್ಟಾವರಣ ಸ್ತೋತ್ರದ ತ್ರಿವಿಧಿ (ಸಂಕ), ಜಂಗಮ ಮಹಾತ್ಮ್ಯ ಸ್ಥಲ (ಟೀ), ಬಸವ ಸ್ತೋತ್ರದ ಕಂದ (ಸಂಕ), ಬಸವ ಸ್ತೋತ್ರದ ತ್ರಿವಿಧಿ (ಸಂಕ), ಮಿಶ್ರ ಸ್ತೋತ್ರದ ತ್ರಿವಿಧಿ (ಸಂಕ), ಮಿಶ್ರ ಸ್ತೋತ್ರದ ಷಟ್ಪದಿ (ಸಂಕ), ಲಿಂಗ ಸ್ತೋತ್ರದ ಕಂದ (ಸಂಕ), ಶಂಕರದೇವರ ಕಂದ (ಸಂಕ).

ವಿರಕ್ತ ತೋಂಟದಾರ್ಯ (೧೬೧೬) : ತೋಂಟದಾರ್ಯ ರಗಳೆ, ದೇವಿಯರ ಸಹಸ್ರ ನಾಮ (ಭಾ.ಷ), ನೂತನ ಪುರಾತನರ ರಗಳೆ, ನಿರಂಜನ ಲಿಂಗಶತಕ (ಕಂ), ನಿರಂಜನ ಶತಕಂ (ವೃ), ಶಿವ ಸಹಸ್ರನಾಮ (ವಾ.ಷ), ಶೈವ ಸಂಜೀವಿನಿ ಟೀಕೆ, ಸರ್ವಮಂಗಳೆ ಶತಕ (ವೃ), ಸ್ವರ ವಚನಗಳು, ಕೈವಲ್ಯಸಾರ,* ಬಸವೇಶ್ವರನ ಸಹಸ್ರ ನಾಮಾವಳಿ, ಷಟ್ಸ್ಥಲ ಜ್ಞಾನ ಚಿಂತಾಮಣಿ.

ಸೋಸಲೆ ರೇವಣಾರ್ಯ (೧೬೯೩) : ಅಕ್ಷರ ಮಾಲಿಕಾ ಗದ್ಯ ಟೀಕೆ, ಅಕ್ಷರಾಂಕ ಗದ್ಯ ಟೀಕೆ, ಪರಮ ಮುಕ್ತಿ ಪ್ರದೀಪಿಕೆ, ಸಟೀಕಾ ಷಟ್‌ಸ್ಥಲ ಬ್ರಹ್ಮದೀಪಿಕಾ, ಸ್ವರ ವಚನ.

ತಿರುಮಲಾರ್ಯ (೧೬೪೫-೧೭೦೬), ಭಾಗವಂತಿಕೆ ಪದ, ಸಂಸ್ಕೃತ ಕೃತಿಗಳಿಗೆ ಎಂ.ಎ. ಆರ್., ಪು. ೧೯, ನೋಡಿ.

ಕಾಶೀಕಾಂಡ ಚೆನ್ನವೀರ (೧೬೫೦) : ಕಾಶ ಕೃತ್ಸ್ನ ಶಬ್ದಕಲಾಪ ಧಾತುಪಾಠ, ಜಂಗಮ ತಾರಾವಳಿ.

ರಾಚವಟ್ಟೇಶ (೧೫೬೦) : ಅಲ್ಲಮ ಪ್ರಭು ಸ್ತೋತ್ರದ ಷಟ್ಪದಿ, ಪ್ರಭುದೇವರ ತ್ರಿವಿಧಿ.

- ರಾಂಪವೀರದೇಶಿಕ (೧೬೫೦) : ಅಮ್ಮವ್ವೆ ಚರಿತೆ, ಅಂಬಿಕಾ ಸ್ತೋತ್ರ, ನಂಜುಂಡ ಚರಿತ್ರೆ, ಭಿಲ್ಲಮೇಶ್ವರ ಕಾವ್ಯ, ಮುಗ್ಧರ ಚರಿತ್ರೆ, ವಿನಾಶ ಸೂಚನೆ.
- ಷಡಕ್ಷರಿ ದೇವ (೧೬೫೦-೭೭) : ಗುರು ರಗಳೆ, *ಶಿವ ಪೂಜಾ ವಿಧಾನ (೩೫ ವೃ).
- ಅವಧೂತ ಶಿವಯೋಗಿ (೧೬೬೦) : ಅದ್ವೈತ ಸುಧಾರಸ.
- ಅಂಬುಲಿಗೆ ಚೆನ್ನಮಲ್ಲೇಶ (೧೬೭೦) : ಗಂಗೇಗೌರೀ ಚೌಪದನ, ಜಂಗಮಲಿಂಗ ಶತಕ, ತಿರುನೀಲ ಕಂಠ ಭಾಮಿನಿ, ಶಿಬಿರಾಯ ಸಾಂಗತ್ಯ, ಶ್ವೇತನ ಪಾರ್ಥಿಕ, ಸಿರಿಯಾಳ ಸೆಟ್ಟಿ ವಾರ್ಧಿಕ, ಹರಳಯ್ಯನ ವಾದಖಾಂಡ ಚೌಪದನ.
- ಚಿದಾನಂದ (೧೬೭೫) : ಚಿದಾನಂದಾನುಭವಸಾರ.
- ಉತ್ತರದೇಶದ ಬಸವಲಿಂಗ (೧೬೭೮-೭೯) ತಾತ್ಪರ್ಯ ಸಂಗ್ರಹ.
- ಗೋವಿಂದ (೧೬೮೧ / ೮೨) : ಚಿತ್ರಭಾರತ (ವಾ.ಷ.).
- ಸಂಪಾದನೆ ಪರ್ವತೇಶ್ವರ (೧೬೯೮) : ಅನುಭವ ಜ್ಞಾನ ಸಾರಾಮೃತ ಸಂಪಾದನಾ ಸ್ತೋತ್ರ (ಸಂಕ).
- ಮುರಿಗೆ ಶಾಂತವೀರ (೧೭೦೩) : ಕಟ್ಟಿಗೆಯ ತಾರಾವಳಿ, ಮನುರಾಜೇಂದ್ರನ ತಾರಾವಳಿ, ಷಟ್ಸ್ಥಲ ಸ್ತೋತ್ರ.
- ಕಂಪಿನಂಜಯ್ಯ (೧೭೦೦) ಜ್ಯೋತಿಮಂಗಳಾಷ್ಟಕ (ವೃ).
- ಪರ್ವತ ಶಿವಯೋಗಿ (೧೭೦೦) : ಏಕೋತ್ತರ ಶತಸ್ಥಲೀ ಟೀಕೆ, ಗುರು ಸ್ತೋತ್ರ ತ್ರಿಪದಿ (ಸಂಗಮೇಶ್ವರ) ಟೀಕೆ, ತ್ರಿವಿಧ ಮೂರರ ಸಾರದ ಟೀಕೆ, ಮರುಳದೇವರ ಕಂದದ ಟೀಕೆ, ವಚನಗಳು (೮೦).
- ಶಾಂತವೀರೇಶ್ವರ (೧೭೦೩) : ಷಟ್ಸ್ಥಲ ಸ್ತೋತ್ರ ಟೀಕೆ, ಮಹಾಲಿಂಗ ರಂಗನ ಅನುಭವಾಮೃತ, ಲಿಪಿಕಾರ.
- ಬಸವಪ್ಪನಾಯಕ (೧೭೦೦) : ಕಾಳಿಕಾಖಾಂಡ (ವಾ.ಷ.), *ಶಿವತತ್ವರತ್ನಾಕರ, *ಸುಭಾಷಿತ ಸುರದ್ರುಮ.
- ವಿಜಯ ವೆಂಕಟರಮಣ (೧೭೦೦) : ಆಂಜನೇಯ ದಂಡಕ, ಭೋಜನ ರಗಳೆ, ರಾಜಯೋಗ, ವೈದ್ಯ ಸಿಂಧು.

ಹುಬ್ಬಳ್ಳಿಯ ಸಂಗಯ್ಯ (೧೭೦೦) : ಜ್ಞಾನೋದಯ ಷಟ್ಪದಿ (ಸಂಕ).

ಅಪ್ಪಯ್ಯ (೧೭೦೫) : ಸಂಕ್ಷಿಪ್ತ ರಾಮಾಯಣ.

ಮಹಾಂತಸ್ವಾಮಿ (ಕೂಡಲಿ) : ಕಲಿ ಗಣನಾಥನ ಸ್ತೋತ್ರ, ಛಂದಸ್ಸಿನ ಗಣಸೆಯ ವಾರ್ಧಕ, ಶಿವ ಗಣ ಸಹಸ್ರ ತಾರಾವಳಿ, ಶಿವದೀಕ್ಷಾ ವಿವೇಕ ಸಿಂಧು ಚಿಂತಾಮಣಿ.

ಸ್ವಾದಿ ಸದಾಶಿವರಾಜ (೧೬೮೨-೧೭೧೮), ಉಳುಮೆಯ ಮಹಾತ್ಮೆ (ಕಂ+ವಾ.ಷ+ವೃ), ಕಲಹಕೇತಯ್ಯಗಳ ಲಕ್ಷಣ (ಗ+ಕಂ), ಖಡ್ಗ ಪ್ರಬಂಧ, ಚಾವಡಿ (ಹಾ), ಜೋಗುಳ ಪದ, ತ್ರಿವಿಧಿ, ನವರಸ ಜಕ್ಕಿಣಿ (ಹಾ), ನಂದೀಶ್ವರ ಅಷ್ಟಕ [ಈರಾಧೀಶ್ವರ, ವೃ], ನಂದೀಶ್ವರ ಅಷ್ಟಕ [ವನವನ್ನಿತ್ತು... ವೃ+ಶ್ಲೋ], ಪಂಚವಿಂಶತಿ ಲೀಲೆಯ ಮಂಗಳಾಷ್ಟಕ (ವೃ), ಪಂಚವಿಂಶತಿ ಲೀಲೆಯ ಮೂಲ ಪದ್ಯ [ಕಂ+ವೃ], ಪಂಚವಿಂಶತಿ ಲೀಲೆಯ ರಗಳೆ, ಪ್ರಭುಲಿಂಗಲೀಲೆಯ ಚಾವಡಿ, ಭಿಕ್ಷಾಟನ ಲೀಲೆಯ ಕಂದ, ಮಹಾಚತುರಂಗಲಕ್ಷಣ, ರಾಗಮಾಲಿಕೆ, ವಿನಾಯಕ ಮಂಗಳಾಷ್ಟಕ (ವೃ), (ಶಿವ) ಮಂಗಳಾಷ್ಟಕ (ವೃ), ಸದಾಶಿವ ನೀತಿ (ಕಂ), ಸದಾಶಿವರಾಜೀಯ (ಟೀ+ಷ ಇ.), ಸಮಸ್ಯಾ ಪುರಾಣ ವೃತ್ತಕಂದ, ಸ್ವರವಚನಗಳು, ಹಾಲಾಸ್ಯ ಪುರಾಣ (ಭಾ.ಷ.), *ಬಸವ ಪುರಾಣ (ಶಂಕರಾರಾಧ್ಯ) ಟೀಕೆ.

ಇಮ್ಮಡಿ ಗುರುಸಿದ್ಧ (೧೭೨೯) : ಅನ್ಯಮತ ಖಂಡನದ ಹೋಕಪದ, ಉದ್ಧರಣೆಯ ವಾರ್ಧಕ, ಕರಣಹಸಿಗೆ ಟೀಕೆ, ಕೈವಲ್ಯ ಸೋಪಾನ ನಾಮ್ನೆಕೋತ್ತರ ಶತಸ್ಥಲ, ಜಲಂಧರನ ಕಾಳಗ(ಯ), ಪರಮತ ಖಂಡನದ ವಾರ್ಧಕ ಷಟ್ಪದಿ, ಪಾದಸ್ತೋತ್ರ (ಹಾ), ಬಿಜ್ಜಾಂಬ ಚರಿತೆ (ಯ), ಮಿಶ್ರಾರ್ಪಣ ವಾರ್ಧಕ, ಮುರಿಗೆ ತಾರಾವಳಿ, ಯೋಗ ಕಲಾಪಸಾರ (ಭಾ.ಷ) ಶಿವಮತ ಪ್ರತಿಷ್ಠಾಪನ ವಾರ್ಧಕ, ಶಿವರಹಸ್ಯ ಪುರಾಣ (ಭಾ.ಷ.), ಶಿವಾಧಿಕ್ಯ ತಿಲಕ (ವಾ.ಷ.) ಶೂನ್ಯಮಂತ್ರ ಗೋಪ್ಯ (ವ), ಸ್ಕಂದ ಕಲ್ಯಾಣ (ಚಾ), ಸ್ವರ ವಚನಗಳು, ಚಾಮರವೃತ್ತ, ಪ್ರಭುಲೀಲಾ, ನಂದೀಶ್ವರ ದಂಡಕ.

ಬೆಂಗಳೂರು ಮುದ್ವೀರಸ್ವಾಮಿ (೧೭೩೮) : ವಚನ (ಹಾ), ಶಿವತತ್ವ ಸುಜ್ಞಾನ ಪ್ರದೀಪಿಕೆ (ಭಾ.ಷ.).

ಕಳಲೆ ನಂಜರಾಜ (೧೭೪೦) : ಹಾಡು.

ಬೊಮ್ಮಣ್ಣ (೧೭೪೯) : ಆದಿಪರಮೇಶ್ವರ ಪುರಾಣ (ಯ), ಫಣಿಸುತ ಚರಿತೆ (ಭಾ.ಷ.), 'ಕಬ್ಬಿಗರ ಕೈಪಿಡಿ' ಲಿಪಿಕಾರ.

- ಉದ್ದಾನ ಸಿದ್ಧಲಿಂಗದೇವ (೧೭೫೦), ಅಭವಕಂದ (ಸಂಕ), ಪರಮರಹಸ್ಯ (ಸಂ
ಶಂಕರದೇವರ ಕಂದ (ಸಂಕ).

- ಕಸ್ತೂರಿ ಸಿದ್ಧ (೧೭೫೦) : ಗುರುಭಕ್ತನ ಕಥೆ (ಸಾ).

- ಚಿದಾನಂದಾವಧೂತ (೧೭೫೦) : ಚಿದಾನಂದ ಸವಾಯಿ, ನಾರಾಯಣಿ ಸ್ತುತಿ, ಪಾವ
ಮಹಾತ್ಮೆ (ಷ).

- ಚಿನ್ಮಯದಾಸ (೧೭೫೦) : ಆತ್ಮಭಕ್ತಿಸಾರವು (ಭಾ.ಷ.) .

- ತಿಪ್ರಯಾರ್ಯ (೧೭೫೦) : ಕೃಷ್ಣದಾನಾವರ್ತ (ಯ) , ಸುಧಾಮ ಚರಿತ್ರ (ಯ

- ನಿರಂಜನಾರ್ಯ (೧೭೫೦) : ಗಗನರಾಮ ಶತಕ (ಕಂ), ರಾಮನಾಮ.

- ನಿಶ್ಚಿಂತಾತ್ಮ (೧೭೫೦) : ಶರಭ ಚಾರಿತ್ರ (ಭಾ.ಷ.).

- ಮೋಹನದಾಸ (೧೭೫೦) : ಕೋಲು ಹಾಡು.

- ರುದ್ರಮುನಿ (೧೭೫೦ - ೧೮೦೮) : ಬನಶಂಕರಿ ಸ್ತೋತ್ರಾವಳಿ.

- ಲಿಂಗಣ್ಣ (೧೭೫೦) : ದಕ್ಷಾಧ್ವರ ವಿಜಯ ಪಾರ್ವತೀ ಪರಿಣಯ (ಚಂ),
ಶಿವಕಲ್ಯಾಣ (ಯ), ಶಿವಪೂಜಾದರ್ಪಣ.

- ರಾಯಣ್ಣ (೧೭೫೫) : ಮನ್ಮಥ ಮಣಿ ದರ್ಪಣ (ಭಾ.ಷ.), 'ಜಿನರಾಮಾಯ
'ನಾಗಕುಮಾರ ಚರಿತೆ' ಮತ್ತು 'ಭರತೇಶವೈಭವ'ಗಳ ಲಿಪಿಕಾರ.

- ಶಾಂತಕೀರ್ತಿ (೧೭೫೫) : ಆದಿಪುರಾಣ (ಸಂ), ಉತ್ತರ ಪುರಾಣ (ಸಂ), ತೀರ್ಥ
ಸ್ತುತಿ, ದ್ವಾದಶಾನುಪ್ರೇಕ್ಷಾ ವ್ಯಾಖ್ಯಾನ, ಪಾರ್ಶ್ವನಾಥ ಚರಿತೆ (ಸಂ.೧), ಭುಜ
ಚರಿತೆ (ಸಂ), ಷಟ್‌ಪ್ರಾಭೃತ ವ್ಯಾಖ್ಯಾನ, ಷೋಡಶ ಭಾವನಾ ಚರಿತೆ.

- ವರಾಹ ತಿಮ್ಮಪ್ಪ (ನೆಕ್ಕರೆ ಕೃಷ್ಣದಾಸ), (೧೭೫೯), ಉಡುಪಿ ಶ್ರೀ ಕೃಷ್ಣ ಚರಿ
ತಿರುಪತಿ ಯಾತ್ರೆ ಹಾಡು, ಲಕ್ಷ್ಮೀ ಕಲ್ಯಾಣ ಹಾಡು.

- ಕೋಳೂರು ಶಂಕರಕವಿ (೧೭೬೩) : ನವಮೋಹನ ತರಂಗಿಣಿ (ವಾ.
ಮಾಧವಾಂಕ ಕಾವ್ಯ (ವಾ.ಷ.), ಮೌನೇಶ್ವರ ಪುರಾಣ (ಸಾಂ), ಸುಜ್ಞಾನ ಸುಧ
ಪಂಚವಿಂಶತಿ (ಹಾ) .

- ವೆಂಕಾಮಾತ್ಯ (೧೭೭೦) : ಈತನ ಸಂಸ್ಕೃತ ಕೃತಿಗಳಿಗೆ MYT, XXXI-I ನೋಡಿ.
- ಪರಮದೇವ (೧೭೭೭) : ಕೀರ್ತನೆಗಳು, ವಿಭೂತಿದಂಡೆ.
- ಕೃಷ್ಣ III (೧೭೬೪ - ೧೮೯೮) : ಗರಳ ಪುರಿ ಮಹಾತ್ಮೆ (ಗ), ಪಾರ್ವತೀ ಭಕ್ತಿಸಾರ (ಭಾ.ಷ), ಶ್ರೀ ಚಾಮುಂಡಾ ಲಘು ನಿಘಂಟು, ಹರದತ್ತಾಚಾರ್ಯ ಚರಿತ್ರೆ.
- ಸಪ್ಪಣ್ಣ (೧೭೯೫- ೧೮೩೯) : *ಜ್ಞಾನ ಶತಕ (ವೃ), ಶಿವಭುಜಂಗಮಾಲಾ ಸ್ತೋತ್ರ (ವೃ).
- ಕುಂದಗೋಳ ಬಸವಲಿಂಗ (೧೮೦೦) : ಅಭಿಮನ್ಯುವಿನ ಕಾಳಗ (ಯ), ಕೃಷ್ಣಲೀಲಾ ದುಂದುಮೆ, ಕೃಷ್ಣಾರ್ಜುನರ ಕಾಳಗ (ಯ), ಬಭ್ರುವಾಹನ ಕಾಳಗ (ಯ), ಸುಧನ್ವನ ಕಾಳಗ (ಯ).
- ಭಾಳಾಕ್ಷ (೧೮೦೦) : ಐರಾವತ (ಯ), ಲವಕುಶರ ಕಾಳಗ (ಯ) .
- ಮುದ್ದು ಸಂಗಮುನಿ (೧೮೦೦), ಕೊಲ್ಲಿಪಾಕೀ ಮಹಾತ್ಮ್ಯ (ಯ).
- ಮೈಲಾರದ ಬಸವಲಿಂಗ (೧೮೦೦) : ಲಿಂಗಪೂಜಾವಿಧಾನ (ಕಂ), ಹಾಡುಗಳು.
- ವೈಗಲ್ ಜಿ.ಎಚ್. (೧೮೦೦-೯೦) : ಕ್ರೈಸ್ತ ಗೀತೆಗಳು, ದೇವರ ವಾಕ್ಯದ ಬೋಧನೆಯ ಪ್ರಶ್ನೋತ್ತರ, ಪ್ರಾರ್ಥನೆಗಳು, ಯಾತ್ರಸ್ಥನ ಸಂಚಾರವು (ಭಾಗ ೧,೨).
- ಶಾಲಾಗೃಹಪರಿಣೋದ್ದಿಶ್ಯ ದೇವವಾಕ್ಯ ವ್ಯಾಖ್ಯಾನವು.
- ಶ್ರೀಧರ ವಿಠಲದಾಸ (೧೮೦೦) : ಐರಾವತ (ಯ).
- ರಾಮಕೃಷ್ಣಶಾಸ್ತ್ರಿ (೧೮೦೮) : ಭಗವದ್ಗೀತಾ ಟೀಕೆ.
- ಚಂದ್ರಸಾಗರವರ್ಣಿ (೧೮೩೫) : ಆಗಮ ದೋಗಟೆ ಪದ್ಯ (ಸಂ), ಆಣತಿವ್ರತ (ಪರಿ), ಕರ್ತರು ಪೂಜೆ ಮಾಡಿಸಿದ್ದು (ಸಾ), ಕಾಮನ ಪದ್ಯ, ಕೃಷ್ಣ ಉದೆರಾಗ, ಕೃಷ್ಣನ ಪ್ರತಿಷ್ಠೆ ಚರಿತೆ ವರ್ಣನೆ, ಗುರುಬಸದಿ ಜೀರ್ಣೋದ್ಧಾರ ಸಂಗತಿ, ಚಂದ್ರ ಪ್ರಭಸ್ವಾಮಿ ಪಂಚ ಕಲ್ಯಾಣ ಶೋಭನ (ಹಾ) , ಚಂದ್ರ ಸಾಗರರ ಸ್ವಪ್ನ, ಚಾವುಂಡರಾಯ ರಾಗ, ಜಿನ ಸೇನಾಚಾರ್ಯರು ಪೂಜೆ ಮಾಡಿಸಿದ್ದು, ಜೀವದಯಾಷ್ಟಮಿ ನೋಂಪಿ, ಡಣಾಂಕರಾಯನ ತೀರ್ಥಯಾತ್ರೆ (ಯ), ಡಿಳ್ಳಿ ಸುರಿತಾಳನ ಗೆದ್ದದ್ದು, ತ್ರಿಪನ್ನೋಪವಾಸ, ದ್ವಾದಶಾನುಪ್ರೇಕ್ಷೆ, ನಂದಗೋಪನ ಹಾಡು, ಪಾರ್ಶ್ವನಾಥ ಸ್ವಾಮಿ, ಪಂಚ ಕಲ್ಯಾಣ,

ಬೆಳಗುಳ ದೇಶಿಗಣಕ್ಕೆ ಆದ ವಿವರ, ಬೆಳಗುಳದ ಮಸ್ತಕಾಭಿಷೇಕ, ಮಾರುತಿಯ ಯಕ್ಷಗಾನ, ಮೂಡಬಿದ್ರೆ ಗುರುಗಳ ಬಸ್ತಿಯ ಪಾರ್ಶ್ವನಾಥ ಪ್ರತಿಷ್ಠೆ, ಲೋಕಸ್ವಾಮಿ ಜಿನೇಂದ್ರದ ಸ್ತುತಿ, ವಸಂತ ತಿಲಕೆ ಚರಿತೆ (ಸಂ), ವಸಿಷ್ಠ ಬ್ರಾಹ್ಮಣರಿಗೆ ಪಂಚಾಂಗ ಉಪದೇಶ ಮಾಡಿದ್ದು, ವಿಂಶತಿ ಪ್ರರೂಪಿಣೆ ಟೀಕೆ, ಶಾಲಿವಾಹನ ಶ್ರವಣ ಪೈಕಿ ವರ್ಣನೆ, ಸಂಸಾರದ ಸುಖ ಕಷ್ಟ, 'ಚಂಪೂ ಭಾರತ' , 'ಜಿನಮುನಿ' , 'ನರಸಿಂಗಲಿ', 'ಪಂಚಪರಮೇಷ್ಠಿಗಳ ವ್ಯಾಖ್ಯಾನ', 'ಭವ್ಯಜನ ಚಿಂತಾಮಣಿ' ಹಾಗೂ 'ವಿಂಶತಿ ಪ್ರರೂಪಣೆ'ಗಳ ಲಿಪಿಕಾರ.

- ಹರ್ಮನ್ ಮೋಗ್ಲಿಂಗ್ (೧೮೧೧ - ೧೮೮೧) : ಈರಾರು ಪತ್ರಿಕೆ, ಏಸುಕ್ರಿಸ್ತನ ಶ್ರಮ ಚರಿತ, ಕನ್ನಡ ಗಾದೆಗಳು, ಕ್ರೈಸ್ತ ಗೀತೆಗಳು, ಜಾತಿ ವಿಚಾರಣೆ, ದೇವ ವಿಚಾರಣೆ, ಮತ ವಿಚಾರಣೆ, ಯಾತ್ರಿಕನ ಸಂಚಾರ, ವಿಗ್ರಹಾರಾಧನೆ, ಶಾಲಾಗೃಹ ಪಠಣೋದ್ದಿಶ್ಯ ......, ಹೃದಯ ದರ್ಪಣ, ದಶಪರ್ವಭಾರತ (ಸಂ) .

- ಕಡಕೋಳದ ಮಡಿವಾಳಪ್ಪ (೧೮೨೦) , ಕೈವಲ್ಯ ವಾಕ್ಯಾಮೃತ (ಹಾ), ಮಹಾಂತೇಶ್ವರ ನಾಮಾವಳಿ, ಮಹಾಂತೇಶ್ವರ ಸ್ತೋತ್ರ.

- ಅಳಿಯ ಲಿಂಗರಾಜ (೧೮೨೩ - ೧೮೭೪) : ವೀರಭದ್ರಾಷ್ಟಕಂ (ಕಂ), ವೀರೇಶ ತಾರಾವಳಿ (ಕಂ), ವೀರೇಶಾಷ್ಟಕ (ಕಂ).

- ಗಂಗಾಧರ ಮಡಿವಾಳೇಶ್ವರ ತುರಮುರಿ (೧೮೨೭ - ೭೭) : ಕೈವಲ್ಯ ಪದ್ಧತಿ ಟೀಕೆ (ಸಂ), ನವನೀತ.

- ಶೇಷಗಿರಿರಾವ್, ಚುರಮರಿ (೧೮೨೭ - ೮೪) : ಸುಂದರಾ ನಾಟಕ, ಮೃಚ್ಛಕಟಿಕಾ ನಾಟಕ, ಜೈಮಿನಿ ಭಾರತ (ಮರಾಠಿ ಅನು).

- ಗೇರಸೊಪ್ಪೆಯ ಶಾಂತಯ್ಯ (೧೮೩೦) : ಗಯಾಖ್ಯಾನ, ಗಿರಿಜಾ ಕಲ್ಯಾಣ, ಪುತ್ರ ಕಾಮೇಷ್ಟಿ, ಸೀತಾದೇವಿ.

- ಮೂಲಿಕೆ ರಾಮಕೃಷ್ಣ ಕವಿ (೧೮೩೦ - ೧೯೦೯) : ಕೃಷ್ಣಾರ್ಜುನರ ಕಾಳಗ, ಸಂಕೀರ್ತನ ಮಾಲೆ, ಸುಧನ್ವನ ಕಾಳಗ.

- ಕಿಟೆಲ್. ಎಫ್ (೧೮೩೨ - ೧೯೦೩) : ಇಂಗ್ಲೆಂಡ್ ದೇಶದ ಇತಿಹಾಸ, ಉಭಯ ಮಾರ್ಗ ನಂಬಿ ಜೀವಿಸಿರಿ, ಕರ್ನಾಟಕ ಕಾವ್ಯಮಾಲೆ (ಸಂ), ಡೇನಿಯಲನೂ ಅವನ ಜತೆಗಾರರೂ, ಯಜ್ಞತಂತ್ರ ಸುಧಾನಿಧಿ, ಸಣ್ಣ ಕರ್ನಾಟಕ ಕಾವ್ಯಮಾಲೆ, ಸಹಸ್ರ

ಗಾಥಾಮೃತ ಕಲಶ, ಸಂಕ್ಷೇಪ ವ್ಯಾಕರಣ, ಸಂಸಾರ ಕ್ರಮ (ಈತನ ಇಂಗ್ಲೀಷ್ ಜರ್ಮನ್ ಕೃತಿಗಳಿಗೆ ಡಾ|| ಆರ್.ವೈ. ಧಾರವಾಡಕರರ ಮಹಾ ಪ್ರಬಂಧ ನೋಡಿ).

- ಚನ್ನಬಸಪ್ಪ ಬಸವಲಿಂಗಪ್ಪ (ಡೆಪ್ಯುಟಿ) (೧೮೩೩-೧೮೮೧), ಕನ್ನಡ ಅಂಕಗಣನವು (ಭಾಗ ೧,೨), ಮ್ಯಾಕ್‌ಬೆತ್.

- ವೆಂಕಟರಂಗೋಕಟ್ಟಿ (೧೮೩೩-೧೯೮೯) : ಜೈಮಿನಿ ಭಾರತ ಸಟೀಕು (ಸ.ಧಿ-೧-೪), ಸೋಮೇಶ್ವರ ಶತಕ (ಸಟೀಕು), (ಇತರ ಕೃತಿಗಳಿಗೆ ವೆಂಕಟೇಶ ಸಂಗತಿ ಅವರ 'ಸಿಗ್ರಂಚಕೋ' ಪು 150 ನೋಡಿ) .

- ಶಂಕರಾನಂದಯೋಗಿ (೧೮೩೩-೧೯೧೩) : ಸೀತಾರಾಮಾಂಜನೇಯ ಸಂವಾದ.

- ನಂಜನಗೂಡು ಸುಬ್ಬಾಶಾಸ್ತ್ರೀ (೧೮೩೪-೧೯೦೬), ಜಯಸಿಂಹರಾಜ ಚರಿತೆ (ನಾ).

- ಬೇಗೂರು ಮಲ್ಲಪ್ಪ (೧೮೩೫-೧೯೦೭) : ಕರ್ನಾಟಕ ಶಾಕುಂತಲ ನಾಟಕ (ಪರಿ), ರಾಜಶೇಖರ ವಿಳಾಸ (ಪರಿ), ಸ್ತ್ರೀ ಧರ್ಮ ನೀತಿ (ಪರಿ).

- ಮದ್ದಗಿರಿ ನಂಜಪ್ಪ (೧೮೪೦) : ವರನಂದೀ ಕಲ್ಯಾಣ.

- ಮಾವನೂರು ಚನ್ನಬಸವ (೧೮೪೦), ಪದ, ಮಲುಹಣದೇವ ಚರಿತೆ, ಮುದನೂರು ದಾಸಿಮಯ್ಯ ಪುರಾಣ, 'ಅನುಭವ ಶಿಖಾಮಣಿ' ಲಿಪಿಕಾರ.

- ರಾಮಬ್ರಹ್ಮಾನಂದಯೋಗಿ (೧೮೪೦) : ಅಕ್ಷರಮಾಲಿಕೆ, ಅನುಭವಾಮೃತ, ಬ್ರಾಹ್ಮ ಧರ್ಮಾನುಸಾರ ಧರ್ಮಪ್ರಕಾಶಿಕೆ, ಸಹಸ್ರನಾಮ.

- ದೇವಲಾಪುರದ ನಂಜುಂಡ (೧೮೪೧) : ಕೃಷ್ಣರಾಜ ಚರಿತ್ರೆ (ಸಾಂ), ಕೃಷ್ಣರಾಜ ಪಟ್ಟಾಭಿಷೇಕ ಮಹೋತ್ಸವ ವರ್ಣನಂ (ಹಾ), ದೈನ್ಯೋಕ್ತಿ ಪಂಚಕಂ (ಕಂ), ಶ್ರೀ ಮತ್ಕೃಷ್ಣ ರಾಜ ಸಾರ್ವಭೌಮರ ಅರವತ್ತನೆಯ ವರ್ಷದ ಪಟ್ಟಾಭಿಷೇಕ ವರ್ಣನಂ (ಸಾಂ), ಶ್ರೀ ಮತ್ಕೃಷ್ಣರಾಜ ಸಾರ್ವಭೌಮ ಸ್ವೀಕೃತ ಪುತ್ರ ರತ್ನ ವೃತ್ತಾಂತ ಮಂಜರಿ (ಗ+ಕಂ), ಹಾಡು, *ಅಂಬಿಕಾ ಸ್ತೋತ್ರ ತ್ರಯಂ, *ಕಲಾವಲಂಬ ಪಂಚಕಂ, *ಕೃಷ್ಣನೃಪಾಷ್ಟಕ, *ವಿಜ್ಞಾಪನಾ ಪಂಚಕಂ.

- ಶ್ಯಾಮರಾವ ವಿಠಲ ಕಾಯಕಿಣಿ (೧೮೪೧-೧೯೦೫) : ಹಿಂದು ವಿಧವೆಯರ ವಿವಾಹ ಮತ್ತು ಹಿಂದು ಜನರಲ್ಲಿಯ ವಿವಾಹ ಕಾಲವನ್ನು ಕುರಿತು ಶಾಸ್ತ್ರ ವಿಚಾರವು.

- ಸಜೀಪ ರಾಮಕೃಷ್ಣಯ್ಯ (೧೮೪೩ - ೧೯೧೫) : ಪಾಂಡವಾಶ್ವಮೇಧ, ಭಾರತ ಕಥಾ ಸಾರ, ವಿಕ್ಟೋರಿಯಾ ರಾಣಿ, ಶ್ರೀರಾಮಚರಿತ್ರೆ, ಸಂಕ್ಷಿಪ್ತ ರಾಮಾಯಣ.
- ಭಾರದ್ವಾಜ ಶಿವರಾಯ (೧೮೪೩-೧೯೨೩) : ವ್ಯಾಯಾಮ ದೀಪಿಕೆ.
- ಗುಲವಾಡಿ ವೆಂಕಟರಾಯ (೧೮೪೪ - ೧೯೧೩) : ರೋಹಿಣಿ, ಲಾಡು ಪ್ರಿಯಾಚಾರ್ಯ, ವೇಣಮ್ಮ - ನಾಗಮ್ಮರ ಸಂವಾದ.
- ವೆಂಕಟಾಚಾರ್ಯ (ಬಿಂಡಿಗನವಲೆ) (೧೮೪೫ - ೧೯೦೪) : ಕನ್ನಡ ಐದನೆಯ ಪುಸ್ತಕ, ಶಾರದಾ ಸ್ತೋತ್ರ ಕದಂಬಕರ, ಶಾರದಾಸ್ತೋತ್ರ ನಿರ್ಮಿತ ಮಂಡಲ.
- ರಾಮಚಂದ್ರ ಶ್ರೀನಿವಾಸ ಸವದಿ (೧೮೪೬ - ೧೯೦೦) : ಮಕರ ಸಂಕ್ರಮಣದ ಹಬ್ಬವು, ವಿದ್ಯಾ ಶಾಲಾ ಗುರುಮಿತ್ರ, ವಿನೋದ ತರಂಗಿಣಿ.
- ಧೋಂಡೋ ನರಸಿಂಹ ಮುಳಬಾಗಿಲ (೧೮೪೮ - ೯೮) : ರಾಜಶೇಖರ ವಿಳಾಸ (ವಿಳನೇ ಆಶ್ವಾಸ), ಟೀಕೆ.
- ಬೋಳಾರ ಬಾಬುರಾಯ (೧೮೪೮ - ೧೯೧೯) : ಶ್ರೀಮದೇಡ್ವರ್ಡ್ ಮಹಾರಾಜ ಪಟ್ಟಾಭಿಷೇಕಾಷ್ಟಕ (ಚೌ).
- ಶ್ರೀಕಂಠೇಗೌಡ (ಎಂ.ಎಲ್.), (೧೮೧೦-೧೯೨೬), ಭಮಾನಿಬಾಳು (ನಾ).
- ವೇದಾಂತ ರಾಘವಾಚಾರ್ಯ (೧೮೫೧), ಶ್ರೀ ಹರಿಕಥಾಮೃತಸಾರ ವ್ಯಾಖ್ಯಾನ.
- ಸೋಮನಾಥಯ್ಯ (ಬಿ) (೧೮೫೪ - ೧೯೧೪) : ಗಯ್ಯಾಳಿಯನ್ನು ಸಾಧು ಮಾಡುವಿಕೆ (ಅನು), ಗೆದ್ದತ್ತೆ, ಸೋತಳಿಯ, ಬೃಂದಾವನೋತ್ಸವ, ಶಂಕರ ಚರಿತ್ರ, ಕಾಟವಿಚಾರ, ಶೃಂಗೇರಿ ಮಠದ ಚರಿತ್ರೆ, ಸತೀಮಣಿ ವಿಜಯ (ನಾ).
- ಗರಣಿ ಕೃಷ್ಣಾಚಾರ್ಯ' (೧೮೫೭ - ೧೯೧೮) : ಕಾದಂಬರೀ ಕಥೆ, ಛಂದಃ ಸಾರ, ಸಾಧುವೃತ್ತಿ (ಇತರ ಕೃತಿಗಳಿಗೆ, ಸಿ.ಗ್ರಂ. ಚ.ಕೋ. ಪು೩.೨ ನೋಡಿ).
- ವೆಂಕಟರಮಣಯ್ಯ (೧೮೫೭) : ಭರ್ತೃಹರಿ ಸುಭಾಷಿತವೆಂಬ ಕನ್ನಡ ಪದ್ಯ ಕಾವ್ಯವು.
- ಭೀಮಾಜಿ ಶ್ರೀನಿವಾಸ ಅಡಬಡ್ಡಿ (೧೮೬೦-೯೪), ಪದ್ಮಗಂಧಿ ಸ್ವಯಂವರ (ನಾ), ಮಾರ್ಕಂಡೇಯ (ನಾ), ಸುಧನ್ವ ನಾಟಕ.
- ಮತಕೂರು ನಂಜುಂಡ ಶಿವಯೋಗಿ (೧೮೫೦) : ಮಾರ್ಕಂಡೇಯ ವಿಲಾಸ (ಯ), ಹಾಲಾಹಲ ಭಕ್ಷಣೆಯ ಕಥೆ (ಯ), ಕಾಳಿಕಾಂಬಾ ಶತಕವು.

ಗುಬ್ಬಿ ವೀರೇಶ್ವರ ಶಾಸ್ತ್ರಿ (೧೮೬೦), ಗುಲೇಬಕಾವಲಿ (ಯ), ಚೋರಕಥೆ (ಯ), ಜಗನ್ಮೋಹಿನಿ ಚರಿತೆ (ಯ).

ಸಿದ್ಧಲಿಂಗ (೧೮೫೬-೬೦) : ಗುಡ್ಡಾಪುರದ ದಾನಮ್ಮನ ಸ್ತೋತ್ರ, ಗೊಡ್ಡ್ಯಾಳೀಶನ ಸ್ತೋತ್ರ, ಚಿಕ್ಕಮಣ್ಣೂರ ಗಡ್ಡಿಲಿಂಗೇಶ್ವರ ಸ್ತೋತ್ರ, ಚೇರಟಗಿ ರೇವಣ ಸಿದ್ದೇಶ್ವರ ಸ್ತೋತ್ರ, ಮಡಿವಾಳಪ್ಪನ ಚಾರಿತ್ರ್ಯ, ಮರುಳಸಿದ್ದೇಶ್ವರ ಪುರಾಣ, ರೇವಣ ಸಿದ್ಧೇಶ್ವರ ಚರಿತ್ರೆ, ಸಿದ್ಧರಾಮೇಶ್ವರ ಕಾವ್ಯ, ಸಿಂಧಗಿ ನೀಲಗಂಗಮ್ಮನ ಚರಿತ್ರೆ .

ನರಸಿಂಹಾಚಾರ್ಯ (ಎಸ್.ಜಿ.) (೧೮೬೨-೧೯೦೩), ಆದಿಪುರಾಣ (ಪಂಪ) ,(ಪರಿ).

ಮೋಟಗಾನಹಳ್ಳಿ ಶಂಕರಶಾಸ್ತ್ರ (೧೮೬೨-೧೯೧೨), ಕರ್ಣಾಟಕ ಪಾಂಡವ ವಿಜಯ ನಾಟಕ ಕಂ(ಅನು.), ಕರ್ಣಾಟಕ ಹರಿಶ್ಚಂದ್ರ ನಾಟಕಂ (ಅನು).

ಕುಂದಲಗಿರಿ ಆಚಾರ್ಯ (೧೮೬೫-೧೯೦೪) : ಜೈಮಿನಿ ಭಾರತ ಕಥಾ ಸಂಗ್ರಹ.

ಕೆರೂರ ವಾಸುದೇವಾಚಾರ್ಯ (೧೮೬೬ - ೧೯೨೧) : ಗೀತಾರಹಸ್ಯ, ತೊಳೆದ ಮುತ್ತು (ಸಣ್ಣ ಕಥೆಗಳು), ನೀಳ್ಗತೆಗಳು, ಪತಿ ವಶೀಕರಣ (ನಾ), ಪುರಂದರದಾಸ (ನಾ), ಪ್ರೇಮವಿಜಯ, ಬೆಳಗಿದ ದೀಪಗಳು, ಯವನ ಸ್ರೇರಂಧ್ರೀ, ರುಕ್ಮಿಣೀ ಹರಣ (ನಾ), ವಸಂತ ಯಾಮಿನಿ ಸ್ವಪ್ನ ಚಮತ್ಕಾರ (ನಾ), ವಾಲ್ಮೀಕಿ ವಿಜಯ, ಸುರತ ನಗರದ ಶ್ರೇಷ್ಠಿ.

ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿ (೧೮೬೭ - ೧೯೩೪), ಕರ್ನಾಟಕ ಮುಕುಂದಾನಂದ ಬಾಣಂ, ಕರ್ನಾಟಕ ಮುದ್ರಾರಾಕ್ಷಸ ನಾಟಕ, ಕರ್ನಾಟಕ ಹಿತೋಪದೇಶಂ, ಗೀತಿಕಾ ತರಂಗಿಣಿ, ಬಾಲಿಕಾ ಗೀತಾವಳಿ, ಭಾರತ ಸಂಗ್ರಹ, ವಿಪ್ರಲಂಭಾದ್ಭುತ ಪ್ರದರ್ಶನಿ ಎಂಬ ಪರಸ್ಪರ ದ್ರವ್ಯ ಸಹಾಯದ ಕಂಪನಿ ನಾಟಕಂ, ಶ್ರೀ ಭಾಗವತ ಪುರಾಣ (ಟೀಕಾ-ತಾತ್ಪರ್ಯ).

ಪದ್ಮನಾಭ ಮಹಾರಾಜ (೧೮೬೮ - ೧೯೧೦) : ಈಶ ದೀಪಿಕೆ, ಶ್ರೀರಾಮ ವಿಜಯ.

ಭಾಗವತ ಕೃಷ್ಣಸ್ವಾಮಿ (೧೮೬೯) : ಅಧ್ಯಾತ್ಮ ರಾಮಾಯಣ ಟೀಕು, ಕನ್ನಡ ತೊರವೆ ರಾಮಾಯಣ (ಸಂ), ಕನ್ನಡ ದಶಪರ್ವ ಭಾರತ (ಸಂ), ಕನ್ನಡ ಮಹಾಭಾಗವತ ಪದ್ಯರೂಪ (ಸಂ), ಜಾತಕ ಜ್ಞಾನ ರತ್ನಾವಳಿ, ಜ್ಞಾನಸಿಂಧು (ಸಂ), ಟೀಕಾ ಜೈಮಿನಿ, ಬೃಹಜ್ಜಾತಾಖ್ಯ ಹೋರಾಶಾಸ್ತ್ರ, ಭರ್ತೃ ಹರಿ ಸುಭಾಷಿತ ಶ್ಲೋಕ, ವ್ರತ ಚೂಡಾಮಣಿ, ವ್ರತ ರತ್ನಾಕರಂ, ಶಿಶು ವೈದ್ಯ ಸಂಜೀವಿನಿ, ಶ್ರೀ ರಾಮಚಂದ್ರನಾಮರತ್ನಾವಳಿ (ಪರಿ), ಸಟೀಕಾ ಹರಿಕಥಾಮೃತ ಸಾರ, *ಕೃಷ್ಣ ರಾಜಾಭ್ಯುದಯ, *ಶರ್ಮಿಷ್ಠಾ ಯಯಾತೀಯ.

- ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿ (೧೮೪೬ - ೧೯೧೮) : ಕನ್ನಡ ಪದ್ಯಾರ್ಥ ಬೋಧಿನಿ, ಕನ್ನಡ ಶಬ್ದ ಕೋಶ, ಕವನಗಳು, ಜಲಚಿಕಿತ್ಸೆ, ನನ್ನ ಅಜ್ಜಿ, ನನ್ನ ತಂದೆ, ಬೇನಿಗರ ಬೃಹತ್ ಚಿಂತಾಮಣಿ, ಲಂಘನ ಚಿಕಿತ್ಸೆ.

- ಕರಿಬಸವಶಾಸ್ತ್ರಿ ಎನ್.ಆರ್. (೧೮೭೨-೧೯೨೩) : ಕರ್ಣಾಟ ಶಬ್ದಮಂಜರಿ (ಸಂ), (ಸುಜನೋಲ್ಲಾಸಿನಿ ಟೀಕಾ ಸಹಿತ), ಕೊಟ್ಟೂರ ಬಸವೇಶ್ವರ ಪುರಾಣವು (ಸಂ), ಗುರು ಶಂಕರೇಶ್ವರ ಶತಕವು (ಸಂ), ಚೆನ್ನಬಸವ ರಗಳೆ (ಸಂ), ತತ್ತ್ವ ಪ್ರಕಾಶಿಕಾ (ಭೋಜ ರಾಜ) ಟೀಕು (ಸಂ), ದೇವೀಕಾಲೋತ್ತರಾಗಮ ಜ್ಞಾನ ಪಟಲದ ಟೀಕು (ಸಂ), ಧರ್ಮ ಪ್ರವರ್ತ ರಾವ್ ಬಹದ್ದೂರ್ ಶ್ರೀಮಾನ್ ಗುಬ್ಬಿ ತೋಟದಪ್ಪ ಮಹಾಶಯ ಪ್ರಶಂಸಾ (ಕಂ), ನಿರಂಜನ ಲಿಂಗ ಶತಕಂ (ಕಂ), (ಸಂ), ಪರವಾದಿ ಗಜಾಂಕುಶ ತಾರಾವಳಿ (ಟೀಕಾ ಸಹಿತ) (ಸಂ), ಪಾಲ್ಕುರಿಕೆ ಸೋಮೇಶ್ವರ ಪುರಾಣಂ (ಸಂ), ಬಸವೇಶ್ವರ ಜನನಂ (ಸಟೀಕಾ), (ವ್ಯಾಸಕೃತ 'ಬಸವೇಶ ವಿಜಯ' ಅ ೩.೭), ಭಕ್ತಾ ಧಿಕ್ಯ ರತ್ನಾವಳಿ (ಷಡಕ್ಷರ ದೇವ ಕೃತ), ತಾತ್ಪರ್ಯ - ಉಜ್ಜಯಿನಿ ಗುರು ಸಿದ್ಧಯತಿ (ಪರಿ), ಮುಕ್ತ್ಯಾಂಗನಾ ಕಂಠ ಮಾಲಾ (ಸಂ), ರಕ್ಷಾ ಶತಕಂ (ಸಂ), ರುದ್ರಾಕ್ಷಿಯ ರಗಳೆ (ಸಂ), ರೇವಣ ಸಿದ್ಧೇಶ್ವರ ಪುರಾಣ (ಸಂ), ವಿವೇಕ ಚಿಂತಾಮಣಿ (ಭಾಗಶಃ) (ಸಂ), ವೀರಶೈವ ಕಂಠಾಭರಣಂ, ವೀರಶೈವ ಧರ್ಮ ನಿರ್ಣಯ ಸಿದ್ಧಾಂತ ಶಿಖಾಮಣಿಯು 'ತಾತ್ಪರ್ಯ ದೀಪಿಕೆ' ಎಂಬ ಕನ್ನಡ ಟಿಪ್ಪಣಿ ಸಹಿತ, (ಸಂ+ಟೀ), ವೃಷಭೇಂದ್ರ ವಿಜಯ ಸಟೀಕು (ಸುಜನಾನಂದಿನಿ ಟೀಕೆ), ಶತಸೂತ್ರ ರತ್ನಂ (ಪರ್ವತೇಶ ಕೃತ ಕರ್ಣಾಟಕ ಟೀಕೆ) (ಸಂ), ಶಿವಯೋಗ ಪ್ರದೀಪಿಕಾ (ಬಸವಾರಾಧ್ಯ ಕೃತ ಟೀಕೆ) (ಸಂ), ಷಟ್ಸ್ಥಲದ ರಗಳೆ (ಸಂ), ಷಟ್‌ಸ್ಥಲ ವಿದ್ಯಾ, ಸಟೀಕಾ ವೀರಶೈವ ದೀಕ್ಷಾ ವಿಧಿಯು (ಬಸವ ಶಿವಾಚಾರ್ಯ ಕೃತ್ಯಾಧಾರಿತ), ಸಟೀಕಾ ಶತಕ ತ್ರಯಂ (ಸಂ), ಸ್ತುತಿ ಮುಕ್ತಾವಳಿ (ಸಂಕ) (ಸಂ), ಸೌಂದರ ಪುರಾಣ (ಸಂ), ಏಕೋತ್ತರ ಶತಸ್ಥಲೀ, ಲಿಂಗ ಧಾರಣ ಚಂದ್ರಿಕಾ, ಸ್ಕಂದಾಗಸ್ತ್ಯ ಸಂವಾದ ರೂಪಂ, ವ್ಯಾಸ ಮಹರ್ಷಿ ಪ್ರಣೀತಂ, ಶ್ರೀಮದ್ಬಸವಪುರಾಣಂ (ಸಂ), ವೀರಶೈವ ಧರ್ಮ ಶಿರೋಮಣಿ (ಷಡಕ್ಷರಮಂತ್ರಿ), ಶಿವಪಂಚಸ್ತವ (ಸಂ), ಶಿವಾರ್ಚನ ವಿಧಿಃ, ಸಂಕ್ಷಿಪ್ತ ಶಿವಪೂಜಾವಿಧಿಃ, ಸಂಸ್ಕೃತ ಬಸವೇಶ ವಿಜಯ (ಶಂಕರಾರಾಧ್ಯ) (ಸಂ).

- ಕಿತ್ತೂರ ಬಸವಾರ್ಯ (೧೮೭೬ - ೧೯೨೧) : ಚಂದ್ರಿಕಾ (ನಾ), ತ್ಯಾಗವೀರ ಶಿರಸಂಗಿ ಲಿಂಗರಾಜರ ಸ್ತವನ, ಮಂಚೂರ ಲಾವಣಿ, ವಿಷಮ ವಿವಾಹ, ಸಮಾಜಾದರ್ಶ, ಹಾಡು.

- ಭೂಮೀಶ ಕವಿ (೧೮೮೩) : ಬರಗಾಲ ವರ್ಣನೆ, ಶ್ರೀಮನ್ಮಹಾರಾಣಿ ವಿಕ್ಟೋರಿಯಾರವರ ಜುಬಿಲಿ ಚೌಕ.
- ಬಸವಕವಿ (೧೮೮೭) : ಅಷ್ಟಾವರಣದ ಶತಕ (ಕು.ಷ+ಕಂ), ಗುರುಬೋಧಾಮೃತ (ಸಾಂ), ಶನಿಭಕ್ತಿಸಾರ (ಸಾಂ).
- ಬೂದಿಹಾಳ ಬಸವಾರ್ಯ (೧೮೮೮): ದಮಯಂತಿ, ಮನೋರಮೆ, ಮಾನವಧರ್ಮ, ವಿಚಿತ್ರ ಕಾರಸ್ಥಾನ, ವೇಣು ಅಥವಾ ದುಷ್ಟ ಸಮಾಜ, ಸತ್ತ್ವ ಪ್ರಕಾಶ.
- ಹನುಮಾನ್ ದಾಸ (೧೮೯೩ - ೧೯೨೧) : ರಂಗನ ಮದುವೆ, ರಂಗಪ್ಪನ ದೀಪಾವಳಿ.
- ತುಳಸೀಬಾಯಿ (೧೮೯೮-೧೯೧೮) : (ಈಕೆಯ ಹಾಡಿನ ಕೃತಿಗಳ ಬಗೆಗೆ ಡಾ|| ಸರೋಜಿನಿ ಮಹಿಷಿಯವರ "ಕರ್ನಾಟಕದ ಕವಯಿತ್ರಿಯರು", ೧೯೬೫, ಪು. ೩೩೫-೪೨ ನೋಡಿ).

೨) ಕೃತಿಕಾರರ ಹೆಸರಿನ ಅಕಾರಾದಿ

- ಕೆ. ಅನಂತರಾಮಯ್ಯ (III - ೨೨೩) : ಯಕ್ಷಗಾನ ಬಾಣಾಸುರನ ಕಥೆ.
- ಎಚ್. ಅಪ್ಪಣ್ಣಶೆಟ್ಟಿ (III - ೨೩೧) : ಪ್ಲೇಗಿನ ಚರಿತ್ರೆ.
- ಅರಮನೆ ನಾಟಕದ ಸುಬ್ಬರಾಯ (III - ೨೩೬) : ರುಕ್ಮಾಂಗದ ಚರಿತ್ರೆ.
- ಅರಮನೆ ಮರಿ ಸೆಟ್ಟಿ (III - ೨೩೬) - ಹಿತವಚನ ಸಂಗ್ರಹ.
- ಬಿ. ಅಶ್ವತ್ಥನಾರಾಯಣ ಶಾಸ್ತ್ರಿ (III - ೨೩೧) : ರಾಮಾಯಣದಿಂದುಂಟಾಗುವ ನೀತಿಗಳು.
- ಎ. ಆನಂದರಾಯ (III - ೨೨೬) : ರಾಮವರ್ಮ ಲೀಲಾವತಿ ಚರಿತ್ರೆ, ಹ್ಯಾಮ್ಲೆಟ್.
- ಆರೋಗ್ಯಂ ಪಿಳ್ಳೆ (III - ೨೩೪) : ಮಾಹೇಶ್ವರೀ ಉಪದ್ರವ ವಿರೇಚಕ ಬೋಧಿನಿ, ಸೂತಿಕಾ ಶಾಸ್ತ್ರ ಸಂಗ್ರಹ.
- ಇಡಗೂರು ರುದ್ರಕವಿ (III - ೨೨೬) : ವಿರೂಪಾಕ್ಷ ಮಹಾತ್ಮ್ಯ.
- ಕೊಮಾಂಡೂರು ರಾಮಸ್ವಾಮಿ ಅಯ್ಯಂಗಾರ್ (III - ೪೬೫) : ಕರ್ನಾಟಕ ವಾಸವ ದತ್ತಾ, ಜೈಮಿನಿ ಭಾರತಟೀಕೆ, ಧರ್ಮನೀತಿ ಪರ್ವ, ಪಾರಶಿಯ ಹಗಲಿನ ವಿನೋದ

ಕಥೆಗಳು, ರತ್ನಮಣಿ, ಶ್ರೀರಾಮಕಥಾಮೃತವು, ಸಟೀಕಾ ಅನುಭಾವಾಮೃತವು, ಸಟೀಕಾ ಜ್ಞಾನ ಸಿಂಧು, ಸನಾತನ ಧರ್ಮ ನೀತಿಸಾರ.

- ಕ್ರಿಸ್ತಾನುಜವತ್ಸ (III - ೩೯೫) : (ಕೃತಿಗಳಿಗೆ 'ಸಿಗ್ರಂಚಕೋ' ಪು. ೧೯ ನೋಡಿ).

- ಬಿ. ಕೃಷ್ಣಪ್ಪ (III - ೪೭೦) ನವೀನ ಆರೋಗ್ಯಪಾಠಗಳು, ಪಾಕಶಾಸ್ತ್ರ (ಜಯರಾಯಾಚಾರ್ಯ) (ಪರಿ), ಸರಳಾರೋಗ್ಯಶಾಸ್ತ್ರ ಸಂವಾದ ೩೨ ಚಿತ್ರಗಳು.

- ಕೆರೋಡೆ ಸುಬ್ಬರಾಯ (III - ೪೭೦) : ಅನುಕೂಲ ದಾಂಪತ್ಯ, ಅನುಕೂಲ ಸಿಂಧು (ಕಂ+ವ್ಯ), ಕೃಷ್ಣ ಜೋಗುಳ, ಜರಾಸಂಧ ವಧೆ, ಝಾನ್ಸಿ ರಾಣಿ ಸಂಸ್ಥಾನದ ಮಹಾರಾಣಿ ಲಕ್ಷ್ಮೀಬಾಯಿ ಸಾಹೇಬಳ ಚರಿತೆಯು (ಅನು), ಸಮೂಲ ಭಾಷಾಂತರ.

- ಗಿರಿಭಟ್ಟರ ತಮ್ಮಯ್ಯ (III, ೨೨೮, ೪೬೮) : ಸ್ತೋತ್ರ ರತ್ನಾಕರ.

- ಗುರುರಾವ್ ವಿಠಲ ಮೋಹರೆ (III - ೩೯೬) : ಕವಿತೆಯ ಮೊದಲನೆ ಪುಸ್ತಕವು.

- ಗೊರೂರು ನರಸಿಂಹಾಚಾರ್ಯ (III - ೨೨೦) : ಅರ್ಚಾವತಾರ ವಿಲಾಸವು (ಸಂ).

- ಗೋಡಪಲ್ಲಿ ರಾಮಶಾಸ್ತ್ರಿ (III - ೨೨೭) : ಶೃಂಗಾರಾದ್ಭುತ ಝರಿ, ಚಿತ್ರ ಬೃಹತ್ಕಥಾಮಂಜರಿ.

- ಚಂದಯ್ಯ ಉಪಾಧ್ಯಾಯ (III - ೩೯೬) : ಅನಂತನಾಥ ಬಸದಿಯ ಜೀರ್ಣೋದ್ಧಾರ ಚರಿತೆ, ಕಾರ್ಕಳದ ಕೆರೆ ಬಸದಿಯ ಚರಿತೆ, ತೀರ್ಥ ಯಾತ್ರಾ ಚರಿತ್ರೆ, ನಂದೀಶ್ವರದ ನೋಂಪಿಯ ಕಥೆ, ಬೆಲ್ಲ ಬಿಡ್ಡಿ ಚರಿತ್ರ, ಬೆಳಗುಳದ ಮಸ್ತಕಾಭಿಷೇಕದ ಚರಿತೆ, ವೃಷಭಸ್ವಾಮಿ ಪಂಚಕಲ್ಯಾಣ ಶೋಭಾನೆ, ಸ್ಯಾದ್ವಾದಮತ ಸಿದ್ಧಾಂತ ['ಚಾವುಂಡರಾಯ ಪುರಾಣ' (ಕ್ರಿ.ಶ. ೧೮೮೫) ಮತ್ತು 'ಹರಿವಂಶ ಪುರಾಣ'ಗಳ ಲಿಪಿಕಾರ].

- ಟಿ.ಎಂ. ಚಂದ್ರಶೇಖರ ಶಾಸ್ತ್ರಿ (III - ೪೬೩) : ಗಾಯನಾಚಾರ್ಯ ಶ್ರೀ ಪಂಚಾಕ್ಷರ ಸ್ತೋತ್ರ ಮಂಜರಿ.

- ಜಯರಾಯಾಚಾರ್ಯ (III - ೨೨೧, ೪೬೬) : ವರನಂದೀ ಕಲ್ಯಾಣ (ಚೆಲುವಾಂಬೆ) (ಸಂ).

- ಡ್ಯಾನಿಯಲ್ ಸ್ಯಾಂಡರ್ಸನ್ (III - ೨೪೦) : ಕನ್ನಡ ಇಂಗ್ಲೀಷ್ ಶಬ್ದಕೋಶ (ಪರಿ), ಕನ್ನಡ ಕಥಾ ಸಂಗ್ರಹ, ಕನ್ನಡ ಸಂಭಾಷಣೆ ಸರಣಿ (ಆರ್.ಜೆ. ಹಾಡ್ಸನ್) (ಸಂ), ಜೈಮಿನಿ ಭಾರತದ ಇಂಗ್ಲೀಷ್ ಅನುವಾದ.

ತಿರುಮಲೆ ಶ್ರೀನಿವಾಸಾಚಾರ್ಯ (III - ೪೬೫) : ಪರಮಾನುಭವ ಬೋಧೆಯ ಟೀಕು, ಪಾರಮಾರ್ಥ ಪ್ರಕಾಶಿಕೆ ಟೀಕೆ, ರಾಜಶೇಖರವಿಲಾಸ (ಸಂ), ಸಟೀಕಾ ನಿಜಲಿಂಗ ಶತಕವು, ಹರಿಭಕ್ತಿಸಾರ (ಸಂ).

ತುಂಬಳಬೀಡು ಪರ್ವತಯ್ಯ (III - ೨೩೭) : ಸುಜ್ಞಾನಭೋದ ಚಿಂತಾರತ್ನ ಶತಕವು (ಭಾ.ಷ) ದೇವೀ ಸ್ತೋತ್ರ.

ಧಾರಾಪುರದ ತಿಮ್ಮಪ್ಪ ದಾಸ (III - ೨೨೫) : ಚಂದ್ರಹಾಸನ ಕಥೆ(ಯ), ಶಶಿರೇಖಾ ಪರಿಣಯ (ಯ).

ವಿ. ನರಸಿಂಹಮೂರ್ತಿರಾಯ (III - ೪೬೨) : ಸತ್ಪುತ್ರಿಯ ಚರಿತ್ರೆ.

ಎಸ್. ನರಸಿಂಹಯ್ಯಂಗಾರ್ (III - ೨೩೪) : ಪಶುವೈದ್ಯ.

ಎಚ್.ವಿ. ನಂಜುಂಡಯ್ಯ (III - ೪೩೫) : ವ್ಯವಹಾರ ಧರ್ಮಶಾಸ್ತ್ರ

ಎಚ್. ನಾರಾಯಣರಾಯ (III - ೨೩೩) : ಕನ್ನಡ ಕವಿತೆಯ ಭವಿತವ್ಯ, ನವ ನಾಗರೀಕತೆ.

ಪಗಡಿದಿನ್ನೆ ಮಠದ ನನ್ನಪ್ಪ ಶಾಸ್ತ್ರಿ (III - ೪೬೯) :೬೩ ಪುರಾತನರ ನುತಿ, ಪ್ರಾಕ್ತನ ಗಣ ಕಥಾವಳಿ (ಭಾ.ಷ).

ಭಾಷ್ಯ ಸುಬ್ಬರಾಯ (III - ೨೩೫) : ಅರೇಬಿಯನ್ ನೈಟ್ಸ್ ಅಥವಾ ಯವನ ಯಾಮಿನೀ ವಿನೋದಗಳಲ್ಲಿ ಒಂದಾದ ಸಿಂದಬಾದ್ ನಾವಿಕ, ಬಾಲಭೂ ವಿವರಣೆ.

ಬೋಳಾರ ರಾಮಕೃಷ್ಣಯ್ಯ (III - ೩೯೬) : ಚಂಡಿಕಾ ಶತಕ, ನವಗ್ರಹ ಶತಕ.

ಭಾಷ್ಯಂ ತಿರುಮಲಾಚಾರ್ಯ (III - ೪೬೪) : ಮುಹೂರ್ತ ದೀಪಿಕಾ (ಟೀಕು), ಶಿವಗೀತಾ (ಟೀ), ಶಿವಾನಂದಲಹರಿ (ಟೀಕು), ಷಟ್ಪಂಚಾ

ಮಹಾಂತ ದೇಶಿಕ (III - ೨೨೨, ೪೩೧) (ಶತ್ ಟೀಕು), ಅನುಭವ ಮುದ್ರೆ (ಶಾಂತ ಮಲ್ಲ) (ಸಂ), ಆಂಜನೇಯ ಸ್ವಾಮಿ ಭಕ್ತಿಸಾರ, ಇಕ್ಕದ ಮಾರಯ್ಯನ ಚರಿತ್ರೆ (ಯ), ಕರಣ ಹಸಿಗೆ ಮಿಶ್ರಾರ್ಪಣ ಮಂತ್ರ ಗೋಪ್ಯ ಘಟಚಕ್ರ ಏಕಾದಶ ಪ್ರಸಾದ ವಿಚಾರ ವಾಕ್ಯ ಮಿಶ್ರ ಷಟ್‌ಸ್ಥಲ ವಚನ ಪಂಚ ಬ್ರಹ್ಮ ನಾರಾಯಣೋಪನಿಷತ್ (ಸಂ), ಖಡ್ಗಗಳು (ಸಂ), ಗದ್ದಿಗೆ ಮರುಳ ಸಿದ್ಧೇಶ್ವರ ಸ್ತೋತ್ರ, (ಚೋರಬಸವ ಚರಿತ್ರೆ (ಕೋಶಂಕರ) (ಸಂ), ನವಗ್ರಹ ಶತಕ, ನವಗ್ರಹ ಪೂಜಾ ವಿಧಾನವು, ನಳಮಹಾ

ರಾಯನ ಚರಿತ್ರೆಯು (ಯ), ನಂಜುಡೇಶ್ವರ ಸ್ತೋತ್ರ ಶತಕವು (ಭಾ.ಷ), ಪಂ
ಶತನೀತಿ ಸೋದೆ (ಸದಾಶಿವಕೃತ) (ಕಂ) (ಸಂ), ಬಸವಲಿಂಗ ರಗಳೆಯು, ಶಿವಲಿಂ
ರಗಳೆಯು, ಶಿವಲಿಂಗ ತ್ರಿವಿಧಿ ಲಿಂಗಾಷ್ಟಕ (ಸಂ), ಬಸವೇಶ್ವರ ಭಕ್ತಿ ಸಾರವು (ಭಾ.ಷ
ಮಹಾಂತ ದೇಶಿಕೇಂದ್ರ ವಿಲಾಸ (ಯ), ಯಕ್ಷಗಾನ ಚೋರಬಸವ ಚರಿತ್ರೆ, ಯಕ್ಷ
ಗಾನ ಧರ್ಮ ಚರಿತ್ರೆ, ಯಕ್ಷಗಾನ ಶನಿ ಮಹಾತ್ಮೆ, ರೇವಣ ಸಿದ್ದೇಶ್ವರ ಭಕ್ತಿ
ಸಾರಾಮೃತ (ಭಾ.ಷ), ಲಿಂಗಧಾರಣ ವಿಧಿ, ವಿಠ್ಠಲ ಪಾಂಡುರಂಗ ಸ್ತೋತ್ರ, ವಿನಾಯ
ಚಲುಪದ, ವೇದಾಂತ ವಿಚಾರ, ಷಡಕ್ಷರಿ (ರಗಳೆಯ ಶಂಕರದೇವ) (ಸಂ), ಸದ್ಗುರ
ಶಾಂತಮಲ್ಲೇಶ್ವರಾಂಕಿತ ಶಿವಾನುಭವ ಶಾಸ್ತ್ರವು (ಸಂ), ಸಾಂಬಮೂರ್ತಿ ಸ್ತೋತ್ರ
ಹರಿಹರ ಸ್ತೋತ್ರವು.

- ಮೈಸೂರು ವೇದಾಂತ ಶಿವರಾಮಶಾಸ್ತ್ರಿ (III - ೨೩೫) : ಅಮನಸ್ಕ ರಾಜ ಯೋಗಾನಂ ಬೋಧೆ, ಪಾರಮಾರ್ಥಸಾರ (ದ್ವಿ), ವೇದಾಂತ ಜ್ಞಾನರತ್ನ ಪ್ರಭಾ, ಶಂಕರ ಗುರು ವಿಲಾಸ (ಭಾ.ಷ), ಶಂಕರಬೋಧಾಮೃತ ಕಂದ, ಶಂಕರಾನಂದ ಪದ್ಧತಿ (ಕಂ) ಸನ್ಯಾಸಿ ಲಕ್ಷಣ.

- ಯಜಮಾನ ಸಿದ್ಧಲಿಂಗಪ್ಪ (III - ೨೨೭) : ಶ್ರೀ ದೇವಲಮತ ಧರ್ಮ.

- ಆರ್. ರಘುನಾಥರಾಯ (III - ೨೩೪) : ಆರೋಗ್ಯ ಮಾರ್ಗದರ್ಶಿನಿ, ಈಸೋಪ ನೀತಿಕಥೆಗಳು, ನಿಯೋಗವಿಧಿಯ ವಿಚಾರ, ನೀತಿರತ್ನಾಕರ, ಪ್ರಾಣಿಶಾಸ್ತ್ರ, ವಿವಾಹ ಮುಖ್ಯತಮ ಕರ್ಮ ವಿಚಾರ, ಸನಾತನ ಧರ್ಮ ಪ್ರಶ್ನೋತ್ತರ ಮಾಲೆ, ಸ್ತ್ರೀ ಸಂಸ್ಕಾ ಪ್ರಕಾಶಿಕೆ.

- ರಾಜಾಪಾರ್ಟ್ ಸೂಲಿಬೆಲೆ ಡಿ. ಶಾಮರಾಯ (III - ೨೩೮) : ಇಂದ್ರಸಭಾ ನಾಟಕವ ಉಷಾಪರಿಣಯ, ಕರ್ಣಾಟಕ ಪಾಂಡವ ಜಯನಾಟಕ, ಮಂದಾರೋಜ್ವಲ ಪ ಣಯವೆಂಬ ಗುಲೇಬಕಾವಲಿ ನಾಟಕವು, ಮಾರ್ಕಂಡೇಯ, ವಿಚಿತ್ರ ವಿನೋದ ಮಂಜ ಕಥೆ, ಶ್ರೀಯಾಳ ಚರಿತ್ರೆ ಎಂಬ ಧರ್ಮಪಾಲನ ನಾಟಕವು.

- ಲೋಕನಾಥ ಕವಿ (III - ೪೨೭) : ಸಂತಾನ ದೀಪಿಕೆ ಟೀಕೆ.

- ವಲ್ಲಭ ಮಹಾಲಿಂಗ ತಟ್ಟಿ (III - ೩೯೪) : ಗುರುಪ್ರಸಾದ, ಲಕ್ಷ್ಮೀಬಾಯಿ.

- ವಿಲಿಯಂ ರೀವ್ (III - ೨೪೦) : ಯೇಸುಕ್ರಿಸ್ತನ ಅವತಾರ.

- ವೀರನಗೆರೆ ಪುಟ್ಟಣ್ಣ (III - ೨೨೦) : ಕರೀಬಂಟನ ಕಥೆ, ಯಕ್ಷಗಾನ ಚೋರಕಥೆ 'ವಿರಾಟಪರ್ವ' (ಅ. ಲಿಂಗರಾಜ)ದ ಲಿಪಿಕಾರ.

ಆರ್. ವೆಂಕಟಸುಬ್ಬರಾಯ (III - ೨೩೬) : ಅದೃಷ್ಟ ದೀಪಿಕಾ, ಆನಂದ ದೀಪಿಕೆ, ಕೇಸರಿ ವಿಲಾಸವು, ಮರ್ಮಶಾಸ್ತ್ರವು.

ವೆಂಕಟಾದ್ರಿ ಶಾಮರಾಯ (III - ೨೨೮) : ಮಂಗಳಗೌರೀ ವ್ರತಕಥಾ.

ವೆಂಕಟೇಶಶಾಸ್ತ್ರಿ (III - ೨೨೫, ೪೬೮) : ಕಾಲಾಮೃತ ಗ್ರಂಥವು.

ಪಿ. ವೇದಮಿತ್ರ (III - ೪೬೪) : ಆಗಸ್ಟಿನ್ ಬಿನ್ನಪಂ, ಯವನ ಯಾಮಿನೀ ವಿನೋದ ಕಥೆಗಳು, ರೋಗಿಗಳ ಪರಾಂಬರಿಕೆ.

ಎನ್. ಶಿವಪ್ಪ ಶಾಸ್ತ್ರೀ (III - ೨೨೮) : ಕಂಚೀ ಸಿದ್ಧಾಂತವೆಂಬ ಪುರಾಣ (ಸಂ), ಕೃಷ್ಣ ಪಾರಿಜಾತ ನಾಟಕ, ಚೆನ್ನಬಸವಾಭ್ಯುದಯ (ಸಂ), ನಿರ್ವಾಣಸ್ವಾಮಿಯವರ ಶೃಂಗಾರ ತಾರಾವಳಿ (ಸಂ), ಲಿಂಗಾಯಿತರ ವಿಳಿಗೆಯು, ವೀರಶೈವ ವರ್ಣಾಶ್ರಮ, ಶಿವಮಹಿಮಾ ಶತಕ (ಟೀಕು), ಸಟೀಕಾ ಗಣಭಾಷ್ಯ ರತ್ನಮಾಲೆ (ಸಂ).

ಶ್ರೀನಿವಾಸಕವಿ (ಕಲ್ಯಾಣಪುರೀ) (III - ೪೨೦) : ಹೊಸಗನ್ನಡ ನುಡಿ ಚಂದ್ರಿಕೆ ವ್ಯಾಕರಣ.

ಎಂ.ಬಿ. ಶ್ರೀನಿವಾಸಯ್ಯಂಗಾರ್ (III - ೨೨೪) : ಕರ್ಣಾಟಕ ವಾಚಕ ಬೋಧಿನಿ, ಮುಕುಂದ ಮಾಲಾ ಸ್ತೋತ್ರ.

ಕಂಚಿ ಶ್ರೀನಿವಾಸರಾಯ (III - ೨೩೨) : ಜ್ಞಾನಸಿಂಧು (ಸಂ), ವೈದ್ಯಸಾರ ಸಂಗ್ರಹ ಶಬರ ಶಂಕರ ವಿಳಾಸ (ಸಂ).

ಸಿದ್ಧರಾಮ ಶಿವಯೋಗಿ, ತಾಂಡೂರು (III - ೨೨೫) : (ಪರಮಾರ್ಥ ಪ್ರಕಾಶಿಕೆ, (ನಿಜಗುಣ ಶಿವಯೋಗಿ), ತೆಲುಗು ಅನುವಾದ).

ಸಿದ್ಧಾಂತ ಸುಬ್ರಹ್ಮಣ್ಯಶಾಸ್ತ್ರಿ (III - ೨೨೬) : (ಸಿ.ಗ್ರಂ.ಚ.ಕೋ. ಪುಟ ೨೦೮-೦೯ ನೋಡಿ.)

ಟಿ. ಸುಬ್ಬರಾಯ ಶಾಸ್ತ್ರಿ (III - ೨೩೩) ಕೈವಲ್ಯ ನವನೀತ (ಸಂ), ದೇಶಭಕ್ತಿ ವಿಷಯವಾದ ಉಪನ್ಯಾಸವು, ರಾಜಭಕ್ತಿ, ರಾಮಾಯಣ ಸಾರ ಸಂಗ್ರಹವು, ಶಬ್ದಾರ್ಥ ಕಲ್ಪದ್ರುಮವೆಂಬ ಶಬ್ದಕೋಶವು, ಶಂಕರ ಸಂಹಿತೆ (ಗ) (ಮುಮ್ಮಡಿಕೃಷ್ಣ) (ಸಂ), ಶುಕಸಪ್ತತಿ ಕಥೆಗಳು, ಶ್ರೀ ಮದ್ವೇಂಕಟ ಪುರವೈಷ್ಣವಾದಿ ನಾನಾಮತೋತ್ಪತ್ತಿ ಸಿದ್ಧಾಂತ ಸುಧಾರಸ.

III

೧) ಲೇಖಕರ ಹೆಸರಿಗೆ ಸಂಬಂಧಿಸಿದ ತಿದ್ದುಪಡಿಗಳು :

- ಕ್ಯಾಂಬಲ್ (III - ೨೪೦) : ಕಾಲಿನ್ ಕ್ಯಾಂಬಲ್.
- ಕಿತ್ತೂರ ಬಸವಾರ್ಯ (III - ೪೬೯) : ಬಸವಾರ್ಯ ಚೆನ್ನಬಸವಾರ್ಯ ಹಿರೇಮಠ.
- ಕುಂಡಲಗಿರಿಯಾಚಾರ್ಯ (III - ೨೨೪) : ಕುಂಡಲಗಿರಿಯಾಚಾರ್ಯ ಬ್ರಹ್ಮ ವೆಂಕಟಾಚಾರ್ಯ.
- ಕೆರೂರು ವಾಸುದೇವಾಚಾರ್ಯ (III - ೨೩೧) : ವಾಸುದೇವಾಚಾರ್ಯ ಸ್ವಾಮಿರಾಯಚಾರ್ಯ ಕೆರೂರ.
- ಗರಣಿ ಕೃಷ್ಣಾಚಾರ್ಯ (III - ೨೨೧, ೪೬೮) : ಕೃಷ್ಣಾಚಾರ್ಯ ತಿಮ್ಮಣ್ಣಾಚಾರ್ಯ ಗರಣಿ.
- ಘಟ್ಟಿವಾಳಯ್ಯ (I - ೧೮೯) : ಘಟ್ಟಿವಾಳ ಮುದ್ದಣ್ಣ.
- ಜೇಗ್ಲರ್ (III - ೨೪೦) : ಫ್ರೆಡ್ರಿಕ್ ಝೀಗ್ಲರ್.
- ಎಸ್.ಜಿ. ನರಸಿಂಹಾಚಾರ್ಯ (III - ೨೧೮) : ಶ್ರೀರಂಗಪಟ್ಟಣ ಗೋವಿಂದರಾಜ ನರಸಿಂಹಾಚಾರ್ಯ.
- ಪಾಂಡುರಂಗ ಚಿಂತಾಮಣಿ ಪೇಟಕರ (III - ೨೩೫) : ಪಾಂಡುರಂಗ ವೆಂಕಟೇಶ ಚಿಂತಾಮಣಿ ಪೇಟಕರ.
- ಬೂದಿಹಾಳ ಬಸವಾರ್ಯ (III - ೪೬೯):ಬಸವಾರ್ಯ ಬೂದಪ್ಪಯ್ಯ ಬೂದಿಹಾಳಮಠ-
- ಬೋಳಾರ ಬಾಬೂರಾವ್ (III - ೩೯೫) : ಬೋಳಾರ ಬಾಬೂರಾವ್ ನರಸಪ್ಪಯ್ಯ.
- ಭಾಗವತ ಕೃಷ್ಣಸ್ವಾಮಿ (III - ೨೬೦) : ಕೃಷ್ಣಸ್ವಾಮಿ ನಾರಾಯಣಪ್ಪ ಭಾಗವತ-
- ಭೂಮೀಶಕವಿ (III - ೨೧೪) : ಫಕೀರಪ್ಪ ಚನ್ನಬಸಪ್ಪ ಕರಡೀಗುಡ್ಡ.
- ಮಹಮೂರ್ತಿ (III - ೧೩೫) : ಸುರಪುರದರೆಯಪ್ಪ.
- ಮೇಬನ್ (III - ೨೪೦) : ಟಿ.ಜಿ. ಮಾಬೆನ್.
- ಮೋಗ್ಲಿಂಗ್ (III - ೨೪೦) : ಹರ್ಮನ್ ಮೋಗ್ಲಿಂಗ್.

- ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿ (III - ೪೬೪) : ರಾಮಶೇಷಶಾಸ್ತ್ರೀ ಸಾಂಬಶಾಸ್ತ್ರೀ ಮೋಟಗಾನಹಳ್ಳಿ.
- ರೀವ್ (III - ೨೪೦) : ವಿಲಿಯಮ್ ರೀವ್.
- ನಂದಳಿಕೆ ಲಕ್ಷ್ಮೀನಾರಾಣಪ್ಪ (III - ೨೧೯) ನಂದಳಿಕೆ ಲಕ್ಷ್ಮೀನಾರಾಯಣಯ್ಯ.
- ವರಾಹತಿಮ್ಮಪ್ಪ (III - ೧೧೪ - ೧೫೧) : ನಕ್ಕರ ಕೃಷ್ಣದಾಸ.
- ವರ್ತ್ (III - ೨೪೦) : ಡಬ್ಲ್ಯೂ ವರ್ತ್.
- ವೀಗಲ್ (III - ೨೪೦) : ಜಿ.ಎಚ್. ವೈಗಲ್.
- ವೆಂಕಟಾಚಲ ಪಂಡಿತ (III - ೨೨೩) : ಎಂ.ಆರ್. ವೆಂಕಟಾಚಲಪತಿ ಶೆಟ್ಟಿ.
- ಬಿ. ವೆಂಕಟಾಚಾರ್ (III - ೨೨೩, ೪೬೭ - ೬೮) : ಬಿಂಡಿಗನವಲೆ ವೆಂಕಟಾಚಾರ್ ಗರುಡಾಚಾರ್.
- ಶಿವರುದ್ರ ಸೋಮಪ್ಪ ಕುಲಕರ್ಣಿ (III - ೨೨೫) : ಶಿವರುದ್ರಪ್ಪ.
- ಶ್ರೀಕಂಠೇಗೌಡ, ಬಿ.ಎ., ಬಿ.ಎಲ್. - (III - ೪೬೬) : ಎಂ.ಎಲ್. ಶ್ರೀಕಂಠೇಗೌಡ.
- ಶೇಷಗಿರಿ ತುರಮರಿ (III - ೨೨೮) : ಶೇಷಗಿರಿ ಚುರಮರಿ.
- ಶೇಷದಾಸ (III - ೨೩೯) : ಶೇಷಪ್ಪದಾಸ.
- ಸ್ಯಾಂಡರ್ಸ್‌ನ್ (III - ೨೪೦) : ಡ್ಯಾನಿಯಲ್ ಸ್ಯಾಂಡರ್ಸನ್.

೨) ಕೃತಿಯ ಹೆಸರಿಗೆ ಸಂಬಂಧಿಸಿದ ತಿದ್ದುಪಡಿ :

- ಲಕ್ಷ್ಮಣಾ ವಿಲಾಸ (III - ೨೬೦) ಶ್ರೀ ಕೃಷ್ಣ ಲಕ್ಷ್ಮಣಾವಿಲಾಸ.
- ಇಂಗ್ಲೀಷ್ ಕನ್ನಡ ನಿಘಂಟು (III - ೩೯೫) ಲಘುಕೋಶ ಇಂಗ್ಲೀಷ್ ಕನ್ನಡವೂ ಎಂಬ ನಿಘಂಟು.
- ಔರಂಗಜೇಬ (III - ೨೩೧) ಭ್ರಾತೃಘಾತಕನಾದ ಔರಂಗಜೇಬ.
- ನಾಗಾನಂದ ನಾಟಕ ಕಥೆ (III - ೨೨೧) ಕರ್ನಾಟಕ ನಾಗಾನಂದ ಕಥೆ.

- ಹವ್ಯಪಾಕ ಪದ್ಧತಿ (III - ೨೨೧, ೪೬೮) ಹವ್ಯಪಾಕ ಪದ್ಧತಿ ಎಂಬ ಪಾಕಶಾಸ್ತ್ರವು.
- ಕರ್ಣಾಟಕ ಭಾಷಾಕರ (III - ೨೨೧) : ಕರ್ನಾಟಕ ಭಾಷಾಕರ ಎಂಬ ಅಕಾರಾದಿ ನಿಘಂಟು.
- ರೇಣುಕಾರ್ಯ ವಿಜಯ (III - ೨೧೮) ರೇಣುಕ ವಿಜಯಂ.
- ದಿವ್ಯ ಸುಂದರಿ (III - ೪೬೯) ದಿವ್ಯ ಸುಂದರಿ ಅಥವಾ ದೀರ್ಘ ಪ್ರಯತ್ನ.
- ವ್ಯಾಕರಣ ಬೋಧಿನಿ (III - ೨೪೦) ಕನ್ನಡ ವ್ಯಾಕರಣ.
- ಸಾನಂದ ಗಣೇಶನ ಕಥೆ (III - ೪೬೪) ಯಕ್ಷಗಾನ ಸಾನಂದ.
- ಭೂಗೋಳ ಮಾಲಿಕೆ (III - ೪೬೫) ಭೂಗೋಳ ಮಾಲಿಕೆ ಎಂಬ ನಿಘಂಟು.
- ಮಹಾಭಕ್ತ ವಿಜಯ (III - ೪೬೫) ಮಹಾಭಕ್ತ ವಿಜಯ.
- ವಾಗ್ವಿಧಾಯಿನಿ (III - ೪೬೫) ಕರ್ನಾಟಕ ವಾಗ್ವಿದಾಯಿನಿ.
- ಇಂಗ್ಲಿಷ್ ಕನ್ನಡ ಕೋಶ (III - ೨೪೦) ಇಂಗ್ಲಿಷ್ ಕನ್ನಡ ಶಬ್ದಕೋಶ.
- ಕನ್ನಡ ವ್ಯಾಕರಣ (III - ೨೪೦) A Gramar of the Kannada Language.
- ವಿಧವೆಗಳ ಮುಂಡನ ಅನಾಚಾರ (III -೨೨೭) : ವಿಧವಾವಪನ ಅನಾಚಾರ ಮಂಡನ.
- ರಾವಣವೇದವತಿ (III - ೪೬೭) ಕೀರ್ತನೆ ರಾ.
- ಜೀವಿಗರ ಚಿಂತಾಮಣಿ (III - ೨೨೫) ಬೇನಿಗರ ಲಘು ಚಿಂತಾಮಣಿ.
- ರಾಜಶೇಖರ ಚರಿತ್ರೆ (III - ೨೨೪) : ವಿವೇಕ ಚಂದ್ರಿಕೆ ಎಂಬ ರಾಜಶೇಖರ ಚರಿತ್ರೆ.

IV

ಅಜ್ಞಾತ ಕೃತಿಗಳ ಕರ್ತೃ ನಿರ್ದೇಶ

- ಪಂಚಾಶಿಕೆ (III - ೨೭೭) ಇಮ್ಮಡಿ ಗುರುಸಿದ್ಧ.
- ಘೋರಾಸುರ ಯುದ್ಧ (III - ೨೮೪) ಇಮ್ಮಡಿ ತೋಂಟದಾರ್ಯ.
- ಮಂತ್ರ ಮಹಾತ್ಮ್ಯದ ಕಂದ (III - ೪೬೭) ಕೊಂಡಗುಳಿ ಕೇಶೀರಾಜ.

ಶಿವಪ್ರಾರ್ಥನಾ ಶತಕ (III - ೨೬೮) ಕೊಂಡಗುಳಿ ಕೇಶೀರಾಜ.

ಬಸವ ಸ್ತುತಿ (III - ೨೯೫) ಐನೂಲಿ ಕರಿಬಸವಾರ್ಯ.

ಮಡಿವಾಳಯ್ಯಗಳ ತಾರಾವಳಿ (III - ೨೯೩) ಕರಸ್ಥಲದ ನಾಗಲಿಂಗ.

ಮೂರೇಳು ದೀಕ್ಷೆಯ ಪದ (III - ೨೯೮) .

ಅರವತ್ತು ಮೂವರು ಪ್ರಮಥಗಣಾಧೀಶ್ವರರ ತ್ರಿವಿಧಿ (III-೩೧೬) ಕಳಲೆ ನಂಜರಾಜ.

ಅಸಂಖ್ಯಾತ ರಗಳೆ (III-೩೨೬) ಮಲ್ಲಿನಾಥ ಗೇರಸೊಪ್ಪೆ ಶಾಂತಯ್ಯ.

ಸುಗಂಧಪಾರಿಜಾತ (III-೩೦೮) ಚಾವುಂಡರಾಯ.

ಮೌನೇಶ್ವರ ಬಾಲಲೀಲೆ (III-೩೦೦) ಚಿನ್ನದಗುಡಿ ಬೊಳವ್ರಯ್ಯ.

ಮೋಹಾನುಭವ ಮುಕುರ (III-೨೬೭) ಜನ್ನ.

ಚಿತ್ಕ್ರಿಯಾ ಸಂಗ್ರಹ (III-೩೯೭) ಜಿಗುನಿ ಮರುಚಾರ್ಯ.

ಗಂಗೇಗೌರೀ ಸಂವಾದ (III-೩೧೦) ತರಳ ಚರಪತಿ.

ಲಕ್ಷ್ಮೀ ಸ್ವಯಂವರ ಸೋಬಾನೆ (III-೩೧೪) ತಿರುಮಲಾರ್ಯ.

ಗುರುರಗಳೆ (III-) ತ್ರಿಭುವನ ತಾತ.

ಮಹಾದೇವರಗಳೆ (III-).

ಪುತ್ರಕಾಮೇಷ್ಟಿ (III-೩೨೬) ದೇವೀದಾಸ.

ಸಿದ್ಧೇಶ್ವರ ತ್ರಿವಿದಿ (III-೨೯೦-೯೧) ನಂದಿ.

ಪಾರ್ವತೀ ಸ್ತುತಿ (III-೨೯೫) ನಿಜಗುಣರನ ಯೋಗಿ.

ಶಿವತತ್ವಸಾರ (III-೨೭೯) ಮಲ್ಲಿಕಾರ್ಜುನ ಪಂಡಿತಾರಾಧ್ಯನ ಶಿಷ್ಯ.

ಬಸವಲಿಂಗ ನಾಮಾಷ್ಟೋತ್ತರ (III-೨೯೪).

ಬಸವೇಶ್ವರ ಸ್ತೋತ್ರ (III-೨೭೭)ಪಾಲ್ಕುರಿಕೆ ಸೋಮನಾಥ.

ಬಸವೇಶ್ವರ ರಗಳೆ (III-೨೮೬) ಪಾಲ್ಕುರಿಕೆ ಸೋಮನಾಥ.

- ಗಯ ಚರಿತ್ರೆ (III-೩೨೦) ಮಧ್ವದಾಸ.
- ಬಭ್ರುವಾಹನ ಕಾಳಗ (III-೨೮೨) ಮಧ್ವದಾಸ.
- ನೀಲಾಂಬಿಕಾ ಸ್ತುತಿ (III-೨೮೨) ಮುರಿಗಾಶಾಂತವೀರ.
- ಶಬ್ದಾಗಮ (III-೨೮೯) ಮುರಿಗಾಶಾಂತ ವೀರ.
- ಕೆಳದಿನೃಪವಿಜಯ (III-೩೧೪) ಕೆಳದಿ ಲಿಂಗಣ್ಣ.
- ವೇದಾಂತ ವಿವೇಕಸಾರ (III-೩೧೯) ವಾಸುದೇವಯತೀಂದ್ರ.
- ಕೃಷ್ಣಾರ್ಜುನಕಾಳಗ (III-೩೦೦) ವಿಮಲಾನಂದ.
- ವಿರೂಪಾಕ್ಷ ಸ್ತುತಿ (III-೨೮೭) ವಿರೂಪಾಕ್ಷ ಪಂಡಿತ.
- ಶುಕಸಪ್ತತಿ (III-೨೯೭, ೨೯೯) ಶರಜಾನಾಗ.
- ಇಷ್ಟಲಿಂಗ ಚಾರಿತ್ರ (III-೨೮೯) ಶಂಕರದೇವ.
- ಪುನರ್ದೀಕ್ಷೆ ರಗಳೆ (III-೨೮೩) ಶಂಕರದೇವ.
- ಪುಷ್ಪದಷ್ಟಕ (III-೨೮೪) ಶಂಕರದೇವ.
- ಮನೋವಿಕಾರ ರಗಳೆ (III-೨೮೩) ಶಂಕರದೇವ.
- ಶಿವದರ್ಶನಾಷ್ಟಕ (III-೩೯೭) ಶಂಕರದೇವ.
- ಆಚರಣ ಸಂಬಂಧ ಷಟ್ಪದಿ (III-೨೭೬)ಸಂಪಾದನೆ ಸಿದ್ಧವೀರ.
- ಲಿಂಗಸ್ತೋತ್ರ ಷಟ್ಪದಿ (III-೨೭೬) ಸಂಪಾದನೆ ಸಿದ್ಧವೀರ.
- ನಿರಾಳ ಗುರುಸ್ತೋತ್ರ (III-೩೦೨) ಷಣ್ಮುಖಸ್ವಾಮಿ.
- ಪುರಾತನ ಶರಣೆಯರ ತ್ರಿವಿಧಿ (III-೨೮೬) ಸೋಮಾಕಟ್ಟೆ ಚೆನ್ನವೀರಸ್ವಾಮಿ.
- ಸುಭದ್ರಾ ಕಲ್ಯಾಣ (III-೩೨೬) ಹಟ್ಟಂಗಡಿ ರಾಮಭಟ್ಟ.
- ಬಸವ ಪವಾಡದ ರಗಳೆ (III-೨೮೪) ಹಂಪೆಯ ಹರಿಹರ.
- ಮಹಿಮಾಷ್ಟಕ (III-೨೮೪) ಹಂಪೆಯ ಹರಿಹರ.

ಪ್ರೇಮಾಷ್ಟಕ (III-೩.೯೭) ಹಂಪೆಯ ಹರಿಹರ.

ಕುಶಲವರ ಕಾಳಗ (III-೩.೧೯) ಪುಟ್ಟಣ್ಣ.

ಪಾಂಡವರ ಚರಿತ್ರ (III-೩.೦೪) ಪುಟ್ಟಣ್ಣ.

ಇಮ್ಮಡಿ ತಮ್ಮರಾಯ ಕಂಪರಾಯಪದ (III-೨೯೮) ಹೊನ್ನ.

ಅಲ್ಲಮ ಪ್ರಭು ಸಂಗೀತಪದ (III-೨೯೮) ಹೊನ್ನ.

V

ಸಂಕೀರ್ಣ

ಒಬ್ಬನೇ ಕರ್ತೃವಿನ ಭಿನ್ನ ಭಿನ್ನ ನಾಮದೇಯ :

ಇಮ್ಮಡಿ ತೋಂಟದಾರ್ಯ (II-೨೩೬).

ಪರಮಭಕ್ತ (III-೫೩೪).

ಬ್ರಹ್ಮನಾಂಕ (III-೧೫೪).

ಚಂದ್ರಸಾಗರವರ್ಣಿ (III-೧೬೪).

ನಂದಿನಾಥ (III-೫೪).

ನಂದಪ್ಪ (III-೧೯೮).

ಪೆಮ್ಮಣ್ಣ (II-೨೩.೨).

ನೇಮಿವ್ರತಿ (II-೩೯೭).

ಮುರಿಗೆ ಶಾಂತವೀರ (II-೨೧೨).

ಮುರಿಗೆದೇಶಿಕ (II-೨೯೧).

ಮೈಲಾರದ ಬಸವಲಿಂಗ (III-೪೫೬).

ಶಿವಯೋಗೀಶ್ವರ (III-೧೬೧).

- ಮಗ್ಗೆಯ ಮಾಯಿದೇವ (II-೭೦).
- ಬಸವೇಶ (II-೩೪೪).
- ಸಂಪಾದನೆ ಸಿದ್ಧವೀರ (II-೩೨೪).
- ಮುಪ್ಪಿನಯ್ಯ (II-೫೫೫).
- ಮಹಾಲಕ್ಷ್ಮಿ (III-೮೧).
- ನಂದಳಿಗೆ ಲಕ್ಷ್ಮೀನಾರಾಣಪ್ಪ (III-೨೮೯).

(೩) **ತಪ್ಪಾದ ಲೇಖಕರ ಹೆಸರಿನ ತಿದ್ದುಪಡಿ**

- ಚಿನ್ನಬಸವ ಶಿವಯೋಗಿ (III-೯೪) ಸೋಮೇಕಟ್ಟೆ ಚಿನ್ನವೀರಸ್ವಾಮಿ.
- ವೇಣುಗೋಪಾಲವರಪ್ರಸಾದ (II-೫೦೬) ತಿಮ್ಮಕವಿ.
- ನರಸಿಂಹ (II-೩೯೩) ಲಕ್ಷ್ಮಯ್ಯ.
- ಪ್ರಭುದೇವ (I-೧೮೧) ಪಾಲ್ಕುರಿಕೆ ಸಂಗಯ್ಯ.
- ಮರುಳದೇವ (I-೨೦೩) ಮರುಳಶಂಕರದೇವ.
- ಶೃಂಗಾರ ಕವಿ ಹಂಸರಾಜ (II-೨೭೪) ರತ್ನಾಕರವರ್ಣಿ
- ಅಜಗಣ್ಣ (I-೧೯೫) ಮುಕ್ತಾಯಕ್ಕ.
- ಬಸವಲಿಂಗ (III-೨೫೯) ಪಾ. ಸೋಮನಾಥ.
- ಬಸವ (I-೧೭೫) ಬಾಲಸಂಗಯ್ಯ.
- ಮುರಿಗೆ ಶಾಂತವೀರ (II-೫೭) ಇ. ಗುರುಸಿದ್ಧ.
- ಪ್ರಭುದೇವ (I-೧೭೯) ಗೂಳೂರ ಸಿದ್ಧವೀರ.
- ಸಿಂಹರಾಜ (II-೪೨೦) ಕಲ್ಯಾಣ ಕೀರ್ತಿ.
- ಶೀಲವಂತಯ್ಯ (II-೨೦೨) ಚಿನ್ನಮಲ್ಲಿ.
- ಜಯಬಂಧುನಂದನ (I-೧೬) ಚಾವುಂಡರಾಯ.
- ಪಾಲ್ಕುರಿಕೆಸೋಮ (I-೩೪೧) ಪುಲಿಗೆರೆ ಸೋಮ.

ಕೆಲವು ಕೃತಿ/ಕರ್ತೃಗಳ ಬಗೆಗೆ ಪೂರಕ ಮಾಹಿತಿ :

- ಚಾಟುವಿಠಲನಾಥ (II-೨೨೨) ಭಾಗವತವನ್ನು ೫ ಜನ ಬರೆದಿದ್ದಾರೆ.
- ದುರ್ಗಸಿಂಹ (I-೭೭) ಈತ ಕ್ರಿ.ಶ. ೭-೫-೧೦೩೭ ರಲ್ಲಿ ನಿಪ್ಪಾಣಿ ಶಾಸನ ರಚಿಸಿದ್ದಾನೆ.
- ದೇವಕವಿ (I-೩೬೩) ಈತನ ಹೆಸರಿನಲ್ಲಿರುವ `ಕುಸುಮಾವಳಿ ಕಾವ್ಯ' ಕಮಲಭವನದು
- ನೃಪತುಂಗ (I-೧೭) ಈತ ಹೆಸರಿನಲ್ಲಿನ ಕವಿರಾಜಮಾರ್ಗದ ಕರ್ತೃ ಶ್ರೀ ವಿಜಯ
- ನಾರಕ್ಷರಕುಕ್ಷಿ (III-೧೧೦) ಈತ ಹೆಸರು ಮಾಧವ
- ಸಿಂಹರಾಜ (II-೪೨೦) ಹರದನೀತಿಯ ಕರ್ತೃ (ಕಂ)
- ಕೇಶಿಯಣ್ಣ (I-೩೬೮) ಈತನ ಚಂಪೂವಿನ 'ಸಿಂಹಪ್ರಾಯೋಪಗಮನ' ಲಭ್ಯವಿದೆ.
- ಧಾರಾಪುರದ ತಿಮ್ಮಪ್ಪದಾಸ (III-೨೨೮) 'ಲಾಕ್ಷಾಗೃಹದಹನ' ಮತ್ತು 'ಬಕಾಸುರವಧೆ' ಗಳು ಭಿನ್ನ ಕೃತಿಗಳಾಗಿರದೆ ಒಂದೇ ಕೃತಿಯ ಭಾಗಗಳಾಗಿವೆ.
- ಮುಮ್ಮಡಿತಮ್ಮ (II-೪೫೦)ನ ಯಕ್ಷಗಾನ ಕೃತಿಯ ಸಂಪೂರ್ಣ ಹೆಸರು `ನಂದಗಿರಿ ಮಹಿಮೆ'.
- ವೃತ್ತವಿಲಾಸ (I-೪೭೬)ನ `ಶಾಸ್ತ್ರಸಾರ' ಸ್ವತಂತ್ರ ಕೃತಿಯಲ್ಲ.
- ವಿರಕ್ತ ತೋಂಟದಾರ್ಯ (II-೨೮೧)ನ 'ಚಿದಾನಂದಸಿಂಧು' ಲಕ್ಷ್ಮಿದ್ದು ಚಂಪೂವಿನಲ್ಲಿದೆ.
- ಪರ್ವತ ಶಿವಯೋಗೀ ಎಳಂದೂರು (II-೩೯೭) ಈತ ರಚಿಸಿದ ಶಾಂತವೀರೇಶ್ವರ ಅಂಕಿತದಲ್ಲಿ ಏಕೋತ್ತರ ಶತಸ್ಥಲ ಪ್ರತಿಪಾದನೆಯ ವಸ್ತುವನ್ನುಳ್ಳ ೧೦೦೩ ವಚನಗಳ ೬ ಪ್ರತಿ ಲಭ್ಯ.
- ಹೊನ್ನವಳ್ಳಿ ಕರಿಸಿದ್ದೇಶ್ವರ ಮಠದಲ್ಲಿ ೬೦೦೦ಕ್ಕೂ ಮೀರಿದ ವಚನಗಳನ್ನುಳ್ಳ ಓಲೆ ಕಟ್ಟೊಂದಿದೆ. ಅದರಲ್ಲಿ ಸಿದ್ಧರಾಮನ ೧೪೩೪ ವಚನ/ತ್ರಿವಿಧಿಗಳೂ, ನೀಲಮ್ಮನ ೨೮೪ ವಚನಗಳು, ಅಕ್ಕಮಹಾದೇವಿಯ ೨೧೨ ವಚನಗಳೂ ಇವೆ.
- ಸೋಮೇಕಟ್ಟೆ ಚೆನ್ನವೀರಸ್ವಾಮಿಗಳ ಹಾಗೂ ಸೋದೆ ಸದಾಶಿವರಾಯನ ವಿಪುಲ ಕೃತಿಗಳು ಲಭಿಸಿದ್ದು ಪ್ರಕಟವಾಗಿವೆ.

ಜನಪದ ಸಂಸ್ಕೃತಿ

(ಗ್ರಹಿಕೆಯ ನೆಲೆಗಳು : ಒಂದು ತಾತ್ವಿಕ ಚಿಂತನೆ)

ಡಾ|| ಬಸವರಾಜ ಕಲ್ಗುಡಿ

ಕರ್ನಾಟಕದ ಜನಪದ ಸಂಸ್ಕೃತಿಯನ್ನು ಪರಿಚಯಿಸುವ, ವಿವರಿಸುವ ಕೆಲಸವು ಬಹಳಷ್ಟು ನಡೆದಿದೆ. ಈ ಮೂವತ್ತು ನಲವತ್ತು ದಶಕಗಳಲ್ಲಿ ಸಂಗ್ರಹ, ವಿವರಣೆ, ವ್ಯಾಖ್ಯಾನ - ಹೀಗೆ ಹಲವು ವಿಧಗಳಲ್ಲಿ ಈ ಕೆಲಸವು ಸಾಕಷ್ಟು ನಡೆದಿದೆ. ಈ ಲೇಖನದಲ್ಲಿ ನಾನು ಕರ್ನಾಟಕದ ಜನಪದ ಸಂಸ್ಕೃತಿಗಳನ್ನು ಪರಿಚಯಿಸುವ ಕೆಲಸವನ್ನೇನೂ ಮಾಡುವು ದಿಲ್ಲ. ಅದು ಒಂದು ರೀತಿಯಲ್ಲಿ ಸಂಗ್ರಹದ ಕೆಲಸ. ಅಂಥ ಬರವಣಿಗೆಯ ಬಗ್ಗೆ ಅಷ್ಟು ಆಸಕ್ತಿ ನನಗಿಲ್ಲ. ಆಸಕ್ತಿಯುಳ್ಳ ವಿದ್ವಾಂಸರು ಸಂಬಂಧಪಟ್ಟ ಅಧ್ಯಯನಗಳನ್ನು ಗಮನಿಸುತ್ತಾರೆಂಬ ನಂಬಿಕೆ ನನಗಿದೆ. ಜನಪದ ಸಂಸ್ಕೃತಿಗಳನ್ನು ಕುರಿತಂತೆ ಈ ಲೇಖನವನ್ನು ಬರೆಯ ಬೇಕೆಂಬ ಒತ್ತಾಯ ನನ್ನಲ್ಲಿ ಮೂಡಿದ್ದು, ಜನಪದ ಸಂಸ್ಕೃತಿಯನ್ನು ಕುರಿತು ನಮಗಿರುವ ಗ್ರಹಿಕೆಯ ಬಗೆಗೆ ನನ್ನಲ್ಲಿ ಹುಟ್ಟಿರುವ ತಗಾದೆಯೇ ಕಾರಣ. ಜನಪದ ಸಂಸ್ಕೃತಿಗಳು ಎಂದರೇನು ? ನಾವು ಈವರೆಗೆ ಅವುಗಳನ್ನು ಹೇಗೆ ಗ್ರಹಿಸಿದ್ದೇವೆ ? ಅದನ್ನು ಹೀಗೆ ವಿವರಿಸಬಹುದು: ಸಮುದಾಯವೆನ್ನುವ ಜೀವನ ಕ್ರಮವು ಛಿದ್ರಗೊಂಡ ವಾತಾವರಣದಲ್ಲಿ ನಾವು ಈಗ ಬದು ಕುತ್ತಿದ್ದೇವೆ. ಸಮುದಾಯವನ್ನು ಒಡೆದು ಆಳುವ ವಾತಾವರಣ ಈಗ ಜಾಗೃತ ಸ್ಥಿತಿಯಲ್ಲಿದೆ. ವೈಯಕ್ತಿಕತೆ ; ವಸ್ತು ಭೋಗದ ಪ್ರಪಂಚ, ಇವು ಮನುಷ್ಯನನ್ನು ಇಂದು ಒಂಟಿಯಾಗಿ ಮಾಡಿರುವುದಲ್ಲದೆ, ಆ ಸ್ಥಿತಿಯನ್ನೇ ಮುಖ್ಯವೆಂದು ಭಾವಿಸುವ ಹಾಗೆ ಮಾಡಿವೆ. ಈ ಹಿನ್ನೆ ಲೆಯ ಮನಸ್ಸು ಜನಪದ ಸಂಸ್ಕೃತಿಯನ್ನು ತನ್ನಿಂದ ಭಿನ್ನವೆಂದೂ ಪ್ರಸ್ತುತವಲ್ಲದ್ದೆಂದೂ ತಿಳಿಯುತ್ತದೆ.

ಜನಪದ ಸಂಸ್ಕೃತಿಗಳ ಅಧ್ಯಯನದ ಪ್ರಾರಂಭದ ಹಂತದಲ್ಲಿ ಇಂಥ ಗ್ರಹಿಕೆಯು ಇರಲಿಲ್ಲವೆನ್ನುವುದು ಸ್ಪಷ್ಟ. ಶಂಭಾ ಜೋಶಿಯವರ ಸಾಂಸ್ಕೃತಿಕ ಚಿಂತನೆಗಳಲ್ಲಿ ಜನಪದ ವೆನ್ನುವುದು ಬೇರೆಯದೇ ಆದ ಆಶಯವನ್ನು ಒಳಗೊಂಡಿದೆ. ಜನಪದ ಸಂಸ್ಕೃತಿ ಎಂದರೆ ಸಮುದಾಯ ಬದುಕಿನ ಆರೋಗ್ಯಕರ ಬೆಳವಣಿಗೆಗೆ ಹಾತೊರೆಯುವ, ಆ ನೆಲೆಗೆ ಧಾವಿಸುವ ಬದುಕಿನ ಕ್ರಮವೆಂದೇ ಇವರ ತಾತ್ವಿಕ ಗ್ರಹಿಕೆ. ಕರ್ನಾಟಕದ ಜನಬದುಕಿನಲ್ಲಿ ಸಾಮುದಾಯಿಕ ರಚನೆಗಳು ಇದ್ದಿರಬಹುದಾದ ನೆಲೆಗಳನ್ನು ಹುಡುಕುವುದು ಅವರ ಅಧ್ಯಯನದ ಮುಖ್ಯ ಮಾದರಿಯಾಗಿತ್ತು. ಈ ಅಧ್ಯಯನವು ವಿದ್ವಾಂಸನೊಬ್ಬನ ಅಕಡೆಮಿಕ್ ಅಪೇಕ್ಷೆ ಮಾತ್ರವೇ

ಆಗದೆ ವರ್ತಮಾನದ ಬದುಕಿನಲ್ಲಿ ಅಂಥ ಸಂಸ್ಕೃತಿಯ ವಿಧಾನಗಳನ್ನು ಮೈಗೂಡಿಸಿಕೊಳ್ಳು ವುದೂ ಆಗಿತ್ತು.

ಜನಪದ ಅಧ್ಯಯನವು ಅಕಡೆಮಿಕ್ ಶಿಸ್ತಿಗೆ ಅಳವಟ್ಟು ವಿಶ್ವವಿದ್ಯಾಲಯಗಳಲ್ಲಿ ಅಭ್ಯಾಸಕ್ರಮಕ್ಕೆ ಗುರಿಯಾದಾಗ ನಾವು ಜನಪದ ಸಂಸ್ಕೃತಿಯನ್ನು ಗ್ರಹಿಸಿದ ಕ್ರಮವೇ ಬೇರೆ. ಆಧುನಿಕತೆ ನಮಗೆ ಜೀವನವನ್ನು ಮುರಿದು ನೋಡುವುದನ್ನು ಕಲಿಸಿತು. ಶಿಕ್ಷಣ ಕ್ರಮದಲ್ಲಿ ಇದರ ಪ್ರಭಾವ ಅಗಾಧವಾಯಿತು. ಜನಪದ ಅಧ್ಯಯನದ ತಾತ್ವಿಕ ನೆಲೆಗಳನ್ನು ಶಿಕ್ಷಣ ಕ್ರಮದಲ್ಲಿ ಹೀಗೆ ವರ್ತಮಾನದ ಬದುಕಿನ ವಿಧಾನಕ್ಕಿಂತ ಪುರಾತನವೆಂದೂ ಭಾವಿಸಲಾಯಿತು. ಜನಪದ ಸಂಸ್ಕೃತಿಗಳನ್ನು ಕುರಿತ ಈ ಗ್ರಹಿಕೆಯಲ್ಲಿ 'ಗ್ರಾಮೀಣ'ವೆನ್ನುವ ಪರಿಸರವನ್ನು ಮುಖ್ಯ ವಾಗಿ ಪರಿಭಾವಿಸಲಾಯಿತು. ಈ ಪರಿಭಾವನೆ 'ನಗರ' ವೆಂಬ ತತ್ವಕ್ಕೆ ವಿರುದ್ಧವೆಂದು ಗ್ರಹಿಸಲಾಯಿತು. ಈ ವೈರುಧ್ಯವು ಸಂಸ್ಕೃತಿಯ ಗ್ರಹಿಕೆಯಲ್ಲಿ ಆಧುನಿಕತೆಯು ಯಾವುದನ್ನು ತನ್ನ ವಿಶಿಷ್ಟಗುಣವೆಂದು ಭಾವಿಸುತ್ತದೋ ಅದಕ್ಕೆ ವಿರುದ್ಧವಾದದ್ದನ್ನೆಲ್ಲ ಜನಪದ ಸಂಸ್ಕೃತಿಗೆ ಆರೋಪಿಸಿತು. ಜನಪದ ಸಂಸ್ಕೃತಿಯನ್ನು ವಿವರಿಸುವಾಗ ಇಂಥ ಅನೇಕ ಲಕ್ಷಣಗಳನ್ನು ಹಿನ್ನೆಲೆಯಲ್ಲಿ ಇಟ್ಟುಕೊಂಡೇ ನಿರ್ವಚಿಸಿರುವುದನ್ನು ಗಮನಿಸಬಹುದು. ಇಲ್ಲಿ ಅಂಥ ಕೆಲವು ಅಂಶಗಳನ್ನು ಚರ್ಚೆಗಾಗಿ ಎತ್ತಿಕೊಳ್ಳಬಹುದು.

(1) **ಅಧೀನ ಸಂಸ್ಕೃತಿ** : ಈ ಲಕ್ಷಣವನ್ನು ಜನಪದ ಸಂಸ್ಕೃತಿಗಳಿಗೆ ಆರೋಪಿಸಲಾಗಿದೆ. ಇದು ಪ್ರಧಾನ ಸಂಸ್ಕೃತಿಗೆ ವಿರೋಧವಾಗಿ ಆರೋಪಿತವಾಗಿರುವ ಒಂದು ಲಕ್ಷಣ. ಗ್ರಾಮ-ನಗರದ ವೈರುಧ್ಯ ಪರಿಕಲ್ಪನೆಯೂ ಇಲ್ಲಿ ಸಹಜವಾಗಿಯೇ ಕ್ರಿಯಾತ್ಮಕವಾಗಿದೆ. 'ಪ್ರಧಾನ ಸಂಸ್ಕೃತಿ' ಎನ್ನುವುದು ಇಲ್ಲಿ ಸ್ವಾತಂತ್ರ್ಯೋತ್ತರ ಕಾಲದ ಆರ್ಥಿಕ, ಸಾಮಾಜಿಕ ಬದಲಾವಣೆಯಿಂದ ಪ್ರೇರಿತವಾದ ಒಂದು ಪದ. ನಗರೀಕರಣ, ಆಧುನಿಕತೆಯ ಭಾಗವಾಗಿ ಕಲ್ಪಿಸಿಕೊಂಡ ಒಂದು ನಿರ್ವಚನ. ಅಧೀನವೆಂಬುದರ ಲಕ್ಷಣದ ನಿರ್ವಚನೆಯೇ ಇದರ ಮುಖ್ಯ ಉದ್ದೇಶವೂ ಆಗಿದೆ.

(2) **ಮೌಖಿಕತೆ** : ಮೌಖಿಕತೆಯ ಸ್ವರೂಪವನ್ನು ಜನಪದ ಸಂವೇದನೆಯ ಒಂದು ಗುಣವೆಂದು ನಾವು ಭಾವಿಸಿಲ್ಲ. ಅದನ್ನು ಅಭಿವ್ಯಕ್ತಿಯ ಒಂದು ರೀತಿ ಎಂದು ಮಾತ್ರ ಗ್ರಹಿಸಿದ್ದೇವೆ. 'ಬಾಯಿಯಿಂದ ಬಾಯಿಗೆ ಹರಡುವಂಥದ್ದು, ಬರಹಕ್ಕೆ ಇಳಿಯುವಂಥದ್ದಲ್ಲ' ಎಂದು ವಿವರಿಸಿಯೂ ಇದ್ದೇವೆ. ಬರಹಕ್ಕೆ ವಿರುದ್ಧವಾಗಿ ಮೌಖಿಕತೆಯನ್ನು ವಿವರಿಸುವ ಈ ಪ್ರಯತ್ನವು ಒಂದು ಹಂತದಲ್ಲಿ ಸರಿ. ಆದರೆ ಬರಹದ ಅಧಿಕೃತತೆಯನ್ನು ಒಪ್ಪಿಕೊಂಡು ಬಿಟ್ಟಿರುವ ನಾವು ಮೌಖಿಕತೆಯನ್ನು ಆ ಮಾನದಂಡದಿಂದ ನೋಡುತ್ತ ಮೌಖಿಕ ಪರಂಪರೆಯನ್ನು ಅಧಿಕೃತವಲ್ಲವಾದ್ದರಿಂದ ಸಾಂಸ್ಕೃತಿಕವಾಗಿ ಅಷ್ಟು ಮಹತ್ವದ್ದಲ್ಲವೆಂದು

ತಿಳಿದಿದ್ದೇವೆ. ಬರಹ ವ್ಯಕ್ತಿಯನ್ನು ಅಧಿಕೃತಗೊಳಿಸುತ್ತದೆ. ವೈಯಕ್ತಿಕ ಚಹರೆಯನ್ನು ಸ್ಥಾಪಿಸುತ್ತದೆ. ಅದನ್ನು ಮುಖ್ಯವೆಂದು ನಾವು ತಿಳಿದಿದ್ದೇವೆ. ಈ ಹಿನ್ನೆಲೆಯಲ್ಲಿಯೇ ಮೌಖಿಕತೆಯ ಪರಂಪರೆ ಸಾಂಸ್ಕೃತಿಕವಾಗಿ ಮುಖ್ಯವಲ್ಲವೆಂದು ಭಾವಿಸಿದ್ದೇವೆ. ಜನಪದ ಸಂಗ್ರಹಗಳಲ್ಲಿ ನಾವು ಈಗ ಮಾಡುತ್ತಿರುವ ಮುಖ್ಯಕೆಲಸವೆಂದರೆ, ಈ ಜನಪದ ಅಭಿವ್ಯಕ್ತಿಗಳಿಗೆ ಅಧಿಕೃತತೆಯನ್ನು ಕೊಡುವುದು. ಸಂದರ್ಭದಿಂದ ಕಿತ್ತು ಮಾಡಿದ ಸಂಗ್ರಹ, ಯಾವುದೋ ವಕ್ತೃವಿನ ಪ್ರಾತಿನಿಧ್ಯದ ವಸ್ತುವಾಗಿರುತ್ತದೆ. ಹೀಗೆ ವಕ್ತೃಗಳನ್ನು ಪ್ರಮುಖ ಸ್ಥಾನಕ್ಕೆ ತರುವುದರ ಮೂಲಕ ಜನಪದ ಅಭಿವ್ಯಕ್ತಿಗೆ ಅಧಿಕೃತತೆಯನ್ನು ಕೊಡುವುದರ ಕಡೆಗೆ ನಾವು ಹೊರಟಿದ್ದೇವೆ. ಹೀಗೆ ಸಂಗ್ರಹ ಮಾಡಿದಾಗ ಅದನ್ನು ವಿವರಿಸಿಕೊಳ್ಳುವುದು ಹೇಗೆ ಎಂಬ ಪ್ರಶ್ನೆಯನ್ನು ನಾವು ಸುಲಭವಾಗಿ ಪರಿಹಾರ ಮಾಡಿಕೊಂಡೆವು. ಸಾಹಿತಿಯೊಬ್ಬನ ಸಾಹಿತ್ಯವನ್ನು ರಸಗ್ರಹಣ ದೃಷ್ಟಿಯಿಂದ ಹೇಗೆ ನೋಡುತ್ತೇವೋ ಆ ಮಾದರಿಯನ್ನು ಜನಪದ ಅಭಿವ್ಯಕ್ತಿಯ ವಿಶ್ಲೇಷಣೆಗೆ ಉಪಯೋಗಿಸಿದೆವು. ಹೀಗಾಗಿ ಬಹುಪಾಲು, ಸಂಗ್ರಹಗಳು ಕಥೆಗಾಗಿ ಸಂಗ್ರಹಿಸಿದ ಹಾಗೆ ತೋರುತ್ತವೆ. ಇಂಥ ಸಂಗ್ರಹಗಳ ಮಾದರಿಯನ್ನು ಅರಿಯದೆ, ಮುಂದೆ ಸಾಂಸ್ಕೃತಿಕ ವಿವರಣೆಗೆ ಅವುಗಳನ್ನು ಬಳಸಿಕೊಂಡ ಅನೇಕ ಬರವಣಿಗೆಗಳು ಪಾಶ್ಚಾತ್ಯರ ವಿಶ್ಲೇಷಣೆಯ ಕ್ರಮವನ್ನು ಅನ್ವಯಿಸಿಕೊಂಡಿರುವುದನ್ನು ನಾವು ನೋಡಿದ್ದೇವೆ. ತಪ್ಪು ದಾರಿಯ ಸಂಗ್ರಹಕ್ಕೆ ತಪ್ಪು ಮಾದರಿಯ ವಿಶ್ಲೇಷಣೆಯ ಕ್ರಮ ಸಹಜವಾದದ್ದೇ ಆಗಿದೆ. ಇಂಥ ವಿಶ್ಲೇಷಣೆಯ ಕ್ರಮಗಳು, ಜನಪದ ಸಂಸ್ಕೃತಿಯ ಸ್ವರೂಪದ ಗ್ರಹಿಕೆಗೆ ಯಾವ ರೀತಿಯ ಸಹಾಯವನ್ನೂ ಮಾಡಿದಂತೆ ತೋರುವುದಿಲ್ಲ.

ನನಗೆ ಅನ್ನಿಸುತ್ತಿರುವಂತೆ, ನಾವು ಈಗ ಜನಪದ ಸಂಸ್ಕೃತಿಯೆನ್ನುವುದರ ವ್ಯಾಖ್ಯೆಯನ್ನೇ ಭಿನ್ನವಾಗಿ ಗ್ರಹಿಸಬೇಕಾಗಿದೆ. ಈ ಲೇಖನದ ಪ್ರಾರಂಭದಲ್ಲಿಯೇ ನಾನು ವಿವರಿಸಲು ಪ್ರಯತ್ನಿಸಿದಂತೆ ಜನಪದ ಸಂಸ್ಕೃತಿ ಎನ್ನುವುದು ನಾವು ನಮ್ಮ ಬದುಕಿನಲ್ಲಿ ಯಾವ ಸಾಮುದಾಯಿಕ ಬದುಕಿನ ಸಂವೇದನೆಯನ್ನು ಕಳೆದುಕೊಂಡಿದ್ದೇವೆಯೋ ಅಂಥ ಸಂವೇದನೆಯೇ ಆಗಿದೆ. ಅಂಥದ್ದನ್ನು ಅರಿಯುವುದು ಮಾತ್ರವಲ್ಲ, ಅದನ್ನು ಮತ್ತೆ ನಮ್ಮ ಬದುಕಿನ ಭಾಗವಾಗಿ ರೂಢಿಸಿಕೊಳ್ಳುವುದು ಈಗ ತೀವ್ರವಾದ ಅವಶ್ಯಕತೆಯಾಗಿದೆ. ಸಾಮುದಾಯಿಕ ಸಂವೇದನೆಯನ್ನು ರೂಪಿಸುವ ಬದುಕಿನ, ಜೀವನ ವಿಧಾನಗಳೆಲ್ಲ ಜನಪದ ಸಂಸ್ಕೃತಿಯ ಆಶಯಗಳೇ. ಹೀಗೆ ಗ್ರಹಿಸಿದಾಗ ನಮ್ಮ ಸಂಶೋಧನೆಯ ಗ್ರಹಿಕೆ, ವಿಧಾನಗಳೆಲ್ಲವೂ ಆಮೂಲಾಗ್ರವಾಗಿ ಬದಲಾಗುತ್ತವೆ. 'ಜನಪದ'ವೆನ್ನುವುದು ಆಗ ಪಳೆಯುಳಿಕೆಯಾಗಿ ಇರುವುದಿಲ್ಲ. ಗ್ರಾಮವೆನ್ನುವ ವ್ಯಾಖ್ಯೆಯನ್ನು ಅದಕ್ಕೆ ಕೊಡಲಾಗುವುದಿಲ್ಲ. ಅದು ಅತ್ಯಂತ ಪ್ರಸ್ತುತವೂ ಅವಶ್ಯಕವೂ ಆದ ಸಂವೇದನೆಯಾಗಿ ನಮಗೆ ತೋರುತ್ತದೆ. ಜಾನಪದವೆನ್ನುವ

ಹೆಸರಿನಲ್ಲಿ ಏನನ್ನು ಬೇಕಾದರೂ ಸಂಗ್ರಹಿಸಲು ಆಗ ಸಾಧ್ಯವಿಲ್ಲ. ಅಲ್ಲದೆ ಈಗ ನಾವು ಜನಪದ ಅಭಿವ್ಯಕ್ತಿ ಎಂದು ಸಂಗ್ರಹಿಸಿದ ಅನೇಕ ಭಾಗವನ್ನು ಅನಿವಾರ್ಯವಾಗಿ ತೊರೆಯು ಬೇಕಾಗುತ್ತದೆ. ಜನಪದ ಸಂಗ್ರಹದಲ್ಲಿ ಸಂಸ್ಕೃತಿ ಸಂಕಥನಗಳ ದರ್ಶನ ಚಾರಿತ್ರಿಕ ಅನಿವಾರ್ಯತೆಯೆಂಬಂತೆ ರೂಪುಗೊಳ್ಳಬೇಕಾಗುತ್ತದೆ. ಈ ಅರ್ಥದಲ್ಲಿ ಜನಪದ ಸಂಸ್ಕೃತಿಯು ವ್ಯಾಖ್ಯೆ ಎಂದರೆ ನಾವು ಕಳೆದುಕೊಂಡ ಸಾಮುದಾಯ ಬದುಕಿನ ಸಂಕಥನವಷ್ಟೇ ಅಲ್ಲದೆ, ನಾವು ಕಟ್ಟಬೇಕಾದ ಸಾಮುದಾಯಕ ಬದುಕಿನ ಸಂಕಥನವೂ ಆಗಿಬಿಡುತ್ತದೆ. ಚರಿತ್ರೆ ವರ್ತಮಾನ ಎರಡೂ ಬೆರೆತು ಹೊಸರೀತಿಯ ಬೆಳವಣಿಗೆಗೆ ಇದು ದಾರಿ ಮಾಡಿಕೊಡ ಬೇಕಾಗಿದೆ.

'ಮೌಖಿಕತೆ' ಎನ್ನುವುದನ್ನು ಈ ಹಿನ್ನೆಲೆಯಲ್ಲಿ ಗಮನಿಸಿದರೆ ಅದನ್ನು ಸಾಮುದಾಯಿಕ ಸಂವೇದನೆಯ ತತ್ವವನ್ನಾಗಿಯೇ ಗ್ರಹಿಸಬೇಕು. ಬಾಯಿಂದ ಬಾಯಿಗೆ ಸಾಗುವುದಷ್ಟೇ ಅಲ್ಲ; ಸಮುದಾಯದ ಅರಿವಿನ, ಸಂವೇದನೆಯ ಅಂಗವಾಗುವುದು ಮೌಖಿಕತೆಯ ಲಕ್ಷಣ. ಮೌಖಿಕತೆಯು ಈಗ ಬರಹಕ್ಕಿರುವ ಅಧಿಕೃತತೆಯನ್ನು ತೊಡೆಯಬೇಕಾಗಿದೆ. ಬರವಣಿಗೆಗಿರುವ 'ವ್ಯಕ್ತಿ ಅಧಿಕೃತತೆ'ಯನ್ನು, 'ವ್ಯಕ್ತಿ ಪ್ರಾಧಾನ್ಯತೆ'ಯನ್ನು ಇಲ್ಲವಾಗಿಸಿದಾಗ ಅದು ಮೌಖಿಕತೆಯ ಸಂವೇದನೆಯ ಮಟ್ಟಕ್ಕೇರಿತು. ಬರವಣಿಗೆ ಮತ್ತು ಮೌಖಿಕತೆ ಇವೆರೆಡೂ ತಮ್ಮ ನಡುವಣ ಅಂತರವನ್ನು ಕಳೆದುಕೊಳ್ಳುವಂತೆ ಮಾಡಬಹುದಾದ ವಿನ್ಯಾಸವೇ ಹೀಗೆ ಆಗಬೇಕಾಗಿದೆ.

ಜನಪದ, ಜಾನಪದ, ಮತ್ತು ಜನಪದ ಸಂಸ್ಕೃತಿ ಇವುಗಳನ್ನು ಕುರಿತ ಗ್ರಹಿಕೆಯು ಬದಲಾಗಬೇಕಾದ ಅನಿವಾರ್ಯತೆ ಮತ್ತು ಅವಶ್ಯಕತೆಯನ್ನು ಈವರೆಗೆ ಈ ಸಣ್ಣ ಟಿಪ್ಪಣಿಯಲ್ಲಿ ಮಾಡಿದ್ದೇನೆ. ಬದಲಾದ ಗ್ರಹಿಕೆಯು ನಮ್ಮಲ್ಲಿ ಉಂಟುಮಾಡುವ ಸಂಶೋಧನೆಯ ಪರ್ಯಾಯ ನೆಲೆಗಳು ಕೇವಲ ಅಕೆಡೆಮಿಕ್ ತೀವ್ರತೆ, ಪಾಂಡಿತ್ಯವನ್ನಷ್ಟೇ ಅಲ್ಲ, ತನ್ಮೂಲಕ ಕ್ರಿಯಾತ್ಮಕ ಚಟುವಟಿಕೆಗೂ ಕಾರಣವಾಗಬೇಕೆನ್ನುವುದು ನನ್ನ ಒಳ ಆಶಯವಾಗಿದೆ.

ಚೆನ್ನಬಸವಣ್ಣನವರ ತಂದೆ ಯಾರು ?

ಡಾ. ಎಸ್. ವಿದ್ಯಾಶಂಕರ

ಚೆನ್ನಬಸವಣ್ಣನವರ ತಾಯಿ ಅಕ್ಕನಾಗಲಾಂಬಿಕೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ತಂದೆ ಯಾರು? ಎನ್ನುವುದರ ಬಗೆಗೆ ಚರ್ಚೆ ನಡೆದಿದೆ. ಚೆನ್ನಬಸವಣ್ಣನು ನಾಗಾಯಿ ಹಾಗೂ ಶಿವಸ್ವಾಮಿಯವರ ಮಗನೆಂದು ಸಿಂಗಿರಾಜ (ಸು. ೧೫೦೦) ಹೇಳಿದರೆ, ಕಕ್ಕಯ್ಯನ ಪ್ರಸಾದದಿಂದ ಜನಿಸಿದ ಎಂದು ಗುಬ್ಬಿಯ ಮಲ್ಲಣ್ಣನ ವೀರಶೈವಾಮೃತ ಮಹಾಪುರಾಣ (ಕಾಂಡ ೮, ಸಂಧಿ ೧, ಪದ ೧೨-೧೩), ಪ್ರೌಢರಾಯನ ಕಾವ್ಯ (ಸಂಧಿ ೧೯), ಗುರುರಾಜ ಚಾರಿತ್ರ (ಸಂಧಿ ೮), ಹಲಗೆ ದೇವರ ಶೂನ್ಯಸಂಪಾದನೆ, ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ ಇವೇ ಮೊದಲಾದ ಕೃತಿಗಳು ಹೇಳುತ್ತವೆ. ಬಸವಣ್ಣ ಕೊಟ್ಟ ಕರುಣ ಪ್ರಸಾದ ವನ್ನು ಸೇವಿಸಿ ಅಕ್ಕನಾಗಾಯಿ ಚೆನ್ನಬಸವಣ್ಣನನ್ನು ಪಡೆದಳೆಂದು ಚಾಮರಸ ಹೇಳುವನು (ಸಂಧಿ ೯, ಪ.೨೩). ನಾಗಲಾಂಬಿಕೆಯನ್ನು 'ಗಿರಿಸುತಾರೂಪು' (ಸಂ.೩, ಪ.೩೩) ಎಂದು ಬಣ್ಣಿಸುವ ವಿರೂಪಾಕ್ಷ ಪಂಡಿತನು ಚೆನ್ನಬಸವ ಪುರಾಣದಲ್ಲಿ ಶಿವನೇ ನಾಗಲಾಂಬಿಕೆಯ ಕನಸಿನಲ್ಲಿ ಬಂದು ಪ್ರಸಾದವನ್ನು ಅನುಗ್ರಹಿಸಲು ಚೆನ್ನಬಸವಣ್ಣನು ಜನಿಸಿದನೆಂದು ಹೇಳು ವನು (ಸಂಧಿ ೪). ಈ ಎಲ್ಲ ಉಲ್ಲೇಖಗಳಿಂದ (ಸಿಂಗಿರಾಜ ಹೊರತಾಗಿ) ಚೆನ್ನಬಸವಣ್ಣನ ಜನನದ ಕಥೆ ಕಾಲದಿಂದ ಕಾಲಕ್ಕೆ ಹೇಗೆ ರೆಕ್ಕೆ ಪುಕ್ಕ ಹಚ್ಚಿಕೊಂಡು ಬೆಳೆಯಿತು ಎನ್ನುವುದು ಕುತೂಹಲದ ಸಂಗತಿ. ಇವುಗಳಿಂದ ಧ್ವನಿತವಾಗುವ ಒಂದು ಅಂಶವೆಂದರೆ, ಚೆನ್ನಬಸಣ್ಣನು ಲೌಕಿಕ ನೆಲೆಯಲ್ಲಿ ಜನಿಸಿದನೆಂದು ಹೇಳದೆ, ಪ್ರಸಾದ ಮಹಿಮೆಯಿಂದ ಜನಿಸಿದನೆಂದು ಅಲೌಕಿಕ ನೆಲೆಯಲ್ಲಿ ಹೇಳುತ್ತಿರುವುದು. ನಾಗಾಲಾಂಬಿಕೆಯೇ ತನ್ನ ವಚನವೊಂದರಲ್ಲಿ 'ಪ್ರಸಾದದಿಂದುದಯವಾದಾತ ನೀನಲ್ಲವೆ ನೀನಲ್ಲವೆ ಚೆನ್ನಬಸವಯ್ಯ' ಎಂದು ಹೇಳಿರುವುದು (ಸಮಗ್ರ ವಚನ ಸಂಪುಟ - ೫, ಶಿವಶರಣೆಯರ ವಚನಗಳು, ವ. ೧) ಗಮನಿಸಬೇಕಾದ ಸಂಗತಿ.

ಇತ್ತೀಚೆಗೆ 'ಘಟ್ಟಿವಾಳಯ್ಯನ ವಚನ'ಗಳನ್ನು ಓದುತ್ತಿದ್ದಾಗ ಕೆಳಗಿನ ವಚನ ನನ್ನ ಗಮನ ಸೆಳೆಯಿತು (ಸಮಗ್ರ ವಚನ ಸಂಪುಟ - ೭, ಸಂಕೀರ್ಣ ವಚನ ಸಂಪುಟ - ೨, ವ. ೪೫೧) :

ಕರವೂರ ನಿರಹಂಕಾರ - ಸುಜ್ಞಾನಿದೇವಿಯರ

ಬಸುರಲ್ಲಿ ಬಂದರೆನ್ನಬಹುದೆ ಪ್ರಭುದೇವರ ?

ಮಂಡಗೆಯ ಮಾದಿರಾಜ - ಮಾದಲಾಂಬಿಕೆಯಮ್ಮನವರ

ಬಸುರಲ್ಲಿ ಬಂದರೆನ್ನಬಹುದೆ ಬಸವೇಶ್ವರನ ?

ಅಕ್ಕ ನಾಗಲಾಂಬಿಕೆಯಮ್ಮನ ಬಸುರಲ್ಲಿ

ಬಂದರೆನ್ನಬಹುದೆ ಚೆನ್ನಬಸವೇಶ್ವರನ ?

ಮೊರಡಿಯ ಮುದ್ದುಗೌಡ - ಸುಗ್ಗವ್ವೆಯ (ರ)

ಬಸುರಲ್ಲಿ ಬಂದರೆನ್ನಬಹುದೆ ಸಿದ್ಧರಾಮೇಶ್ವರನ ?

ಇವರು ಒಬ್ಬರಿಂದಾದವರಲ್ಲ, ತಮ್ಮಿಂದ ತಾವಾದರು.

ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ (ನಿಲ್ಲು) ಮಾಣು.

ಈ ವಚನದಲ್ಲಿ ಘಟ್ಟಿವಾಳಯ್ಯ, ಪ್ರಭುದೇವ, ಬಸವಣ್ಣ, ಸಿದ್ಧರಾಮೇಶ್ವರ - ಇವರುಗಳ ತಂದೆ - ತಾಯಿಯರ ಹೆಸರನ್ನು ಸ್ಪಷ್ಟವಾಗಿ ಹೇಳಿರುವುದು, ಚೆನ್ನಬಸವಣ್ಣನ ಬಗೆಗೆ ಹೇಳುವಾಗ ತಾಯಿ ಅಕ್ಕನಾಗಲಾಂಬಿಕೆಯಮ್ಮನ ಹೆಸರನ್ನು ಮಾತ್ರ ಹೇಳಿರುವುದು ಲಕ್ಷಿಸಬೇಕಾದ ಸಂಗತಿ. ಈ ವಚನ ಎಷ್ಟು ಮುಖ್ಯವೆಂದರೆ, ಪ್ರಭುದೇವನ ತಂದೆ-ತಾಯಿಯರ ಹೆಸರನ್ನು ಖಚಿರವಾಗಿ ಗುರುತಿಸಿದವನು ಮೊದಲಿಗೆ ಘಟ್ಟಿವಾಳಯ್ಯ (ಈತ ೧೨ನೇ ಶತಮಾನದ ಬಸವ ಸಮಕಾಲೀನ ಶರಣ. ಬಸವಣ್ಣನೇ ತನ್ನ ವಚನವೊಂದರಲ್ಲಿ 'ಕಾಯವಂಚಕನಲ್ಲ, ಜೀವವಂಚಕನಲ್ಲ, ನಿರಂತರ ಸಹಜ ನೋಡಯ್ಯ. ಶಿವನಿಲ್ಲದ ಮಹಾಮಹಿಮನು ಕೂಡಲಸಂಗನ ಶರಣನುಪಮಾತೀತ ನೋಡಯ್ಯಾ' ಎಂದೂ : ಚೆನ್ನಬಸವಣ್ಣನು 'ಕೂಡಲ ಚೆನ್ನಸಂಗಾ ನಿಮ್ಮ ಶರಣ ಘಟ್ಟಿವಾಳಯ್ಯನಲ್ಲದೆ ನೆರೆ ಅರಿವವರಾರೋ ?' ಎಂದೂ: ಸಿದ್ಧರಾಮೇಶ್ವರನು 'ಧೀರನಾದಡೆ ಘಟ್ಟಿವಾಳಯ್ಯನಂತಾಗಬೇಕಯ್ಯಾ' ಎಂದೂ ಮನದುಂಬಿ ಗುಣಗಾನ ಮಾಡಿರುವರು). ಚಾಮರಸ ತನ್ನ ಪ್ರಭುಲಿಂಗಲೀಲೆಯಲ್ಲಿ ಪ್ರಭುದೇವನ ತಂದೆ - ತಾಯಿಯರ ಹೆಸರನ್ನು ಹೇಳುವಾಗ ಘಟ್ಟಿವಾಳಯ್ಯನನ್ನು ಅನುಸರಿಸುವನು. (ಹರಿಹರ 'ಪ್ರಭುದೇವರ ರಗಳೆ'ಯಲ್ಲಿ ಬಲ್ಲಿಪುರದ ನಾಗವಾಸಾಧಿಪತಿಯಪ್ಪ ಸಲ್ಲಲಿತ ನಾಯಕ.....' ಎಂದು ಪ್ರಭುವಿನ ತಂದೆಯ ಹೆಸರನ್ನು ಅವನ ಉದ್ಯೋಗವನ್ನು ಮಾತ್ರ ಹೇಳುವನು. ತಾಯಿಯ ಹೆಸರು ಹೇಳುವಾಗ ನಾಗವಾಸಾಧಿಪತಿಯಪ್ಪ ಸಲ್ಲಲಿತ ನಾಯಕನ ಸತಿ...' ಎಂದಷ್ಟೇ ಹೇಳುವನು.) ಬಸವಣ್ಣನ ತಂದೆ-ತಾಯಿಯರ ಹೆಸರನ್ನು ಈತ ಹೇಳಿದಂತೆಯೆ ಪಾಲ್ಕುರಿಕೆ ಸೋಮನಾಥನು ತನ್ನ ತೆಲುಗು 'ಬಸವಪುರಾಣಮು' ಕೃತಿಯಲ್ಲಿ ಹೇಳುವನು. ಹರಿಹರಕವಿಯೂ ತನ್ನ 'ಬಸವರಾಜದೇವರ ರಗಳೆ'ಯಲ್ಲಿ ಮಾದಿರಾಜ ಮಾದಾಂಬೆ ಎಂದು ಹೇಳುವನು. ಸಿದ್ಧರಾಮೇಶ್ವರನ ತಂದೆ-

ತಾಯಿಯರ ಹೆಸರನ್ನು ಹೇಳಿದವರಲ್ಲಿ ಘಟ್ಟಿವಾಳಯ್ಯನೇ ಮೊದಲಿಗ. ಇವನ ನಂತರ ರಾಘವಾಂ 'ಸಿದ್ಧರಾಮ ಚಾರಿತ್ರ'ದಲ್ಲಿ ಇವೇ ಹೆಸರನ್ನು ಹೇಳುವನು. ೧೨ನೇ ಶತಮಾನದ ಪ್ರಮುಖ ಶರಣರಲ್ಲಿ ಮೂವರ ತಂದೆ-ತಾಯಿಯರ ಹೆಸರನ್ನು ಸ್ಪಷ್ಟವಾಗಿ ಹೇಳಿದಂತೆ ಚೆನ್ನಬಸವಣ್ಣನ ಬಗೆಗೂ ಏಕೆ ಹೇಳಲಿಲ್ಲ? ಚೆನ್ನಬಸವಣ್ಣನ ತಾಯಿಯ ಹೆಸರನ್ನಷ್ಟೇ ಹೇಳಿ ತಂದೆಯ ಹೆಸರನ್ನೇಕೆ ಘಟ್ಟಿವಾಳಯ್ಯ ಪ್ರಸ್ತಾಪಿಸಲಿಲ್ಲ ? ಈ ಪ್ರಶ್ನೆಗೆ ಉತ್ತರಿಸುವುದು ಕಷ್ಟ. ಬಹುಶ ಅವನಿಗೆ ತಿಳಿದಿರಲಿಲ್ಲವೆನ್ನುವುದಷ್ಟೇ ತತ್ಕಾಲಕ್ಕೆ ಸಲ್ಲುವ ಮಾತು.

ಚೆನ್ನಬಸವಣ್ಣನ ಜನನ ವಿಚಾರದಲ್ಲಿ ನಮ್ಮ ಪುರಾಣ ಕವಿಗಳು ಹಾದಿ ತಪ್ಪಿರುವರು ಕಕ್ಕಯ್ಯನ ಪ್ರಸಾದದಿಂದ ಚೆನ್ನ ಬಸವಣ್ಣನ ಜನನವಾಯಿತು ಎಂದು ಹೇಳುವ ಬುದ್ಧಿಗೇಡಿ ಕವಿಗಳ ಬಗೆಗೆ ಏನು ಹೇಳುವುದೊ ತಿಳಿಯದು. ಬಸವಣ್ಣನಿಗಿಂತ ವಯಸ್ಸಿನಲ್ಲಿ ಹಿರಿಯ ಕಕ್ಕಯ್ಯ. ನಾಗಾಯಿ ಕಕ್ಕಯ್ಯನಿಗೆ ಮಗಳ ಸಮಾನ. ಬಸವಣ್ಣನ ಒಕ್ಕುಮಿಕ್ಕ ಪ್ರಸಾದದಿಂ ಚೆನ್ನಬಸವಣ್ಣನ ಜನನವಾಯಿತೆಂಬುದೂ ಅವಿವೇಕದ ಪರಮಾವಧಿ. ಏಕೆಂದರೆ, ನಾಗಾಯಿ ಬಸವಣ್ಣನ ಸೋದರಿ. ಹಾಗೆಯೇ ಶಿವನ ಪ್ರಸಾದದಿಂದ ಬಸವಣ್ಣನ ಜನನವಾಯಿ ತೆಂಬುದೂ ಪುರಾಣಗಳ ಕಟ್ಟುಕಥೆ, ನಗೆಗೇಡಿನ ಸಂಗತಿ. ನಾಗಾಯಿ ಬಸವಣ್ಣನ ನೆರಳಿನಂ ಅವನ ಜೀವನದುದ್ದಕ್ಕೂ ಅನುಸರಿಸಿ ಬಂದವಳು. ಮುಂಜಿಗಟ್ಟುವ ಸಂದರ್ಭದಲ್ಲಿ ಅದನ್ನೊಪ್ಪದ ಬಸವಣ್ಣನು ಗೃಹತ್ಯಜಿಸಿ ಹೊರಟಾಗ ಅವನನ್ನು ಹಿಂಬಾಲಿಸಿ ಹೊರಟವಳು ನಾಗಾಯಿ ಮುಂದೆ ಬಸವಣ್ಣನ ಸಮಾಜೋಧಾರ್ಮಿಕ ಚಳುವಳಿಯಲ್ಲಿ ಬೌದ್ಧಿಕವಾಗಿ ಅವನನ್ನು ಬೆಂಬಲಿಸಿ ಅವನ ಮನೆಯಲ್ಲಿಯೇ ಇದ್ದು ಅವನ ಮನೆಯ ಆಗುಹೋಗುಗಳ ಸಮಸ್ತ ಜವಾಬ್ದಾರಿಯನ್ನು ಹೊತ್ತವಳು ನಾಗಾಯಿ. ಕಕ್ಕಯ್ಯ ವಯಸ್ಸಿನಲ್ಲಿ ಹಿರಿಯನಾಗಿ ಬಸವಣ್ಣನ ಮಹಾಮನೆಯಲ್ಲಿ ನಿಂತು ತಾತ್ತ್ವಿಕ ಚರ್ಚೆಯಲ್ಲಿ ಪಾಲುಗೊಳ್ಳುತ್ತಿದ್ದನು. ಇಲ್ಲಿ ಕಕ್ಕಯ ಹಾಗೂ ಬಸವಣ್ಣನವರ ಪ್ರೀತಿ-ವಾತ್ಸಲ್ಯಗಳ ಜೀವಸತ್ವದಿಂದ ನಾಗಾಯಿ ಹಾಗೂ ಚೆನ್ನ ಬಸವಣ್ಣ ಬೆಳೆದರು ಎಂಬುದು 'ಪ್ರಸಾದ' ಪದದ ಧ್ವನಿತಾರ್ಥ. 'ಪ್ರಸಾದ' ಎನ್ನುವ ಪದ ವೀರಶೈವ ಪಾರಿಭಾಷಿಕ ಪದ. ಇದನ್ನು 'ವಾಚ್ಯ'ವಾಗಿ ತೆಗೆದುಕೊಳ್ಳುವುದು ಅವಿವೇಕವಷ್ಟೇ ಅಲ್ಲ, ವಿಕೃತ ಮನಸ್ಸಿನ ತೀರ್ಮಾನ.

ಈ ಸಂದರ್ಭದಲ್ಲಿ ಘಟ್ಟಿವಾಳಯ್ಯನ ಮೇಲಿನ ವಚನದ 'ಇವರು ಒಬ್ಬರಿಂದಾ ದವರಲ್ಲ, ತಮ್ಮಿಂದ ತಾವಾದರು' ಎಂಬ ಮಾತು ಬಹಳ ಮಹತ್ವದ್ದಾಗುತ್ತದೆ. ಮಹಾತ್ಮರ ತಂದೆ-ತಾಯಿಗಳು ಲೌಕಿಕ ದೃಷ್ಟಿಯಿಂದ ಅನಿವಾರ್ಯವಾದ ಹೆಸರುಗಳು. ಆದರೆ ಮಹಾತ್ಮರ ವ್ಯಕ್ತಿತ್ವವು ಹುಟ್ಟಿನಿಂದ ಸಾಧಿತವಾಗುವುದಿಲ್ಲ ; ಅದು ವ್ಯಕ್ತಿಯ ಸಮಷ್ಟಿ ಚೇತನದ ಪರಿ ಪಕ್ವಾವಸ್ಥೆ. ಈ ವ್ಯಕ್ತಿತ್ವ ಲೌಕಿಕ ತಂದೆ-ತಾಯಿಗಳ ಹೆಸರಿನಿಂದ ಬಂದದ್ದಲ್ಲ, ವ್ಯಕ್ತಿ ಸತತವಾದ ತನ್ನ ಸಾಧನೆ-ಸಿದ್ಧಿಗಳಿಂದ ದಕ್ಕಿಸಿಕೊಂಡದ್ದು.

ವೀರಸಿದ್ಧಾಂತ

ಕೆ. ಶಾರದ

ಪಂಪಭಾರತದಲ್ಲಿ 11-46ನೆಯ ಪದ್ಯದಲ್ಲಿ ಬರುವ 'ವೀರ ಸಿದ್ಧಾಂತ' ಎಂಬ ಪದಕ್ಕೆ ಎಂ.ಎಂ. ಕಲಬುರ್ಗಿಯವರು ಕೊಟ್ಟ ವಿವರಣೆಯನ್ನು ಮತ್ತೊಮ್ಮೆ ಪರಿಶೀಲಿಸಬೇಕಾಗಿದೆ.

ಪಂಪ ಭಾರತದಲ್ಲಿ 11-46ನೆಯ ಪದ್ಯ ಹೀಗಿದೆ.

"ತಿಂತಿಣಿಯಾಗೆ ನಟ್ಟಕಡೆಯೊಳ್ ನೆಲ ಮುಟ್ಟದೆ ಮೆಯ್ಯೊಳತ್ತಮಿ
ತ್ತಂ ತೆಱೆದಿರ್ದ ಪುಣ್ಗಳಿಸವಕ್ಕರದಂತಿರೆ ನೋಡಿ ಕಲ್ಲಿಮೆಂ
ಬಂತೆ ಪೊಲಿರ್ದ ನಟ್ಟವಣೆಕೋಲ್ಗಳ ಮೇಲೆಸೆದಿರ್ದ ವೀರ ಸಿ
ದ್ಧಾಂತದ ಶಾಸನಂ ಬರೆದ ಪೊತ್ತಗೆಯಂತಮರಾಪಗಾತ್ಮಜಂ"

ಈ ಪದ್ಯ ಶರಶಯ್ಯೆಯಲ್ಲಿರುವ ಭೀಷ್ಮನನ್ನು ಚಿತ್ರಿಸುತ್ತದೆ. ಈ ಪದ್ಯದ ಅರ್ಥವನ್ನು ಡಾ|| ಎಂ.ಎಂ. ಕಲುಬುರ್ಗಿಯವರು "ಮೈಯೆಲ್ಲಾ ಅತ್ತಿತ್ತ ಪ್ರಕಟವಾದ ಗಾಯಗಳು ಅಕ್ಷರದಂತೆ ತೋರುತ್ತಿರಲು ನೋಡಿ ಕಲಿಯಿರಿ ಎನ್ನುವ ಹಾಗೆ ಅಟ್ಟವಣೆ ಕೋಲ ಮೇಲಿನ ವೀರ ಸಿದ್ಧಾಂತದ ಶಾಸನವನ್ನು ಬರೆದ ಪುಸ್ತಕದಂತೆ ಗುಂಪುಗುಂಪಾಗಿ ನೆಟ್ಟ ಬಾಣಗಳಿಂದ ನೆಲ ಮುಟ್ಟದೆ ಭೀಷ್ಮನು ಶೋಭಿಸಿದನು" (ಮಾರ್ಗ ಸಂಪುಟ 1 - ಪು : 84) ಎಂದು ವಾಚ್ಯಾರ್ಥವನ್ನು ಹೇಳುತ್ತಾ 'ವೀರಸಿದ್ಧಾಂತ' ಎಂಬ ಪದದ ಅರ್ಥವ್ಯಾಪಿಗೆ ತೊಡಗಿದ್ದಾರೆ.

ಅವರ ಅಭಿಪ್ರಾಯದಂತೆ 'ವೀರಸಿದ್ಧಾಂತ' ಎನ್ನುವ ಪದ ಒಂದರ್ಥದಲ್ಲಿ ವೀರನ ಪುರುಷ ವ್ರತವನ್ನು ಕುರಿತು ಹೇಳಿದರೆ, ಮತ್ತೊಂದು ಅರ್ಥದಲ್ಲಿ 'ವೀರ ಸನ್ಯಾಸಿ'ಯೆಂಬ ವಿಶೇಷ ಅರ್ಥವನ್ನೂ ಒಳಗೊಂಡಿದೆ.

ಆದರೂ ಅವರು 'ವೀರ ಸಿದ್ಧಾಂತ' ಎಂಬ ಪದಕ್ಕೆ ಪಂಪನ ನಂತರ ಬಂದ ಹರಿವಂಶಾಭ್ಯುದಯದಲ್ಲಿ ಬರುವ ಪದ್ಯಗಳ ಹಿನ್ನೆಲೆಯಲ್ಲಿ ತುಳಿಲಸಂದಿಕೆಯ ತತ್ವವನ್ನು 'ವೀರ ಸಿದ್ಧಾಂತ' ಪದಕ್ಕೆ ಅನ್ವಯಿಸಿದ್ದಾರೆ.

ನನ್ನ ಅಭಿಪ್ರಾಯದಲ್ಲಿ ಪಂಪನ ಕಾಲಕ್ಕೆ ಈ ಪದ ಕೇವಲ 'ವೀರ ಸನ್ಯಾಸಿ' ಎಂಬ ಅರ್ಥವನ್ನು ಮಾತ್ರ ಒಳಗೊಂಡಿತ್ತು. ಇಲ್ಲಿಯ ವೀರ ಸಿದ್ಧಾಂತ ಪದ ಅಹಿಂಸೆ. ಸತ್ಯ, ಅಚೌರ್ಯ, ಬ್ರಹ್ಮಚರ್ಯ ಪರಿಗ್ರಹತ್ಯಾಗ... ಹೀಗೆ ಪಂಚ ಮಹಾವ್ರತಗಳನ್ನು ಅಳವಡಿಸಿಕೊಂಡ ಮುನಿಯನ್ನು ಕುರಿತು ಹೇಳಿದರೆ ಮುಂದೆ ಈ ಪದ ಕಲಿತನ, ಅಭಿಮಾನ, ಧರ್ಮ, ತ್ಯಾಗ, ಸತ್ಯ, ಶೌಚಗಳನ್ನು ಹೊಂದಿದ ವೀರನಿಗೂ ಅನ್ವಯವಾಗುತ್ತಾ ಬಂದಿರಬೇಕು.

ಇನ್ನು ಮೇಲಿನ ಪದ್ಯವನ್ನು ಪಂಪನ ಧಾರ್ಮಿಕ ಪರಿಸರದ ಹಿನ್ನೆಲೆಯಲ್ಲಿಟ್ಟು ನೋಡಿದರೆ ಭೀಷ್ಮನ ಸಾವನ್ನು ಕುರಿತು ಹೇಳುವ ಈ ಪದ್ಯ ಸಲ್ಲೇಖನ ವ್ರತಧಾರಿಯಾದ ಒಬ್ಬ ಜೈನಮುನಿಯನ್ನು ನೆನಪಿಗೆ ತರುತ್ತವೆ. ಸಲ್ಲೇಖನ ವ್ರತವನ್ನು ಸ್ವೀಕರಿಸಿದ ಜೈನ ಸನ್ಯಾಸಿ ಸಾವನ್ನು ಅತ್ಯಂತ ಆತ್ಮೀಯವಾಗಿ ಸ್ವಾಗತಿಸುವುದನ್ನು, ಮೃತ್ಯು ಮಹೋತ್ಸವದಲ್ಲಿ ತೊಡಗಿರುವುದನ್ನು ಪಂಪನ ಕಾಲದಲ್ಲಿಯೇ ಬರುವ ಅನೇಕ ಶಾಸನಗಳಲ್ಲಿ ಕಾಣಬಹುದು.

"ಅಭಿಮನ್ಯುವಿನ ಮರಣ ಪ್ರಸಂಗವನ್ನು ನಾವು "ಜಿತೇನ ಲಭ್ಯತೇ ಲಕ್ಷ್ಮೀ.." ಎಂಬ ಪದ್ಯಕ್ಕೆ ಅರ್ಥೈಸಿದರೆ ಕಡುಮಿಂಚಿನ ಸಿಡಿಲುರುಳಿ... ಎಂಬ ವಾಕ್ಯಗಳು ಶಾಸನದ ಪದ್ಯ "ದ್ವಾಮಿಪೌ ಪುರುಷೌ ಲೋಕೇ ಸೂರ್ಯ ಮಂಡಲ ಭೇದಿಸೌ ..." ಎಂಬ ವೀರವಾಣಿಯನ್ನು ನೆನಪಿಗೆ ತರುತ್ತವೆ" (ಡಾ|| ಎಂ.ಎಂ. ಕಲುಬುರ್ಗಿ ಮಾರ್ಗ ಪುಟ 85). ಅದೇ ರೀತಿ ನಾನು ಜೈನ ಮುನಿಗಳ ನಿಷಿಧಿ ಶಾಸನಗಳನ್ನು ಕುರಿತು ಅಭ್ಯಾಸ ಮಾಡುವಂತಹ ಸಂದರ್ಭದಲ್ಲಿ ಪಂಪನ ಧಾರ್ಮಿಕ ಪರಿಸರ ಮತ್ತು 10ನೇ ಶ.ದ ಜೈನ ಪರಿಸರವನ್ನು ದೃಷ್ಟಿಯಲ್ಲಿಟ್ಟುಕೊಂಡರೆ ಸಲ್ಲೇಖನಾ ವ್ರತಧಾರಿಯಾದ ಜೈನಮುನಿಯನ್ನು ನೆನಪಿಗೆ ತರುತ್ತಾನೆ. ಶರಶಯ್ಯೆಯಲ್ಲಿರುವ ಭೀಷ್ಮ Waiting for death ಎನ್ನುವುದಕ್ಕಿಂತ Inviting ಎಂಬುದು ಹೆಚ್ಚು ಸಮಂಜಸ.

ಒಬ್ಬ ಜೈನ ಸನ್ಯಾಸಿಯಲ್ಲಿ ಕಡ್ಡಾಯವಾಗಿ ಇರಲೇಬೇಕಾದ ಸತ್ಯ, ತ್ಯಾಗ, ಬ್ರಹ್ಮಚರ್ಯ, ಅಹಿಂಸೆ, ಅಪರಿಗ್ರಹ ಮುಂತಾದ ಎಲ್ಲ ಗುಣಗಳನ್ನೂ ಅಳವಡಿಸಿಕೊಂಡವನು ಭೀಷ್ಮ. ಆದರಲ್ಲಿಯೂ ಆತನ ಶುಚಿತ್ವವನ್ನು, ಬ್ರಹ್ಮಚರ್ಯವನ್ನು ಕುರಿತು ಹೇಳುವ ಈ ಪದ್ಯ

"ನಡೆದುದು ಬಾಳ ಕಾಲದೊಳೆ ತೊಟ್ಟನಗಂತದ ಶೌಚಮೀಗಳೋ
ಗಡಿಪುದೆ ಮುಟ್ಟಿ ನಾಂ ನೆಲನನೇತದದು ಪಣ್ಗಡಿಮೆಂದು ಮೈಯ್ಯೊಳ
ಟ್ಟಡಿದ ವಿಕರ್ಣಕೋಟಿಯೊಳಣಂ ನೆಲಮುಟ್ಟದೆ ನೋಡೆ ಬಿಟ್ಟೊಡಂ
ಬಡಿಸಿದನಯ್ಯ ಶೌಚಗುಣದುನ್ನತಿಯಂ ಸುರಸಿಂಧುನಂದನಂ (11-47)

ಎಂಬ ಪದ್ಯ 'ವೀರ ಸಿದ್ಧಾಂತ' ಭೀಷ್ಮನ ಮುನಿಧರ್ಮವನ್ನು ಸೊಗಸಾಗಿ ಹಿಡಿದಿಟ್ಟಿದೆ. ಈ ಎಲ್ಲ ಗುಣಗಳಿಂದಲೇ "ಅತ್ಯುನ್ನತಿಯೊಳ್ ಅಮರ ಸಿಂಧೂದ್ಭವಂ" ಎನಿಸಿಕೊಂಡು "ನೆಗಳ್ದಜಿತ ಸೇನಾಚಾರ್ಯರ ಗುಣಾವಳಿಯಂತೆ" ದೀಕ್ಷೆ ತೆಗೆದುಕೊಂಡ ಒಬ್ಬ ಸನ್ಯಾಸಿಯಂತೆಯೇ ಕೊನೆಯವರೆಗೂ ಬಾಳಿದವನು. ಅಷ್ಟೇ ಅಲ್ಲ. ಸಾವಿಗಾಗಿ ಕಾಯುತ್ತಾ ಧರ್ಮ ಚಿಂತನೆಯಲ್ಲಿ, ಆತ್ಮವಿಮರ್ಶೆಯಲ್ಲಿ ತೊಡಗಿದ ಭೀಷ್ಮ ಖಂಡಿತವಾಗಿ ಒಬ್ಬ ಜೈನ ಮುನಿಯನ್ನು ತಟ್ಟನೆ ನೆನಪಿಗೆ ತರುತ್ತಾನೆ.

ಅಷ್ಟೇ ಅಲ್ಲದೆ

"ಅಟ್ಟವಣೆ ತೋಲ್ಗಳ ಮೇಲೆಸೆದಿರ್ದ ವೀರ ಸಿದ್ಧಾಂತದ ಶಾಸನಂ ಬರೆದ ಪೊತ್ತಗೆ ಯಂತೆ....." ಎನ್ನುವ ವಾಕ್ಯಗಳನ್ನು ಓದಿದಾಗ ವ್ಯಾಸಪೀಠ, ಪೀಠದ ಮೇಲಿರುವ ಸಿದ್ಧಾಂತದ ಹೊತ್ತಿಗೆ ಮತ್ತು ಸಾವನ್ನು ಆಹ್ವಾನಿಸುತ್ತಿರುವ ಭೀಷ್ಮ.... ಈ ಸಂದರ್ಭ ಒಂದು ನಿಷಿಧಿ ಗಲ್ಲಿನ ಶಿಲ್ಪವನ್ನು ನೆನಪಿಗೆ ತರುತ್ತದೆ.

ಇನ್ನು 'ವೀರ ಸಿದ್ಧಾಂತದ ಶಾಸನ' 'ವೀರ ಸಿದ್ಧಾಂತ' ಎಂಬ ಪದಗಳು ಹೆಚ್ಚಾಗಿ ಜೈನ ಪಾರಿಭಾಷಿಕ ಪದಗಳಾಗಿವೆ. 'ಸಿದ್ಧಾಂತ', 'ಸಿದ್ಧಾಂತಿ', 'ವೀರ ಸಿದ್ಧಾಂತಿ', 'ಸೈದ್ಧಾಂತಿಕ' ಎನ್ನುವ ಪದಗಳು ಜಿನವಾಣಿಗೆ ಸಂಬಂಧಿಸಿದ 'ಜೈನಧರ್ಮ' ಎಂಬ ಅರ್ಥವನ್ನು ಹೊರಡಿಸುವ ಪದಗಳಾಗಿದ್ದವು. 'ಶ್ರೀಮತ್ ಪರಮ ಗಂಭೀರ ...... ,ಎಂಬ ಶ್ಲೋಕದಲ್ಲಿ 'ಶಾಸನಂ ಜಿನಶಾಸನಂ' ಎನ್ನುವಲ್ಲಿ ಶಾಸನ ಎಂಬುದಕ್ಕೆ ಧರ್ಮ ಎಂಬ ಅರ್ಥವನ್ನು ಕೊಡಲಾಗಿದೆ. ಹಾಗೆಯೇ 'ಸಿದ್ಧಾಂತ' ಎಂಬ ಪದವೂ ಶಾಸನಗಳಲ್ಲಿ ವಿಶಾಲವಾದ ಅರ್ಥದಲ್ಲಿ ಎಲ್ಲ ಧರ್ಮ ಗಳಿಗೆ ಅನ್ವಯಿಸಿದರೂ ವಿಶೇಷತಃ ಜೈನಧರ್ಮ ಎಂಬ ಅರ್ಥದಲ್ಲಿಯೇ ಬಳಕೆಗೊಂಡಿದೆ. ಉದಾ : ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿ, ಶ್ರೀ ಮಾಘನಂದಿ ಸಿದ್ಧಾಂತ ಚಕ್ರವರ್ತಿ, ಶ್ರೀ ಮೇಘಚಂದ್ರ ಸಿದ್ಧಾಂತ ದೇವರು, ಪಂಪನೇ ಹೊಗಳಿದ ಮಲಧಾರಿ ಸಿದ್ಧಾಂತ ಮುನೀಶ್ವರ, ಶ್ರೀ ಅಭಯ ಚಂದ್ರ ಸೈದ್ಧಾಂತಿಕ ದೇವರು, ಶ್ರೀ ಅಭಯಸೂರಿ ಸಿದ್ಧಾಂತ ಚಕ್ರವರ್ತಿ, ದೇವೇಂದ್ರ ಸೈದ್ಧಾಂತಿಕ ದೇವರು, ಶುಭಚಂದ್ರ ಸಿದ್ಧಾಂತ, ಸಿದ್ಧಾಂತ ಚಕ್ರವರ್ತಿ ನಯಕೀರ್ತಿ... ಹೀಗೆ ಅನೇಕ ಮುನಿಗಳ ಹೆಸರಿನ ಜೊತೆ ವಿಶೇಷಣದ ರೂಪದಲ್ಲಿ ಶಾಸನಗಳಲ್ಲಿ ಬಹಳಷ್ಟು ಕಡೆ ಈ ಪದ ಕಂಡು ಬರುತ್ತದೆ (ತ್ರೈವಿದ್ಯ ಚಕ್ರವರ್ತಿಗಳೆಂದು ಜೈನಮುನಿಗಳನ್ನು ಹೊಗಳು ವಲ್ಲಿ ತರ್ಕ, ವ್ಯಾಕರಣ ಮತ್ತು ಸಿದ್ಧಾಂತ ಈ ಮೂರು ವಿಷಯಗಳಲ್ಲಿ ಪರಿಣತರಾದವರಿಗೆ ಹೇಳಲಾಗುತ್ತದೆ. ಇಲ್ಲಿ ಸಿದ್ಧಾಂತ ಎಂಬ ಪದವನ್ನು ಗಮನಿಸಬೇಕು).

ಶುಭಚಂದ್ರರನ್ನು ಕುರಿತು ಶ್ರ.ಬೆ. ಶಾಸನವೊಂದು (ಶುಭಚಂದ್ರ ಸ್ಮಾರಕ ಶಾಸನ 135 (117). ಕ್ರಿ.ಶ. 1123) ಸಿದ್ಧಾಂತ ಸಾಗರಕ್ಕೆ ಪೂರ್ಣಚಂದ್ರರೆನ್ನುತ್ತಾ ಜೈನ ಸಿದ್ಧಾಂತ ಸಾಗರ, ಸಿದ್ಧಾಂತ ಶಿರೋಮಣಿ ಎಂದೆಲ್ಲಾ ಹೊಗಳಿದೆ. ಮೇಘ ಚಂದ್ರ ತ್ರೈವಿದ್ಯರ ಶಿಷ್ಯರಾದ ಪ್ರಭಾಚಂದ್ರಮುನಿಗಳು ಪ್ರಭಾಚಂದ್ರ ಸಿದ್ಧಾಂತ ದೇವರ ಸ್ಮಾರಕ (173 (140) ಕ್ರಿ.ಶ. 1145) ದೋಷರಹಿತವಾದ ನಡತೆಯಿಂದಾಗಿ ಸಿದ್ಧಾಂತ ಸಾಗರವು ಭರತವೆದ್ದಿತು ಎಂದು ಹೊಗಳುತ್ತದೆ. ಹಾಗೆಯೇ ಮೇಘಚಂದ್ರ ತ್ರೈವಿದ್ಯರಶಾಸನ (156 (127) ಕ್ರಿ.ಶ. 1115) ಅಭಯನಂದಿ ಮುನಿಗಳನ್ನು ಸಿದ್ಧಾಂತ ಮಹಾಸಾಗರ ಪರಿಪೂರ್ಣಚಂದ್ರರೆಂದು ಬಣ್ಣಿಸಿದೆ.

ಹೀಗೆ 'ಸಿದ್ಧಾಂತ' ಎಂಬ ಪದಕ್ಕೆ ವಿಶೇಷತಃ ಜೈನಧರ್ಮ ಎಂಬ ಅರ್ಥ ಬರುವಂತಹ ವಾಕ್ಯಗಳು ಶಾಸನಗಳಲ್ಲಿ ಹೇರಳವಾಗಿ ಸಿಗುತ್ತವೆ. ಜೈನರಲ್ಲಿ 'ವೀರ ಶಾಸನ ಜಯಂತಿ" ಎಂಬ ಒಂದು ಹಬ್ಬವನ್ನು ಆಚರಿಸುತ್ತಾರೆ. ಮಹಾವೀರನಿಗೆ ಸರ್ವಜ್ಞತ್ವವು ಬಂದ ಮೇಲೆ ಅವರ ಪ್ರಥಮ ಧರ್ಮೋಪದೇಶವು ರಾಜಗೃಹದಲ್ಲಿ ನಡೆದ ಸ್ಮರಣಾರ್ಥವಾಗಿ ಈ ಹಬ್ಬವನ್ನು ಆಚರಿಸಲಾಗುತ್ತದೆ.

ಹೀಗೆ 'ಸಿದ್ಧಾಂತ' ಎಂಬ ಪದಕ್ಕೆ ಜೈನಧರ್ಮ ಎಂಬ ಅರ್ಥವನ್ನು ಕೊಟ್ಟರೆ ವೀರ ಸಿದ್ಧಾಂತ ಎಂಬುದಕ್ಕೆ 'ವೀರ ಸನ್ಯಾಸಿ' 'ಜೈನಮುನಿ' ಎಂಬ ಅರ್ಥವನ್ನು ಅನ್ವಯಿಸಬಹುದು. - ಬಹುಶಃ ಮುಂದೆ ಬಂಧುವರ್ಮನ ಕಾಲಕ್ಕೆ ಈ ಪದ ವಿಶಾಲವಾದ ಅರ್ಥವನ್ನು ಪಡೆದು ಕೊಂಡಿರಬಹುದಲ್ಲವೆ ?

ಕೊನೆಯದಾಗಿ "ಮಹಾಭಾರತದ ಪಾತ್ರಗಳನ್ನು ಅರ್ಥೈಸಿಕೊಂಡ ಪಂಪನ ಹಿಂದೂ ದೃಷ್ಟಿ ಬಂಧುವರ್ಮನ ಜೈನದೃಷ್ಟಿಗಳು ಇಲ್ಲಿ ತುಂಬಾ ವ್ಯತ್ಯಾಸಯುತವೂ ಗಮನಾರ್ಹವೂ ಎನಿಸಿವೆ" ಎನ್ನುವ ಡಾ|| ಎಂ.ಎಂ. ಕಲುಬುರ್ಗಿಯವರ ಮಾತುಗಳನ್ನು ಸ್ವಲ್ಪ ಗಮನಿಸಬೇಕು.

ಪಂಪ ಸಂಪೂರ್ಣ ಜೈನದೃಷ್ಟಿ ಕೋನದಲ್ಲಿಯೇ ಭೀಷ್ಮನ ಸಾವನ್ನು ಚಿತ್ರಿಸಿದ್ದಾನೆ. ಪಂಪ ಮಹಾಭಾರತದಲ್ಲಿ ಎಲ್ಲ ಪಾತ್ರಗಳ ಸಾವನ್ನು ಅವು ನಂಬಿದ ಮೌಲ್ಯಗಳು, ಅವುಗಳ ಜೀವನಾದರ್ಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ಚಿತ್ರಿಸಿದ್ದಾನೆ. ಸಾವಿನಲ್ಲಿಯೂ ಮೌಲ್ಯಗಳನ್ನು ತೊಡಿಸಿ ಪಾತ್ರಧಾರಿಗಳ ಸಾವನ್ನು ಇನ್ನೂ ವೈಭವೀಕರಿಸಿದ್ದು ಪಂಪನ ಘನತೆ.

ಈ ಸಂಚಿಕೆಯ ಲೇಖಕರ ವಿಳಾಸಗಳು

1. ಕೆ.ಆರ್. ದುರ್ಗಾದಾಸ್
ಕನ್ನಡ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಬೆಳಗಾವಿ ಆವರಣ
ಬೆಳಗಾವಿ

2. ಬಸವರಾಜ ಡೋಣೂರ್
ಉಪನ್ಯಾಸಕರು
ಇಂಗ್ಲಿಷ್ ವಿಭಾಗ
ಕರ್ನಾಟಕ ಆರ್ಟ್ಸ್ ಕಾಲೇಜು
ಧಾರವಾಡ - 580 001

3. ಎಂ. ರಾಮಕೃಷ್ಣಯ್ಯ
ಸಂಶೋಧನಾ ವಿದ್ಯಾರ್ಥಿ
ಕನ್ನಡ ವಿಭಾಗ
ಬೆಂ.ವಿ.ವಿ.

4. ಡಾ||ಸಿ.ನಾಗಭೂಷಣ
ಕನ್ನಡ ಅಧ್ಯಯನ ವಿಜ್ಞಾನ
ಸ್ನಾತಕೋತ್ತರ ಕೇಂದ್ರ
ಕೃಷ್ಣದೇವರಾಯನಗರ
ಸಂಡೂರು ತಾಲ್ಲೂಕು,
ಬಳ್ಳಾರಿ ಜಿಲ್ಲೆ - 583 119

5. ಡಾ||ಜಿ.ಎಸ್. ಮೋಹನ್
ತೆಲುಗು ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

6. ಶ್ರೀ ಕೆಳದಿ ಗುಂಡಾ ಜೋಯಿಸ್
ಹಿರಿಯ ಸಂಶೋಧಕರು
ಭಾರತ ಸರಕಾರ
ಅಂಚೆ ಕೆಳದಿ - 577 401
ಸಿವರ ಶಿವಮೊಗ್ಗ ಜಿಲ್ಲೆ

7. ಎಸ್. ಶಿವಣ್ಣ
138, 7ನೇ 'ಸಿ' ಮೇನ್
ವಿಜಯನಗರ ಎರಡನೆ ಹಂತ
ಬೆಂಗಳೂರು - 560 040

8. ಡಾ||ಬಸವರಾಜ ಕಲ್ಗುಡಿ
ಅಧ್ಯಾಪಕರು
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು - 560 006

9. ಡಾ|| ಎಸ್. ವಿದ್ಯಾಶಂಕರ್
ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

10. ಶ್ರೀಮತಿ ಕೆ.ಶಾರದ
ಅಧ್ಯಾಪಕರು
ಸ್ನಾತಕೋತ್ತರ ಕೇಂದ್ರ
ಕೃಷ್ಣದೇವರಾಯನಗರ
ಸಂಡೂರು, ಬಳ್ಳಾರಿ

ವಿವರಗಳಿಗೆ ವ್ಯವಹರಿಸಿ :

ನಿರ್ದೇಶಕರು
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560 056